4

9697

A-34

# ನಳಚರಿತ್ರೆ.

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

O,33.181 KAN
H M93
34

Digitized by ROJA MUTHIAH RESEARCH LIBRARY

9697

ಪರಾಮರ್ಶನ ಗ್ರಂಥ

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಕನ್ನಡ ಸಾಹಿತ್ಯ ಪರಿಷತ್ತು,
ಸರಸ್ವತೀ ಭಂಡಾರ
ಬೆಂಗಳೂರು-೧೮.

Digitized by ROJA MUTHIAH RESEARCH LIBRARY

9697

ಶ್ರೀಃ

ಭಾಮಿನಿ ಷಟ್ಪದಿ.

# ನಳಚರಿತ್ರೆ.

ಬಹುಪ್ರತಿಗಳ ಸಹಾಯದೊಡನೆ

ಪಂಡಿತರಿಂದ ಪರಿಶೋಧಿಸಲ್ಪಟ್ಟು

ಎಸ್. ವಿಟ್ಠಲರಾಯರಿಗೋಸ್ಕರ,

ಆರನೇ ಛಾಪೆ

ಮೈಸೂರು.

ಸ್ವಕೀಯ ಲಕ್ಷ್ಮೀನರಸಿಂಹ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

Digitized by ROJA MUTHIAH RESEARCH LIBRARY

ಕನ್ನಡ ಸಂಶೋಧನ ವಿಭಾಗ
ಕ್ರಮ O,33,181 KAM H M93
ಕ್ರ. ಸಂಖ್ಯೆ 9697 ಪು. ಸಂಖ್ಯೆ ...
ದಿನಾಂಕ ...



ಕ್ರಮ 34.

ಭಟ್ಟಿ ವಿಕ್ರಮಾದಿತ್ಯರಾಯನ ಕಥೆ. ಇದು ಸುಮಾರು ಮುನ್ನೂರು ಫಾರಂಗಳಾಗಬಹುದು. ಈಗ ೧—೨ ನೇ ಸಂಪುಟಗಳು ಪ್ರಿಂಟಾಗಿ ಬಿಕರಿಗೆ ಸಿದ್ಧವಾಗಿದೆ. ೨ ನೇ ಸಂಪುಟವಾದ ಬೃಹತ್ಕಥಾಮಂಜರಿಯಲ್ಲಿ ನಾಲ್ಕು ಜನ ಹುಚ್ಚು ಮುಂಡಗಳ ಕಥೆ, ಪರಿಚಾರಕನ ಕಥೆ, ನಾಪಿತನ ಕಥೆ, ಇನ್ನು ಅನೇಕ ನೂತನವಾದ ಕಥೆಗಳು ಸೇರಿದೆ. ಅಲ್ಲದೆ ೩ ನೇ ಸಂಪುಟವು ಅತಿ ಜಾಗ್ರತೆಯಾಗಿ ಪ್ರಿಂಟುಮಾಡುತ್ತೇವೆ.

ಬೇಕಾದವರು ಮೈಸೂರು ಲಕ್ಷ್ಮೀ ನರಸಿಂಹ ಮುದ್ರಾಶಾಲೆಗೆ ಬರೆದು ತರಿಸಿಕೊಳ್ಳಬಹುದು.

ಶ್ರೀ

9697

# ನಳಚರಿತ್ರೆ

## ಭಾಮಿನಿಷಟ್ಪದಿ

ಶ್ರೀರಮಣಸರಸಿಜದಳಾಕ್ಷನು । ಧಾರಿಣಿಚರಾಚರಭರಿತಮುರಿ । ಪಾವನಿತ್ಯಾನಂದನಿರ್ಜರನಿಕರಪಾತ್ರಾರ ॥ ವಾರಿಜಾಂಬಕವರಗುಣತ್ರಯ । ಮಾರಪಿತವೇದಾಂತನುತವರ । ಪೌರಚನ್ನಿಗರಾಯಪಾಲಿಸುಯಾನಗಸತ್ಕೃಪೆಯು ॥೧॥

ಶರಧಿಶಯನನಮುಕುಂದಕಂಸಾ । ಸುರಮಥನಸುರಮೌಳಿವಂದಿತ । ಗಿರಿಧರಾಚ್ಯುತವೇಣುನಾದವಿನೋದಭವದೂರ ॥ ಸರಸಿಜೋದ್ಭವನಮಿತವಯಸಾ । ಗರಮದಾಂತಕದೇವವರಪುರ । ವರಸಚನ್ನಿಗರಾಯಪಾಲಿಸುಸಕಲಸಜ್ಜನರ ... ... ... ... ॥೨॥

ಉರಗರಿಪುಕೇತನವಿಭೀಷಣ । ವರದಕರಿಸಪ್ತ್ರಪ್ರೋಷಣ । ದುರಿತಕುಲಾರಿವಜ್ರನರಕಾಂತಕ ಮಹಾಮಹಿಮ ॥ ಪರಮಪುರುಷಯಶೋದೆಯಾತ್ಮಜ । ದುರಿತದುಃಖವಿನಾಶವರಪುರ । ದರಸುಚನ್ನಿಗರಾಯರಕ್ಷಿಸುನಮ್ಮನನವರತ ... ... ... ॥೩॥

ಕರಿವದನಹೇರಂಬಲಂಬೋ । ದರಚತುರ್ಭುಜಮೋದಕಪ್ರಿಯ । ಪರಶುಪಾಶಾಂಕುಶಕರಾಂಕಿತಡಿಂದರಂಜಿಸುವ ॥ ಸುರನರೋರಗನಮಿತಗೌರೀವರಕುಮಾರಕವಿದ್ಯವಾರುಧಿ । ವರಗಣಪತಿಪಾಲಿಸೆನ್ನಯಮತಿಗೆಮಂಗಳವ ॥೪॥

ನಾರಿನಳನಸುಳಾಕ್ಷಿವರರಂ । ಭಾರಿನುತಚತುರಾನನಪ್ರಿಯೆ । ಭೂರಿಗುಣಗಣಭರಿತಭಕ್ತಶ್ರೇಜನೋದ್ಧಾರಿ ॥ ಸಾರನಿಗಮವಿಚಾರದಕ್ಷನಸ್ಯಂ । ಗಾರಬಜಕರಿಗೊರವನೀವವು । ದಾರಿಕಾಂಡನಲಿದೊಲಿದುಸಲಹನ್ನಜಿಂಹೆಯಲಿ ॥೫॥

ರಾಯರೊಳಗಗ್ಗಳಿಯನಹಕೌ । ಶೇಯನಿಗರೋಪಶಮಹಾಮನಿ ರಾಯನಿಸ್ತರಿಸಿದನುನಳಭೂವರನಚರಿತೆಯನು ॥ ಪ್ರಿಯದಿಂದಾಲಿಪ್ಪದುಸುಜನರು । ಶ್ರೀಯರಸವರಪುರದಚನ್ನಿಗ । ರಾಯಸಂಕಿತಮಾಗಿಪೇಳ್ವೆನೀ ಮಹಾಕಥೆಯ ... ... ... ॥೬॥

Digitized by ROJA MUTHIAH RESEARCH LIBRARY

ಪರಮಪುಣ್ಯಚರಿತ್ರೆಯಿದನಾ | ದರಿಸಿಕೇಳುವನರರಜನ್ಮಂ | ತರದ
ಘನದುಷ್ಕರ್ಮದುಃಖವಿನಾಶದುರಿತಹರ ॥ ಕರಿತುರಗರಥಸಿಚಯಛತ್ರದ | ಶಿ
ರಿಯುಸಂಪತ್ತಾಯುಷವನುವರ | ಹರನುಮನ್ನಿಸಿಕೊಡುವಸುಜನರಿಗಷ್ಟ
ಸಂಪದವ ... ... ... ... ॥೭॥

ಜನಪಕುರುಭೂಪಾಲನೊಳುಹಾ | ಜನಲಿರಾಜ್ಯವನೋತುದ್ಯೂತದಸಂ
ದನನುತನ್ನನುಜಾತರೊಗ್ಗಿಲಿಸತ್ಯವನುಬಿಡದೆ ॥ ವನಿತೆಧೌಮ್ಯಮುನೀಂದ್ರ
ಮಂತ್ರೀ | ಜನಸಹಿತನಡೆತಂದುಕಾಮ್ಯಕ | ವನದೊಳಗೆಸಂಚರಿಸುತಿರ್ದನು
ತೀರ್ಥಯಾತ್ರೆಯಲಿ ... ... ... ॥೮॥

ಧರಣಿಪತಿಚಿಂತಿಸುತಹಲುಬಿದ | ನರನಕಾದನೇನೆಂದುತವದಲಿ | ಮರೆದು
ಕಳೆದನೊನಮ್ಮನಿನಿಬರಲೆಸುತಲಿರಲಂದು ॥ ಸುರಪಕಳುಹಿದರೋಮಶನಮುನಿ
ವರರಗಡಣದೊಳೈದಿದನುಭೂ | ಸುರಸಮಾಜದೊಳಂದುಕಾಮ್ಯಕವನಕಡೆ
ತಂದ ... ... ... ... ॥೯॥

ಚವನಗೌತಮಕಪಿಲಭೃಗುಭಾ | ರ್ಗವಭರದ್ವಾಜಾತ್ರಿ ಕೌಶಿಕ | ಕಪ
ನಭಕ್ಷಣವಾಮದೇವಮರೀಚಿವೃತ್ತರೆಯಾ ॥ ಶ್ರವಣಶೃಂಗಿಗಾಲವಾ |
ಲವಪರಾಶರವಾಲ್ಯವಮುನಿವರ | ನಿವಹನೊಡನೈತಂದನಾರೋಮಶಮಹಾಮು
ನಿಪ ... ... ... ... ॥೧೦॥

ಅರಸನನುಜರುಸಹಿತಮುನಿಪು | ಬ್ಯರನುಕಂಡಿದಿರೆದ್ದುಬಂದೊ |
ಳರಗಿಬಿಜಯಂಗೈಸಿತಂದರುತಳಿರಮಂಟಪಕೆ ॥ ವರಮುನೀಂದ್ರರಿಗರ್ಘ್ಯಪಾ
ದ್ಯೋ | ತ್ಕರದೊಳುಪಚರಿಸುತ್ತದರ್ಭಾ | ಸ್ತರಣದಲಿಕುಳ್ಳಿರಿಸಿನುಡಿದರು
ಭರಿತಭಕ್ತಿಯಲಿ ... ... ... ॥೧೧॥

ನೀವಘಾಳತದದೇವರುಷಿಗಳು | ಪಾವನರುಮಾಲೋಕತಿಸಂ | ಭಾ
ವನೀಯರುಸತ್ಯಸಂಧರುನಿರ್ಮಲಾತ್ಮಕರು ॥ ಆವನಿಪನುದಿಮ್ಮಮಹಿಮೆಯು
ಭಾವಿಸುವಡೆನಗಳವನಿಮ್ಮಡ| ದಾವಲಂಬನಸೆ ಪದೊರಕಿತುಧನ್ಯರಾವದ ॥೧೨॥

ಧರಣಿಪತಿಸುಕ್ಷೇಮವೇನಿಜ | ತರುಣನಿನ್ನನುಜಾತತನಯರು | ಪರಸ
ಚಿವಸೌಮಂತ್ರಧೌಮ್ಯಮುನೀಂದ್ರಮಂತ್ರಿಗಳು ॥ ಹರಿಣತರೆಪೇಳೆನಲುನಿಮ್ಮ
ಯ | ಪರಮಕರುಣಾಮೃತವನಮ್ಮನು | ಪೊರೆವುತಿರೆಸುಕ್ಷೇಮಬೇರಿಲ್ಲೆಂ
ದನಾನೃಪತಿ ... ... ... ... ॥೧೩॥

ಧಾರುಣಿಯುಸೆಳಲುತ್ತನುಜರು | ನಾರಿಜಾನಸಹಿತಬಂದೀ | ಘೋರ



9697

ಕಾನನದೊಳಗೆಗಿಂಗಹರದಮಧ್ಯದಲಿ | ನೆರಿತಚಿತ್ತರಾಗಿಬಳಲಿದ | ರಾಧ
ರೆವೊಳಗನ್ನಪ್ರೋಪ್ತ | ದೂರಮುನಿಕೇಳುತೀಕಡೆ ಕೇಳೆಂದರೆಸಬಿಸುಗುಂದ್ರ ॥

ಎತಿನುಹೀನತನೀನಿತುತ್ರಂ | ಮಳಸಲೀಕರಸುಗಳುಪ್ರರ್ವದ | ನಳ
ಹರಿಶ್ಚಂದ್ರಾದಿಗಳವನೃಪರುಹಳುಮಲಿ ॥ ಲಸೆಯನುತಪಗಲಿಪ್ಪವ | ಬ
ಳಸಿದಂತವರಂತನಿನಗುಪ | ಟಳಗಳಂಟೆಬರಿದೆಮನನೋಯಿಸಿರನೀನೆಂದ ॥

ಪರಮಯುಷಿಗಳಸೆರವಿಯೋಸಭೆ | ಹರಿಯಕಾರುಣ್ಯಂಬುಧಿಯೆಶಿರಿ
ನವೃಕೋದರಪಾದಿ ತನಯರುನಿನಗೆಬಾಹುಬಲ ॥ ತರುಣಿಯೋಭೋಗ್ಯೈಕ
ಸಂಪ | ತ್ತುರುತರದಪನರಾಜ್ಯನಿನಗಿಂ | ತಿರಲುಸರಿಯಾರರಸಚಿಂತಿಸಲೇಕೆ
ನೀನೆಂದ ... ... ... ॥೧೬॥

ಆವಸೆಲಿಮುನಿನಾಥನಳನೃಪ | ಮೇದಿನಿಯನುಳಿದನೃತನ್ನತ | ಳೋ
ದರಿಯುಗಲಿನುತಮಾಚಾರವೆನೆಯಿಂದ ॥ ಸಾಧಿಸಿದನವಸಿಯನುಧರೆಯಂ | ತಾ
ಮದನಳನೃಪಗೆನಿನಿದ | ನಾದರಿಸಿಹೇಳೆನಲುನಗುತಿಂತೆಂದನಾಮುನಿಪ ॥೧೭॥

ಭೂತಳೇಂದ್ರರೊಳಧಿಬಲವಿ | ಖ್ಯಾತನವಹನಳಚಕ್ರವರ್ತಿಧ | ರಾ
ತಳವಪಾಲಿಸಿದ ನಾತನವಿಮಲಚರಿತೆಯನು ॥ ಸೂತಮುನಿ ಹೇಳದನುವಗ್ರಾ
ನಿ | ವಾತ್ರದಲ್ಲಿಯುಗಸ್ತ್ಯಮುನಿಸಂ | ಪ್ರೀತಿಯಿಂದರುಹಿದನುರಘುನಂದನನೊ
ಳೀಕಥೆಯ ... ... ... ॥೧೮॥

ವಸುಧೆಪತಿಕೇಳೀಚರಿತ್ರೆಯ | ನಿಷಧದೇಂತೆಂಬಮಹಾಪುರ | ಮೆಗದು
ದಗಣಿತಗೋಪುರವಪ್ರಾಕಾರಶಿಖರದಲಿ ॥ ಮಿಸುನಿರತ್ನಪ್ರಭೆಗಳಲಿರಂ | ಜಿಸುವ
ದೇವಾಲಯಗಳರ್ಪ್ಪ | ವಸುಧೆಗಚ್ಚರಿಯಾನಿಸಿತಾಪುರವರಸಕೇಳೆಂದ ॥೧೯॥

ಮುರಿಮುರಿವಕೆತ್ತೆಳದಸಾಲಿನ | ಪರುಷವದಹುಲಿಮುಖದಬಾಗಿಲ |
ನಿರುಪಮಾಣಿವಜ್ರದಕವಾಟದಗಂಧವಟ್ಟಿಗೆಯ ॥ ಉರುತರದವೇದಿಕೆಯಹೇಮಾ
ದಿ | ಮೆರೆವಸೋಪಾನಗಳನೆಲೆಯು | ಪ್ಪರಿಕೆಗಳಮೇಲೆಸೆವಕಲಶದಕಾಂತಿರಂ
ಜಿಸಿತು ... ... ... ... ॥೨೦॥

ಮುಗಿಲುತುಡುಕುವತೆನೆಯನಾಳ್ವೇ | ರಿಗಳಮಾತಾಳಗಳಪಾತದ | ಯು
ಗಳಬಳಸಿದಕೋಟೆಸುತ್ತಾವರಿಸಿಮುನ್ನತದ ॥ ಗಗನವೀದಿಯತಾರಕಿಯವ್ರೋ |
ಳೆಸ್ಸಗೆಯಿಸುವಕನ್ನಡಿಯಸಾಲ್ಬೊಂ | ಬೆಗಳರತ್ನಪ್ರಭೆಗಳಲಿರಜಿಸಿದುದಾ
ನಗರ ... ... ... ... ॥೨೧॥

ರವಿಶಶಿಮಾನೀಧಿಗಳಹೋಮದ | ವಿವಿಧಮಣಿಬಿತ್ತಿಗಳಕಾಂತಿಯು | ದಿವ

ಜನಪದ ದುರ್ಗನಿಚಯದಭದ್ರ ಭವನಕೆಯ ॥ ಯುವತಿಯರ ಸಂಗೀತವೀಣಾ |
ರವವರಪಿಯಲಿ ಮನೆಕೆಸೆಪಿದೋ | ರುಪಮಹಾರಚನೆಯಲಿ ಮಿಗೆಮಡಿಸಿ ನಿಷಧವರ
ನಗರ ... ... ... ... ॥೧೨॥

ವಸುಧೆಯ ದಾರಿರುಕ್ಷತ್ರಿಯರುಗಂ | ಜೆಸುವ ವೈಶ್ಯಚತುರ್ಥರುನ್ನತ |
ಕುಶಲವಿದ್ಯಾಧರರು ಕವಿಗಳು ಮಲ್ಲಗಾಯಕರು ॥ ಅಸಮರಥಿಕರು ಸಮರದಲಿ
ಸಾ | ಹಸರು ಕರಿರಥತುರಗಪಾಯ್ದಳ | ವೆಸೆವುದಗಣಿತ ಚಾತುರಂಗದಿ ನಿಷಧ
ವರನಗರ ... ... ... ... ॥೧೩॥

ಸಾಲಬಿಲ್ವ ಕಪಿತ್ಥ ಜಂಬೂ | ಮಾಲದಾಡಿಮ ಪನಸ ವಟ ಹಿಂ | ತಾಲ ಕ್ರ
ಮುಕ ಕದಂಬ ಕುರುವಕ ಕದಳಿ ಖರ್ಜೂರ ॥ ಜಾಲ ಚಂದನ ಪಾಟಳ ತತ | ಕೋಕಿಲ
ಕೇಕಿ ಶುಕ ಪಿಕ ಷಟ್ಪದ ಸಂಕುಳರ | ಸಾಲವನಗಳ ನಿಚಯದಿಂದುದ್ಯಾನ ರಂಜಿಸಿತು ॥೧೪॥

ಭೂರಮಣಿ ಕೇಳು ಪುರಾಧಿಪ | ವೀರಸೇನ ನೃಪಾಲರಿಪುಸಂ | ಹಾರನಾತನ
ತನಯ ನಳನೃಪನೆಂಬುದಭಿಧಾನ ॥ ಭೂರಿವಿಕ್ರಮ ಪರಮಧರ್ಮನಿ | ಚಾರಶಶಿಕುಲ
ಪಾಲಿಪನಗಂ | ಭೀರಪಾಲಿಸುತಿರ್ದ ಸಪ್ತದ್ವೀಪದವನಿಪರ ॥೧೫॥

ಶರಧಿನೇಮಿ ದಿಗಂತದವನೀ | ಶ್ವರರು ಕಪ್ಪವ ತೆರುವರಗಣಿತ | ಧುರವಿ
ಜಯದೋರ್ಧರರು ಮಣಿಮಯ ಮಕುಟವರ್ಧನರು ॥ ಚರಣಕಾನತರಾಗಿ ನಳ
ಭೂ | ವರನ ಭಜಿಸುತಲಿರ್ಪರಮರೇ | ಶ್ವರನವೋಲಗದಂತೆ ಮೆರೆವುದು ನೃಪತಿ
ಯಾಸ್ಥಾನ ... ... ... ॥೧೬॥

ಭೂಮಿಪತಿ ಕೇಳುತ್ತರೋತ್ತರ | ಭೂಮಿಯಲಿ ಪ್ರಜ್ವಲಿಸುತಿಹ ಸು |
ತ್ರಾಮಪುರದಂತೆಸೆವುದಲ್ಲಿ ವಿದರ್ಭನಗರವದು ॥ ರಾಮಣೀಯಕರಚನೆಯಲಿನ
ವ | ಹೇಮರಜತಸುವರ್ಣಸೌಧ | ಸ್ತೋಮಗಳ ಸಾಲಿಸಲಿ ರಂಜಿಸುತಿರ್ದು
ದಾನಗರ ... ... ... ... ॥೧೭॥

ಅಲ್ಲಿಗಧಿಪತಿ ಭೀಮನೃಪ ಸಗುಣ | ದಲ್ಲಿ ನಯದಲಿ ವೀರವಿಕ್ರಮ | ದಲ್ಲಿ ಚಾತು
ರ್ಯದಲಿ ಸೌಭಾಗ್ಯದಲಿ ಧೈರ್ಯದಲಿ ॥ ಬಲ್ಲಿದನು ತನಗಿನ್ನು ನಿಜಸುತ | ರಿಲ್ಲವೆಂದು
ಮ್ಮಳಿಸುತಿರೆ ಮನ | ದಲ್ಲಿಗಾಕ್ಷಣ ಬಂದನಾ ದಮನಾಖ್ಯ ಮುನಿವರನು ॥೧೮॥

ಬಂದ ಮುನಿಗವನೀಶ ವಂದಿಸಿ | ನಿಂದು ಕರಗಳ ಮುಗಿದು ವಿನಯದೊ
ಳೆಂದು ಸುತ ಸಂತಾನವಿಲ್ಲದ ಸಿರಿಯದೇಕೆನುತ ॥ ನೊಂದು ನುಡಿಯಲು ಸುತರ ಪಡೆ
ಯದ | ತಂದೆಗಿದು ಸಂತಾಪವಲ್ಲವೆ | ಯೆಂದು ಮುನಿ ಕರುಣದಲಿ ಸಂತೈಸಿದನು
ಭೂಪತಿಯ ... ... ... ॥೧೯॥



ಯೋಗದೃಷ್ಟಿಯೊಳರಿದು ಮುನಿವರ | ನಾಗ ನೃಪನೊಡನೆಂದ ಚಿತ್ರದ |
ಯಾಗವನು ಮಾಡದ ಸತ್ಪುತ್ರಲಾಭವನೆ ॥ ಆಗ ರುಮಮುನಿ ಮಂತ್ರದಿಂದ
ಸ | ರಾಗದಲಿ ಶುಭದಿವಸವರಸುತ | ಯಾಗವನು ಪೂರೈಸಿದನು ಸುರನರರು ಮೆ
ಚ್ಚುವಂತೆ ... ... ... 9697 ॥೨೦॥

ಅರಸ ಕೇಳಾ ಯಾಗಸಮಯದೊಳು | ತರದೊಳಾ ಮುನಿಮುಖ್ಯನನುಸ | ತ್ಕರಿ
ಸಿ ಕಳುಹಿದನವರವರನುಚಿತೋಪಚಾರದಲಿ ॥ ತರುಣಿಗಾದುದು ಗರ್ಭಮಂಗಳ |
ಕರ ಸುತಾರೆಯುಳಗ್ನದಲಿ ನೃಪ | ನರಸಿ ಪಡೆದಳು ತನುಜೆಯೊರ್ವಳ ಲೋಕ
ಸೌಂದರಿಯ ... ... ... ॥೨೧॥

ಅಮರದುಂದುಭಿ ನೆಲಗಲಿಳೆಸಂ | ಭ್ರಮಿಸೆ ಪುರಜನನಲಿಯೆ ನೃಪನಾ |
ಸಮಯದಲಿ ದಮನಾಖ್ಯಮುನಿಗಭಿನಮಿಸಿ ನಿಜಸುತೆಗೆ ॥ ವಿಮಲನಾಮವ ಪಾಲಿ
ಸೆನೆ ಮುನಿ | ಕಮಲಮುಖಿ ದಮಯಂತಿಯೆಂದು | ತ್ತಮದ ಪೆಸರೆಂದೊರೆದು ಶಾ
ಪ್ರೋರಮುಟ್ಟನಾಶ್ರಮಕೆ ... ... ... ॥೨೨॥

ನಿರಿಗುರುಳ ಶಿರಿಮುಡಿಯ ವಿಮಲಾ | ಧರದ ತೊಳ್ಗಳ ಕಂಬುಕಂಠದ | ಕರ
ಳನಯನದ ಸಂಪಗೆಯ ನಾಸಿಕದ ಪೆರೆನೊಸಲ ॥ ಹರಿಯ ಮಧ್ಯದ ಹಂಸಗಮನ
ದ | ಗುರುಕುಚದ ವರಕರಪಲ್ಲವದ ಸರ | ಸಿರುಹಮುಖಿ ನಲಿದಾಡುತಿರ್ದಳು ರಾಜ
ಭವನದಲಿ ... ... ... ॥೨೩॥

ಗುಣದೊಳತಿಶೀಲದಲಿ ಮಾತಿನ | ಜಾಣತೆಯಲಿ ಗಾಂಭೀರ್ಯದಲಿ ಪತಿ | ಕ
ಣದ ವೀಣಾರಚನೆಯಲಿ ಗುರುದೇವಭಕ್ತಿಯಲಿ ॥ ಪ್ರಣುತಿಸಲು ಶರ್ವಾಣಿ ರತಿಯು
ರಿ | ಗೆಣೆಯು ನಿಪಚಲುವಿಕೆಯು ಮಿಕ್ಕಿನ | ಬಣಗುಸತಿಯರು ಸರಿಯೆ ಲೋಕದೊ
ಳೆಂದನಾ ಮುನಿಪ ... ... ... ॥೨೪॥

ಕೇಳು ಪಾಂಡವತನಯ ಭೀಮನೃಪ | ಪಾಲನೋಲಗದಲ್ಲಿ ಧರಣೀ | ಪಾಲ
ಕರ ಚರಿತಪ್ರಸಂಗದೊಳರಲು ನಳನೃಪನ ॥ ಶೀಲವನು ಸೌಂದರಿಯ ವಿಭವವಿ
ಶಾಲವನು ಲಾವಣ್ಯನಿಪುಣಗು | ಣಾಳಿಗಳ ವಿಸ್ತರಿಸಿ ಕೊಂಡಾಡಿದರು ಕವಿಜನರು ॥

ವನಜಮುಖಿ ಯೀ ವಾರ್ತೆಯಲ್ಲವ | ಮನದಲಿ ದುಕೇಳಿದಳು ಹಿಗ್ಗುತ | ನ
ನದುದಂತಿಕರಣ ಹೆಚ್ಚಿದ ಚಿತ್ತವೃತ್ತಿಯಲಿ ॥ ನೆನೆದು ಒರೆದಳು ನಳನರೂಪವ | ನ
ನುನಯದಿ ಚಿತ್ರವನು ಮಿಗೆಸಂ | ಜನಿಸಿತವನಲಿ ಮೋಹವೀ ಧರಣೀಶಕೇಳೆಂದ ॥

ಆಗಮದನನು ತನ್ನ ಬಲವನು | ಬೇಗದಲಿ ಜೋಡಿಸಲು ಭೋಯಂ | ದಾ
ಗಲರಸಂಚೆಗಳು ಮಳೆಪಿಂಡುಗಳು ನಲಿದಾಡೆ ॥ ಕೋಗಿಲೆಗಳಾರ್ಭಟಿಸಗಿಳಿಗಳು |

ಕೂಗೆನವಿಲುಗಳಾಡೆಮನ್ಮಥ | ನಾಗಪ್ರಗಳೆಗಳನುಸಂಧಿಸುತೆಚ್ಚನಂಗನೆಯು ||
ಉಣ್ಣಳನ್ನವನಖಿಳವಸ್ತ್ರವ | ಕಣ್ಣಿನಿಂದೀಕ್ಷಿಸಳುಸತಿಯರ | ಮಾ
ನ್ನಣೆಗೆವ್ಯಗ್ರತಳುಬಲುಬೇಸರಿದಿಬಳಲುವಳು || ಬಣ್ಣಿಸಲುಪಾತಾಡಲೊಲ್ಲ
ಳು | ಬಣ್ಣಗುಂದಿದಸೇರೆಹಬೊಳ್ಳುಯುಳ್ | ಹೆಣ್ಣುಗಳಸೌಖ್ಯವನುಮರದಳು
ಮದನನಸಂಗದಲಿ ... ... ... ||೩೮||

ಕೆಳದಿಯರುಕಂಡಂತರಂಗದಿ | ಬಲಿದವಿರಹದಉಜವನೆಯು | ಕೊ
ಳಲೊಳುದ್ಯಾವನವಸುರಚಿಯುಪ್ರಪ್ಪತರುಗಳಲಿ | ಎಳೆದಳಿರನೆರಳನಲಿಪರಿ
ಮಳ | ದಳರಪನ್ನೀರಿನಲಿಸಖಿಯರು | ಸಲವ್ರಹಿಂಗಿದಸತಿಯನುಪಚರಿಸಿದರು||
ಬನದೊಳಗೆ ... ... ... ||೩೯

ಕೆಲರುಕದವನೇಸಂದುಚಿಂತಿಸೆ | ಕೆಲರುಪನ್ನೀರುಗಳತಳಿದರು | ಕೆಲರುಕ
ರ್ಪೂರಗಂಧವನುಲೇಪಿಸಿದರಂಗದಲಿ || ಕೆಲರುಬೀಸಿದರಾಲವಟ್ಟದಿ | ಕೆಲರುರಾ
ಪ್ಪಿನಹಾಸಿಕೆಯಕೊ | ಮಲೆಗನುತಲುಪಚರಿಸೆಚಸಿದರಾಗರೆಡಿಬಿಡದೆ |೪೦||

ಈಪರಿಯೊಳಾಕಾಮಿನಿಗೆಶೈ | ತ್ಯೋಪಚಾರವಮಾಡಿದರುಪರಿ | ತಾಪವೆ
ಗ್ಗಳಸುತ್ತಲಿರಲಿನ್ನೇನುಹದನೆನುತ | ಚಾಪಳೆಯರಾಲೋಚಿಸುತಲಿರು | ಪಾಪಿ
ಯಂಗಜನೆಂದುಬೈಯ್ಯುತ | ತೋಪಿನೆಡೆಗಾಕ್ಷಣದಿತಂದರುಸತಿಯಸಂತೈಸಿ ||

ಬಕುಳಬದರಿಯುನಿಂಬೆವಟಕೇ | ತಕಿಸರಳಪಾದರಿಕುಟಜಚಂ | ಪಕಲ
ವಂಗಕಪಿತ್ಥದಾಡಿಮಕ್ರಮುಕತರುಗಳಲಿ | ಶುಕನಪಿಲುಜಲಿಜಲಿಗಗೀಜುಗ
ಬಕರಹಸುಬಗೂರವಂಕಟಟ್ಟಭ | ಪಿಕಚಕೋರಕಪೋನ್ಬಲಿಗೆಪಕ್ಷಿಗಳಾರಂಜಿ
ಸಿತು ... ... ... ||೪೧||

ಬಿಗಿದರತ್ನದಸೋಪಾ | ನಗಳಕೆಂದಾವರೆಯಮೊಗ್ಗೆಯ | ಮು
ಗುಳತುಂಬಿಯುಹಂಸೆಗಳಬಕಚಕ್ರವಾಕಗಳ || ಸೊಗಸುದೋರುವಸರಸಿಯ
ಲಿವರ | ಸುಗುಣೆಯರುದಮಯಂತಿಯುಳಮನ | ಸೊಗಸಿನಿಂದಪಸಂತವಾಡಿ
ದರಾವಿದಗ್ಧೆಯರು ... ... ... ||೪೨||

ಬಂದುಸತಿಯರುಕೊಳನತೀರದಿ | ನಿಂದುವಸ್ತ್ರಾಭರಣಭೂಷಣ |
ವಿಂದಳಿಕಲಂತೋತ್ಪಲದಿ ಕಾಳ್ಗೆಸಿಕೆವಂಖಿಯ || ಅಂದಪಿರರಾದಪಥೆಯನಾ
ನಾ | ಛಂದದಲಿಶೈತ್ಯೋಪಚಾರಗ | ಳಂದಸಂತೈಸಿದರುವರಪ್ರಿಯರವರಸಕಜ್ಞೆ
ಯಲಿ ... ... ... ... ||೪೩||

ಅಂತು ಸಂಧಿ ೧ ಕ್ಕೆ ಪದ ೪೪ ಕ್ಕಂ ಮಂಗಳಮಸ್ತು.



9697

## ಎರಡನೇ ಸಂಧಿ

ಸೂಚನೆ || ಹಲವುನಯನೀತಿಯಲಿಹಂಸೆಯು | ಕಳುಹಲಂದಾರಾಯೆ
ಭಾರದಿ | ನಳನೃಪಗೆಸತಿಯಹಾದಳಾದಮಯಂತಿಮನವೊಲಿದು ||

ಪದ || ಕೇಳುಕುಂತೀತನಯಭೀಮನೃ | ಪಾಲಕನುಜೆಗೆವಿರಹಬಲಿದು
ವಿ | ಶಾಲವಾಗಿರಲತ್ತ ಕೇಳ್ನಿಷಧನಗರಿಯನು || ಪಾಲಿಸುವನಳಚಕ್ರವರ್ತಿ
ಯು | ನ್ರೋಲಗದರಚನೆಯನುರತ್ನದ | ಸಾಲುಹೊಳೆಹಿನಸಿಂಹಪೀಠದೊಳೆಸ
ದುಕಾಳ್ಗೆರ್ ... ... ... ||೧

ಗೌಳವಂಗಕಳಿಂಗಕುಂತಳ | ಚೋಳಬರ್ಬರಸಿಂಧುಕೇರಳ | ಲಾಳ
ಮಗಧಮಾಳಸೌರಾಷ್ಟ್ರದಿಭೂಮಿಪರು || ಬಾಲೆಯರುಮಂತ್ರಿಗಳುವೀ
ರಭ | ಟಾಳನಟಗಾಯಕರುಕವಿತಾ | ಜಾಲಸಂದೋಹದಲಿಮೆರದುದುನೃಪ
ತಿಯಾಸ್ಥಾನ ... ... ... ||೨||

ಆಸಮಯದಲಿಬಂದರಲ್ಲಿಗೆ | ದೇಶಯಾಚಕಭೂಸುರರೊಳವ | ನೀಶ
ಕೇಳದನಿಳೆಯೊಳೇನುಂಟತಿವಿಚಿತ್ರವೆನೆ || ಭೂಸುರೋತ್ತಮರೆಂದರೆಲೆಧರಣೀಶ
ಕೇಳುವಿದರ್ಭನಗರದೊ | ಳೇಸುಪುಣ್ಯೋದಯದಿ ಪಡೆದನೊಭೀಮನೃಪ
ಸುತೆಯ ... ... ... ||೩

ಅವಳರೂಪ್ರಗುಣಾತಿಶಯಗಳ | ನೆವಗೆಬಣ್ಣಿಸಲಳವೆಕೇಳಾ | ಯ
ವತಿಲೋಕದಸತಿಯಬಗೆಯಂತಲ್ಲಭಾವಿಸಲು || ಪ್ರವಿಮಲಾಕಾರದಲಿನೋಡ
ಲು | ಸವಿನುಡಿಯಸಂಭಾಷಣೆಗಳಲಿ | ಭುವನದಲಿನಾಕಾಣೆದಮಯಂತಿಯ
ಸಮಾನರನು ... ... ... ||೪||

ಮುರಹರನನಿಜಸೊಸೆಯರೂಪಂ | ತಿರಲಿಚಂದ್ರನಮಗಳಚೆಲುವಂ |
ತಿರಲಿಮೈನಾಕನಸಹೋದರಿಯಂದವಂತಿರಲಿ || ಶರಧಿತನುಜೆಯಸೌಂದರಿಯ
ವನು | ಮರಿಸಿತೆಂಬುದುಲೋಕದೊಳಗಾ | ಸರಸಿಜಾಕ್ಷಿಯಬಗೆಗೆಬೇಸರ
ವಿಲ್ಲಕೇಳೆಂದ ... ... ... ||೫||

ಮಿಸುನಿಯೊಲೆಯಡಾಳಕದಪಿನೊ | ಳೆಸೆಯೆಮೇಲುದುಜಾರಿಕುಚ
ಭರ | ವೆಸೆಯೆನಡುವಲ್ಲಾಡೆಮುಸಗಿದಮಂದಹಾಸದಲಿ || ಎಸೆವನೋರ್ಮ್ಮಡಿ
ಭಾರದಲಿಬಾ | ಗಿಸಿದಕೊರಳನಕ್ಕೈಯ್ಯವೀಣೆಯ | ಬಿಸರುಹಾಕ್ಷಿಯಸೊಬಗ
ಬಣ್ಣಿಸಲಳವೆತನಗೆಂದ ... ... ... ||೬||

ಹೇಳುತಿರೆನುಡಿನುಡಿಗೆಮೆಚ್ಚುತ | ಕೇಳುತಲೆದೂಗಿದನುನಿಷಧಪ /

Digitized by ROJA MUTHIAH RESEARCH LIBRARY

ಕಾಲನಯವನರಿತಪುಣ್ಯಮುಖಿಗೇಚರಿಸಿದಂತಾಗೆ ॥ ಬಲಕಿಗೆಮೋಹಿಸುತಪುಷ್ಪಶರ । ರಾಳಿಯುಲಿಮನಸೊಂದುಶಿವಶಿವ । ಲೋಲಲೋಚನೆಯಂತಾತನಗಹಳೆನುತಚಿಂತಿಸುತ ... ... ... ॥೭॥

ವನಿತೆಗುಣಂಗಳನೆಂಣನೆಂಣನು । ಮನದೊಳಗೆಸವಿಮಾಡಿತರುಣಿಯನೆನವುಹೊಂಪ್ರಳಯಾಗಿವಿರಹದಿಮನನೀಡಾಗಿ ॥ ಘನದವೆಸನದಕಾಯಕಂದಿದ । ಜನಪನಳನಿರೆಬೇಂಟೆಕಾರರ । ಜನನಿವಹಸಂಬಂದರಾಸಮಯದಲಿವನಚರರು ॥೮॥

ತಂದುಸಲವಸ್ತುಗಳಕಾಣಿಕೆ । ಯಿಂದಕೈಮುಗಿದರಸಮೃಗಘನ । ವಿಂದುಬೇಂಟೆಗೆಗವಿಸಬೇಕೆನೆನೃಪತಿನಸುನಗುತ ॥ ಇಂದುವಿರಹವಕಳವಡಿದುಲೇ । ಸೆಂದುಶಬರರಕಳುಹಿವ್ರೋಲಗ । ದಿಂದಲರಮನೆಗೈಯ್ಯಲಸ್ತ್ರಾಂಬುಧಿಯೊಳನಸಿಳಿವ ॥೯॥

ನಳನಸಖನುದಯದಲಿನಳನೃಪ । ತಿಲಕಕರಸಿದಸಕಲದಳವನು । ಹೊಳೆವಖಡ್ಗಕಠಾರಿಮೊದಲಾದಖಿಳಕೈದುಗಳ ॥ ಬಲುಭಟರುಬೇಂಟೆಯುವಿಸಾನಾ । ಬಲೆಗಳಂಟಿನಕೋಲುಕಣ್ಣಿಯ । ಬಲುಭುಜರುಸಂದಣಿಸಿಮೊರದುದುಪ್ರದಬಾಹ್ಯದಲಿ ॥೧೦॥

ಅರಸಕೇಳ್ಶಿಕಲಶಿರೋಮಣಿ । ಧರಿಸಿದನುನವರತ್ನಮಯದಾಭರಣಗಳದಿವ್ಯಾಂಬರಾಜಿಸುಗಂಧಲೇಪದಲಿ ॥ ತರಿಸುತೇರಿದವಾಯುವೇಗದ । ತುರಗವನುಸಂದಣಿಸಿಮೋಹರ । ಕರಳತಗಣಿತವಾದ್ಯದಲಿಸೇಚರಿಯುಲ್ಲೈಸಂದ ॥೧೧॥

ಏನಹೇಳುವೆನರಸಹೊಕ್ಕರು । ಕಾನನವಬಳಸಿದರುಮೃಗತತಿ । ಯಾನಲಾಪ್ರದೇಶಗಮಹಾಯುದ್ಧದುಭಟರಬಲ್ಲಣಿಗೆ ॥ ಆನೆಗಳಕೆಡಹಿದರುಬಲುಸಂ । ದಾನವಳಿಹುಲಿಕರಡಿಮುಸುಮೊಲ । ವಾನರಾದಿಸಮಸ್ತಮೃಗಗಳತರುಬಿಕಡಹಿದರು ॥೧೨॥

ಹತ್ತಿತಲ್ಲಿಯಗಿರಿಶಿಖರತರು । ಮೊತ್ತದಲಿಬಲೆಗಳನುಹಾಯ್ಕದ । ರೊತ್ತಿಸೂಸಿದರೊಂದುಘನಮೃಗಸಿಂಹಪಬ್ಬರಿಸೆ ॥ ಹೊತ್ತಕೋಪದಿಸೈನ್ಯವನುಮುರಿ । ದೊತ್ತಿಬರುತಿರೆಕಂಡುನೃಪಚಂ । ಚೊತ್ತಿಕಡಿದನುಮೃಗಪತಿಯಬನವೆಲ್ಲನುಗ್ಗಾಗೆ ... ... ... ॥೧೩॥

ಸಿಲಿಸಿಬೇಂಟೆಯನಲ್ಲಿಬಳಲಿದ । ಬಲಸಮೇತದಿಬಂದುತತ್ಸರ । ವಳಿ



ಯದುಪ್ಯಾತನವಹೊಕ್ಕನುಬಲಿದವಿರಹದಲಿ ॥ ನಲವುಹಿಂಗಿದಮನದಮುಗುಡದೊಳಳದುಕೊಳ್ಪದಲಿಪಾನುಜಂಘೆಯ । ತೊಳಲಿದುರರಿವೃತನಾಗಿತಿರುಗಿದನಂದುವನವೊಳಗೆ ... ... ... ॥೧೪॥

ಆಕೊಳರತೀರದಲಿತರುಗಳ । ನೇಕಪದರೊಳಗೊಂದುತಾವಿನೊಳೇಕವೃಕ್ಷದನೆರಳನಲಿನವಕುಸುಮದಿಕ್ಕಿನಲಿ ॥ ಆಕಮಲಜನತುರಗನಿಪ್ರೌ । ಢ್ಯಾಕುಲದಿನಲಗಿರಲುಕಂಡದಿ । ವಾಕರೋನ್ನತಶುಭ್ರತೇಜದರಾಜಹಂಸೆಯನು ... ... ... ॥೧೫॥

ಅರುಣಮಯದಾನನಪದಯುಗ । ಗರಿಗಳುನ್ನತಪವಳದೇಹದ । ಪಕವುತೇಜದೊಳೆಸೆವಪಕ್ಷಿಯಕಂಡುಬೆರಗಾಗಿ ॥ ಹರಹರಾಯಿದಾಯುತವಮರ । ಹರನುತಾನೇಬಲ್ಲನೆನುತ । ತ್ವರಿತದೊಲ್ಲನೆಕರದನಿಂದುತಪಿಡಿದಹಂಸೆಯನು ... ... ... ॥೧೬॥

ಪವರಿಕುಣಿಯಾಲುಹಸ್ತದೊಳಗವ । ಕದತಪಂದಿಪಿಡಿಯಲದನು । ವದನಕಮಲವನೋಡಿಹೆದರಿತುಬರಹಳಭೀತಿಯಲಿ ॥ ಹೃದಯಕರಗಿಮಹಾತಿಸಂದವು । ಮದಕರಿಗೆಸೂರಪಂತರವೆಕ್ಕೆ । ಸದರದವರನುಕೊಲುವುದುಚಿತವೆಯೆಂದುದಾಪಕ್ಷಿ ... ... ... ॥೧೭॥

ಕರಿಗಳನುಮುರಿದಿತುವಸಿಂಹಕೆ । ನರಿಗಳಸಿರೇತಾನುನಿವಾಗಂ । ತರವೆನಾಕಂತಿರಲಿಕಂಡವರಿಲ್ಲನಗದಿಹರೆ ॥ ಅರಿಭಯಂಕರಶತ್ರುಗಳಸಂ । ಹರಿಸುವದುನೃಪನೀತಿನಿನಗಿದು । ತರವೆಬಿಡುವುಹಿಂಸೆದೋಷವಿದೆಂದುದಾಪಕ್ಷಿ ॥೧೮॥

ಬತಬಗೌತ್ರಣವಿಕ್ಕುವಡೆಪ । ಕುಕ್ಕಿಡಿತೆಹಾಲೆಮಂಜುಸುರಿಯಲು । ವಡಕೆಕೆರೆತುಂಬುವ್ರುದೆನೃಪನೀನೆನ್ನ ಭಂಜಿಸಲು ॥ ಪಡಲಿಗಾವ್ಯಾಯನವಕೇಳೆ । ಪ್ರೊಡನಿಪತಿಬಿಡುಮನ್ನಿಸಿಯಲಿ । ಮಡದಿಮಕ್ಕಳಘೋಳನೋಡೆಂದೆರಲಿತಾಪಕ್ಷಿ ... ... ... ॥೧೯॥

ಮಾನಹತ್ತವೆಸೇರಿದಸಂ । ಗರದಿಸೈನ್ಯಂಬಡುವರಾಯುಧ । ಮುರಿದಬರಿಗೈಯ್ಯವರನೀರೊಳುಪೊಕ್ಕುನಿಂದವರ । ತರುಣಿಯರಮರೆಗೊಂತವರನಿ । ಬ್ಬರದಿವುರಿದೊಡುವರನಿಪ್ರ । ಧರದೊಳರ್ದರಕೊಲುವುದುಚಿತವೆಯೆಂದುದಾಹಂಸೆ ... ... ... ॥೨೦॥

ನುಡಿಗೆರಾಜಿಪನರಸಹಂಸೆಯ । ನಡವಳಿಗೆಮೆಚ್ಚಿದನುನಿನ್ನನು । ಬಿಡಿದುಕೊಲುವವನಲ್ಲನಿನ್ನಾಯಕೆಪ್ರೋಗನುತ ॥ ಬಿಡಲುರಕ್ಕೆಯಕೊಡೆಮಹಾರಿ

Digitized by ROJA MUTHIAH RESEARCH LIBRARY

ತು । ಪಡೆನೆವ್ವರಳತುಧರೆಗೆರಾಯನ । ತೊಡೆಗೆಪುಂಚಿಸಿಮುದದಿನುಡಿದು
ದುನೃಪಗೆವಿನಯದಲಿ ... ... ... ॥೨೧॥

ಭೂರಮಣಕೇಳಸುವಕಾಯುದ್ದಪ । ಕಾರವಮಾಡಿದೆನೀನುನಿನಗುಪ ।
ಕಾರವಮಾಡುವೆನೆನಲದೇನೆಂದರಸಬೆಸಗೊಂಡ ॥ ಸಾರಹೃದಯನೆಚಿತ್ತವಿಸು
ವಿ । ಸ್ತಾರದಿಂದರುಹುವೆನುಭುವನದೊ । ಳಾರಿಗುಂಟೀಪರಮಸುಕೃತವಿದೆಂ
ದುದಾಪಕ್ಷಿ ... ... ... ॥೨೨॥

ಅರಸಕೇಳತಿದೂರದಲಿಸುರ । ಪುರವಪೋಲ್ವವಿದರ್ಭಪಟ್ಟಣ । ದ
ರಸುಭೀಮನೃಪಾಲನಾತನತನುಜೆದಮಯಂತಿ ॥ ಪರಮಪುಣ್ಯಾಂಗನೆಮಹಾ
ಸೌಂ । ದರಿನಿಪುಣೆಗಜಗಮನೆನಯಗುಣ । ಭರಿತೆಸೊಬಗಿನಸೋನೆಸೆತಾನಿರುಳ
ಳ್ಳಿವನಜಾಕ್ಷಿ ... ... ... ॥೨೩॥

ಪೊಗಳಲಳವೇಸತಿಯಚೆಲುವಿನ । ಬಗೆಯಭಾವಿಸಿನೋಡಲತಿಸೋ ।
ಜಿಗವಲೇದಮಯಂತಿಯಾವ್ವನರೂಪುರೇಖೆಯಲಿ ॥ ನಗವೊಗದಪೊಂಬೊಗರ
ಮಿಂಚಿನ । ಬಗುರಿವೊಲೆಗಳಕಳೆನಡುವಕ್ಷ । ಭ್ರುಗುರಬೆತಗಿನಕಾಂತೆರಂಜಿಸು
ತಿರ್ಪಳಾಪುರದಿ ... ... ... ॥೨೪॥

ಕ್ಷಿತಿಯೊಳಹಸತಿಯರೊಳಗಮರಾ । ವತಿಯೊಳಹಸ್ತ್ರೀಯರಲಿಪಃ
ಣಾ । ವಿತಳದೊಳಗಿಹನಾರಿಯರನೀಕ್ಷಿಸಿದೆನವಳಂಗೆ ॥ ಪ್ರತಿಯಕಾಣೆನು
ರೂಪಿನಲಿನೀ । ನತಿಚೆಲುವನಿನಗವಳುಪಾಸಟ । ಸತಿಗೆನೀನೇರಮಣನಲ್ಲದೆ
ಯಿತರರನಾಕಾಣೆ ... ... ... ॥೨೫॥

ಅವಳುನಿನಗೊಲಿವಂತೆಮಾಡುವೆ । ಶಿವನಕೃಪೆನಿನಗುಂಟುನಮ್ಮಲಿ ।
ಸವಡಿನುಡಿಯಿಲ್ಲರಸನಂಬುವದೆನ್ನನೀನೆನಲು ॥ ಅವನಿಪತಿನಸುನಗುತಹಂ
ಸೆಯ । ಸವಿನುಡಿಗೆಮನಸೋತುವಿರಹದ । ತವಕದಲಿಬೋಳೈಸಿನುಡಿದನು
ನೃಪತಿಖಗಪತಿಗೆ ... ... ... ॥೨೬॥

ಮನಸಿಜನಶರಹತಿಗೆನೊಂದೆನು । ತನುವಸೈರಿಸಲಾರೆಯನಗಾ । ವ
ನಿತೆಯನುವಲಿಸುತ್ತಸಲಹೆನ್ನಸುಪಕಾರಣದಲಿ ॥ ಯನಗೆನೀನೇಪರಮಬಾಂಧ
ವ । ಮನಕೆಹರುಷವಮಾಡುನೀನೀ । ಬನಕೆಬರಹಪರಿಯಂತರಾನಿಲ್ಲಿಹೆನು
ಹೋಗೆಂದ ... ... ... ॥೨೭॥

ಕೇಳುಧರ್ಮಜನಳನೃಪಾಲನ । ಬೀಳುಗೊಂಡಲ್ಲಿಂದಬಂದುವ । ನಾಂ
ತರವ ಪೊರಹೊಂಟುತೆರಳಿತುವಾಯುವೇಗದಲಿ ॥ ಆಲತ್ರಾಂಗಿಯಪತಿಯಕಿ


9697

ರ್ತಿವಿ । ಶಾಲಪಾದಂದದಲಿರಾಜಸ । ರಾಳಗಗನಕೆಹಾಯ್ದುಕುಂಡಿನಕಂಪುದಾ
ಪುರಕೆ ... ... ... ॥೨೮॥

ಕನಕಮಣಿನಿರ್ಮಿತನಸೌಧದ । ಜನನಿಕರಸಂದೋಹದಲಿಹುಪ । ವ
ನದವೀಥಿಗಳಸೆಯೆಮೆರೆವವಿದರ್ಭಪಟ್ಟಣಕೆ ॥ ಘನವಲಿದುನಿಜಬಳಗಸಹಿತಂ ।
ಗನೆಯರೋಲಗದಲ್ಲಿಮದನನ । ಮೊನೆಯಲಗಿನಲಿಬಳಲ್ವಸತಿಯಳಕಂಡುದಾ
ಹಂಸೆ ... ... ... ॥೨೯॥

ನೀಲಮಣಿಭಿತ್ತಿಗಳಕಂಭದ । ಸಾಲುವಜ್ರದಹಲಗೆಪಚ್ಚೆಯ । ಮೇ
ಲುಮುತ್ತಿನಲೋವೆಹವಳದಿಕಡದಬೋದಿಗೆಯ ॥ ಸಾಲುಮಣಿನಿರ್ಮಿತದಮಂ
ಚವ । ಮೇಲೆಮಂಡಿಸಿನಳನಚಿಂತೆಯ । ತಾಳಿದಂಗನೆಸತಿಯರೊಡನಿರೆಕಂಡು
ದಾಪಕ್ಷಿ ... ... ... ॥೩೦॥

ಪೆರೆನೊಸಲಕತ್ತುರಿಯತಿಲಕದ । ಕೊರಳಮುತ್ತಿನಹಾರರತ್ನದ ।
ಬೆರಳಮುದ್ರಿಕೆಗಳಸುವರ್ಣದಕರದಕಂಕಣದ ॥ ಪರಿಪರಿಯನೆರೆಯುಡಿಗೆಗಳ
ನ • । ಪ್ಪುರದತೊಡರಿನಡೇಸಿಬರಿಮಿಗೆ । ಬಳಸಿರಲುತರುಣಿಯರುಸತಿಯಳಕಂ
ಡುದಾಹಂಸೆ ... ... ... ॥೩೧॥

ತಳಿತಮೇಘದಹೊಳೆವಮಿಂಚಿನ । ಬಳಗವೆನೆಹಂಸೆಗಳುನಭದಿಂಧರೆ ।
ಗಿಳಿದುಸತಿಯರಸಭಾಮಂಡಲದಿಕುಳ್ಳಿರಲು ॥ ನಳನಲೋಚನೆಕಂಡುಪಕ್ಷಿಯ ।
ಲಲನೆಯರವೆಗನೋಡಿಹಂಸೆಯ । ಚೆಲುವನೀಕ್ಷಿಸಿಹಿಡಿಯಬೇಕೆಂದೆನುತಗ
ಮಿಸಿದಳು ... ... ॥೩೨॥

ಮೆಲ್ಲಮೆಲ್ಲನೆಯಡಿಯಿಡುತಕರ । ಪಲ್ಲವವಚಾಚಿದಳುನೂಪುರ । ಘ
ಲ್ಲುಘಲಿರನೆಹಿಂದೆಹಿಂದಕೆಸರಿದುದಾಹಂಸೆ ॥ ನಿಲ್ಲದಂಘೈಸುತ್ತಬರಲ । ಲ್ಲಲ್ಲಿಗ
ಡರಿಶುಕಸುಮಮಯತ್ತರು । ಮಲ್ಲಿಗೆಯಬನದೊಳಗೆಹೊಕ್ಕದುಹೊದರಹೊ
ಸಮೆಳೆಯ ... ... ॥೩೩॥

ಕೆಳದಿಯರಕೆಲಕೊತ್ತಿತಾನೇ । ಮೆಳೆಯಹೊಕ್ಕಳುಬಾಗಿಕಳೆಸಡು ।
ಬಳುಕೆಕುಚಭಾರದಲಿ ವೇಲುದುಜಾರೆಮುಡಿಚೆದರೆ ॥ ಜಲಜಮುಖಿಬೆಮರಿದ
ಳುಕೆರಳಿನ । ಲಲಿತದೇಕಾವಳಗಳಲ್ಲಾ । ಡಲುಶರಗನಳವಡಿಸಿನಿಂದಳುಬ
ಳಲಿಬಿಸುಸುಯ್ದು ... ॥೩೪॥

ಎಲೆಸರೋರುಹಗಂಧಿನೀನೆ । ನ್ನೊಲಿದುಮನದಲಿಹಿಡಿವೆನೆಂಬೀ । ಛಲ
ವಿದೇತಕೆಮಾಣುನಾವಂಬರದಪಕ್ಷಿಗಳು ॥ ಶಿಲುಕುವವಗಾವಲ್ಲಬರಿದೇ । ಬಳಲದಿ

Digitized by ROJA MUTHIAH RESEARCH LIBRARY

ಕಾತರಿಸಿಬಂದಪರಿಯನು । ತಿಳುಹುವೆನು ನಿನಗೆಲ್ಲವನು ಕೇಳೆಂದುದಾಪಕ್ಷಿ ॥೩೫॥

ನಳನಸಮಾಜಿನಳಚಕ್ರವರ್ತಿಯು । ಬಳಿಯಮಾರನವಾಗಿತಾನಿರೆ । ಸೊ
ಲಿಸುಸಲಹುವಸೆನ್ನೀರವಮುಪ್ರೀತಿವಚನದಲಿ ॥ ಯಿಳೆಗೆನಳಕೂಬರಜಯಂತರ ।
ಚೆಲುವತನದನರೂಪುರೇಖೆಯು । ಪಳಿವುದಾನಳನೃಪನನಿಜಸೌಂದರಿಯ
ಲೋಕದಲಿ ... ... ॥೩೬॥

ನಿನ್ನರೂಪಿನಚೆಲುವನಳನೃಪ । ನುನ್ನತದಸೌಂದರಿಯಜಗದೊಳ ।
ಗಿನ್ನುನಾಸರಿಗಾಣೆನಿಮ್ಮಗೀರ್ವರಿಗೆಸವನಹುದು ॥ ಯನ್ನಲಾನುಡಿಕೇಳಸಂ
ತೊಸ । ತನ್ನಶಿರವನುಬಾಗಿಗುಣಸಂ । ಪನ್ನೆನುಡಿದಳುನಾಚಿನಸುನಗೆಯಿಂದ
ವಿನಯದಲಿ ... ... ॥೩೭॥

ಪರಮಗುಣಸಿದ್ಧಿಪಕ್ಷಿಕೇಳಬ್ಬ । ಹಿರನುಪಾತಕಿಮದನನೆಲೆನಿ । ಷ್ಠು
ರದೊಳೆಸೆಯಲುಪುಷ್ಪಬಾಣದಿನೊಂದುದೆಂಸ್ನೊಡಲು ॥ ಕರುಣಸದ್ಧಾರೆಯಲಿ
ತಾಪವ । ಪರಿಹರಿಸಬೇಕೆಂದುನೀನಾ । ಧರಣಿಪತಿನಳನೃಪಗೆಬಿನ್ನೈಸೆಂದ
ಳಂದುಮುಖಿ ... ... ॥೩೮॥

ಪರಮದುಃಖವಪರಿಹರಿಸಿಪಿಂಗೆ । ಪರರಿಗುಪಕಾರಾರ್ಥವೆಸಗಲು । ಪರ
ಮಪುಣ್ಯವಿದೆಂದುಪೇಳ್ವರುಹಿರಿಯರಾದವರು ॥ ಪರಮಬಾಂಧವನೀನೆನಗೆಸ ।
ಸ್ಮರಿಸುವಿರಹದಿನೊಂದವಳಕರ । ಕರೆಗಿರಿವಾಡದಿರುಸಾಹೆಂದಳುಸರೋ
ಜಮುಖಿ ... ... ... ॥೩೯॥

ಬಲಿನವಿರಹಾಗ್ನಿಯುಲಿನೊಂದೆನು । ಬಳಲಿದೆನುಹಿರಿದಾಗಿತಾಪದಿ ।
ನೆಲವುಹಿಂಗಿತುಭ್ರಮಣೆಹೆಚ್ಚಿತುತಾಪ್ರಾಣವೆಳದಾಯ್ತು ॥ ರಾವುಪಾತಕಿನಿನ್ನ
ನಳನೃಪ । ತಿಲಕತಾಪತಿಯಲ್ಲದಲೆಭೂ । ತಳದಪುರುಷರುಪಿತನಸಮಕೇಳೆಂದ
ಳಂದುಮುಖಿ ... ... ॥೪೦॥

ಅರಸಕೇಳಾಹಂಸೆತರುಣಿಯ । ಕರುಣದಳತೆಯಕಂಡುತಾ । ಬಂದಿರಾ
ವಕಾರ್ಯದಹದನಕೇಸಾಯ್ತೆಂದುಮನದೊಳಗೆ ॥ ಹರುಷಪಿಂಗಳೆಕೊಂಡಾಡಿಸತಿ
ಯಳ । ಕರದನುಡಿದುದುನಿನಗೆನಳಭೂ । ವರನಪತಿಯನುಮಾಳ್ಪೆಸಂಜದಿ
ರೆಂದುದಾಹಂಸೆ ... ... ॥೪೧॥

ಅಂತರಂಗದಬುದ್ಧಿಯನುದಮ । ಯಂತಿಗೆಲ್ಲವನರುಹಿತರುಣಿಯ । ಸಂ
ತವಿಟ್ಟಲ್ಲಿಂದಕಳುಹಿಸಿಕೊಂಡುಬೇಗದಲಿ ॥ ಮುಂತಣದಮಿಗೆತನ್ನಬಾಂಧವಸಂ
ತತಿಯನೊಡಗೊಂಡುನಿಷಧನ । ಚಿಂತೆಯನವಹಹರಿಸಬೇಕೆಂದೈದಿತಾಹಂಸೆ॥



9697

ಜಗನೆನೃಪನಂಗದಕ್ಷಿಣ । ಭಾಗಧಾ ನಯನಂಗಳದುರಿದ । ವಾ
ಗಕೇಳದನಿದರಫಲವೇನೆಂದುಭೂಸುರರ ॥ ಭೋಗಸಂಪದರುಕನಫಲವಿಂ । ಹೀ
ಗಲಹುದೆನಲಾಸಮಯದಿಸ । ರಾಗದಲಿನಳಿತಂದುದಾನೃಪನೆಡೆಗೆಗಳಹಂಸೆ ॥

ಬಂದಹಂಸೆಯಕಂಡುಮುಖಿಕಳೆ । ಯಿಂದಲರಿದನುನೃಪತಿಮನದಲಿ ।
ಯಿಂದುಮುಖಿತನಗೊಲಿದಹದನಹುದೆಂದುಹರುಷದಲಿ ॥ ಮುಂದಗಮನೆಯಕಂ
ಡದ್ದೇಯೋ । ನೆಂದುನುಡಿದಳುಸತಿಯಬಗೆಯೇ । ನೆಂದುಕೇಳಲುನೃಪಗೆಬ
ಳಕಿಂತೆಂದುದಾಪಕ್ಷಿ ... ... ॥೪೪॥

ಮಾನವಾಧಿಪಕೇಳುಮನದರು । ಮಾನನಂಬಿದುಗುಡಿಯಕಟ್ಟಿಸು ॥
ನಿನ್ನನೆನಸಿದಿಷ್ಟಾರ್ಥಫಲಸಿದ್ಧಿಸಿದುಪಿನ್ನೇನು ॥ ಮಾನನಿಧಿನೀಮುನ್ನಮಾಡಿ
ದ । ನ್ಯೂನಸುಕೃತದಫಲವೊನಿನ್ನನೆ । ಧ್ಯಾನಿಸುವಳುಸವರತಮನವೇರಿಲ್ಲ
ವಾಸತಿಗೆ ... ... ॥೪೫॥

ಆತಳೋವರಿನಿನ್ನಮೇಲತಿ । ಪ್ರೀತಿಯಿಂದೊಲಿದಂತರಂಗದಿ । ಕಾತ
ರಿಸುತಿಹಳಂಗಜನಯಮಪಟಳದಿಕಡುನೊಂದು ॥ ಧಾತುಗುಂದಿದಳಾತರುಣಿಮ
ನ । ಸೋತುಹಂಬಲಿಸುವಳುನಳನೃಪ । ನಾತನೇಪತಿಯೆಂದುನಂಬಿಹೆನೆಂದ
ಳಂದುಮುಖಿ ... ... ॥೪೬॥

ಎಲೆನೃಪತಿದಮಯಂತಿಯನುನಿನ । ಗೊಲಿಸಿಬಂದೆನುಭಾಷೆಸಂದುದು ।
ಲಲನೆಯನುನೀಮದುವೆಯಾಗೆಂದೆನ್ನಕಳುಹೆನಲು ॥ ಬಳಲುತೀಗಮಗೋಸುಗ
ವಬಲು । ಹಳುವದಲಿಹಿರಿದಾಗಿಮನದಲಿ । ತೊಳಲದಿರುನಾಕಿನ್ನುಗಮನಿಸು
ಯೆಂದುಬೀಳ್ಕೊಟ್ಟ ... ... ... ॥೪೭॥

ಕೇಳುಪಾಂಡವತನಯರಾಜನು । ರಾಳತೆರಳಿದಬಳಿಕನಳ । ಭೂಪಾಲನಿ
ತ್ತಲುಬಂದುಹೊಕ್ಕನುತನ್ನನಗರಿಯನು ॥ ಆಳುಮಂದಿಯಕಳುಹಿಮನದವಿ ।
ಶಾಲವಿರಹದತಾಪದಲಿಮಿಗೆ । ಕೇಳಮೇಳವಿನೋದವಿಭವವನುಳಿದನಾನೃಪತಿ॥

ಅತ್ತಲಾವಮಯಂತಿನಳನಲಿ । ಚಿತ್ತವಿಟ್ಟಳುನೃಪಗೆವಿರಹವು । ಹ
ತ್ತಿತಾಕೆಯಮೇಲೆಯಿರ್ವರಿಗಾಯ್ತುಸಂತಾಪ ॥ ಚಿತ್ತಜನುಘಾತಕನುವಿರ
ಹವ । ಹತ್ತಿಸಿದನಿಬ್ಬರಿಗೆಮದನನ । ಹೆತ್ತವನುವರಪುರದಚೆನ್ನಿಗರಾಯಕರು
ಣಿಸಿದ ... ... ... ॥೪೮॥

ಅಂತು ಸಂಧಿ ೨ ಕ್ಕೆ ಪದ ೯೩ ಕ್ಕಂ ಮಂಗಳಮಸ್ತು

Digitized by ROJA MUTHIAH RESEARCH LIBRARY

ಸೂಚನೆ ॥ ರಾಜಿಸುವವರಭೀಮನೃಪನಲಿ | ರಾಜನಳನೃಪವು
ದ್ಭವೆಯಾಗಿಸು | ರಾಜತೇಜದಿಬಂದುಪೊಕ್ಕನುಪುರವಸತಿಸಹಿತ ॥

ಪದನು ॥ ಕೇಳುಧರ್ಮಜನಳನರೂಪನು | ಕೇಳಲೀಹದನಾಯ್ತುಸ
ತಿಗೆನೃ | ಪಾಲನಂಗವ್ರಗೋಚರಿಸಲಂತರಹುನೊವಿರಹಾಗ್ನಿ ॥ ನಾಲಿಗೆಗದ್ರ
ವವಿಲ್ಲಮಂಚದ | ಮೇಲೆಮಲಗಳುಬಲಿದವಸ್ಥೆಯ | ಹೇಳಲಿನ್ನೇಸರಸದಮಯಂ
ತಿಯಮನೋವ್ಯಥೆಯ ... ... ॥೧॥

ಲಲನೆನಿದ್ರಾಂಗನೆಯನುಳದಳು | ಹೊಲಬುತಪ್ಪಿದಮನದಿಸತಿಯರು |
ಸುಳಿಯೆನಳನೃಪಬಂದನಿದೆಯಂದೆನುತಕಳವಳಿಸಿ ॥ ನಿಲುಕಿನೋಡುವಳೊಮ್ಮೆ
ಕಾಣದೆ | ಹಲುಬುವಳುಮತ್ತೊಮ್ಮೆಕಂಡದ | ಕೆಳದಿಯರುತಮ್ಮೊಳಗೆತಾವಾ
ಲೋಚಿಸಿದರಲ್ಲಿ ... ... ॥೨॥

ವಿರಹಬಲಿದುದುಸತಿಗೆನಾವಿದ | ನರಸಗರುಹುವೆವೆಂದುಕೆಳದಿಯ | ರಿರ
ದೆಬಂದರುಭೀಮನೃಪನೋಲಗಕೆಸವಕದಲಿ ॥ ವರಕಪಿಗಳಂದನೆದಧರಣೀ | ಶ್ವರ
ರುಕ್ಮೈವಾರಿಸಲುಕೇಳಿದು | ತರುಣಿವಿರಹಕೆತನುವತೆತ್ತಿಹಳೆಂದರಬಲೆಯರು ॥೩॥

ಕೇಳುಧರ್ಮಜನಗುಣಭೀಮನೃ | ಪಾಲತನ್ನಾತ್ಮಜೆಯಧವ್ವನ | ದೇಳ
ಗೆಯನಾಲಿಸುತವರನಾರೆಂದುಚಿಂತೆಯಲಿ ॥ ವ್ರೋಲಗಕೆನಡೆತಂದುಬರಸಿದ | ನೋ
ಲೆಗಳಕಳುಹಿದನುಧರಣೀ | ಪಾಲಕರಬರಹೇಳೆನುತಹೊಯಿಸಿದನುಡಂಗುರವ ॥

ಹರಿದರರಸಾಳುಗಳುದಿಕ್ಕಾಗ | ಳರಸುಗಳನಗರಿಗಳಗತ್ತಲು | ಪುರವ
ಶೃಂಗರಿಸಿದರುಭೀಮನೃಪಾಲನಾಜ್ಞೆಯಲಿ ॥ ತರಿಸಿದನುಭಂಡಾರದಲಿನವ | ಭರಿ
ತವಾದಸುವಸ್ತುಗಳವಿ | ಸ್ತರಿಸಿಕಟ್ಟಿದರಗಲದಲಿವೈವಾಹಮಂಟಪವ ॥೫॥

ಹೊಳೆವದಂತದಕಂಭಗಳವು | ತ್ಥಳಿಯಸಾಲಿನಮೇಲುಕಟ್ಟಿನ | ತ
ಳತತೋರಣದೋರಣದಲೋವೆಗಳಅರಳೆಲೆಯ ॥ ಬಿಳಿಯಮುತ್ತಿನಸರದಪವ
ಳದ | ಬಿಳಿಯಚಾಮರಿಯಮೇಲುಕಟ್ಟನೊಳ್ | ಪೊಳಲುಮಿಗೆರಂಜಿಸಿದರುಸತಿ
ಯವಿವಾಹಮಂಟಪವ ... ... ॥೬॥

ವಾರಣದವೀಧಿಗಳ ಸಾದಿನ | ಸಾರಣೆಯಕತ್ತುರಿಯಮಿಗೆವ | ನ್ನೀರ
ಚಳೆಯದಪರಿಮಳದಕುಂಕುಮದಕಾರ್ಣೆಯ ॥ ತೋರಣದತೊಡಿಗೆಗಳಘನ
ಶೃಂ | ಗಾರಮೆರೆವತಿಕೇರಿಕೇರಿಯ | ನಾರಿಯರಸಂದಣಿಸಿವಿರಾಜಿಸಿದುದುವಿ
ದರ್ಭಪುರ ... ... ... ॥೭॥



ಮಾಳವಾಂಧ್ರಕಳಿಂಗಕೋಸಲ | ಚೋಳಮತ್ಸ್ಯವರಾಳಕೊಂಗಣ |
ಗೌಳಕುಂತಳಮಗಧಬರ್ಬರಪಾಂಡ್ಯಕರ್ನಾಟ ॥ ಲಾಳವಂಗಸುರಾಷ್ಟ್ರಕು
ರುಸೇ | ಪಾಳಘೂರ್ಜರಸಿಂಧುಮರುಪಾಂ | ಚಾಲಮೊದಲಾದಖಿಳಧರಣೀಪಾ
ಲರೈದಿದರು ... ... ॥೮॥

ಧರಣಿವಳಯದಿಗಂತದವನೀ | ಶ್ವರರುಭೂಸುರಸಿದ್ಧವಿದ್ಯಾ | ಧರರು
ವಸುಕಿಂಪುರುಷಸುಜನರುಮಲ್ಲಗಾಯಕರು ॥ ಪರಮಋಷಿಗಳುಪಂಡಿತರು
ಕವಿ | ವರರುನಟಗಾಯಕರುದೈವ | ಜ್ಞರುಗಣಿಕಸಂದೋಹಮೆರದುದು
ರಾಯಕೇಳೆಂದ ... ... ॥೯॥

ಆಸಮಯದಲಿನಾರದನುಹರಿ | ವಾಸುದೇವನೆಯೆಂಬಪದಣವಿ |
ಲಾಸಗಳವೀಣೆಯಲಿನುಡಿಸುತಮುನಿಗಳೊಗ್ಗಿನಲಿ ॥ ವಾಸವನಸಭೆಗೈತರಲು
ಸಂ | ತೋಷದಿಂದಿದಿರೆದ್ದುಘನಸಿಂ | ಹಾಸನದಿಕುಳ್ಳಿರಿಸಿಕೈಮುಗಿದೆಂದನ
ಮರೇಂದ್ರ ... ... ॥೧೦॥

ಎತ್ತಣಿಂದೈತಂದಿರೂರ್ವಿಯೊ | ಳುತ್ತಮರುಧರಣೀಶರಲಿನೆರೆ |
ಸತ್ಯಧರ್ಮಸುಶೀಲರಾರುಂಟಲ್ಲಿಗುಣವೇನು ॥ ಚಿತ್ತವಿಸುಮುನಿನಾಥನೆನಗದ |
ಬಿತ್ತರಿಸಿಪೇಳೆನಲುಸುರಮುನಿ | ಚಿತ್ತದಲಿನಸುನಗುತ ನುಡಿದನುಪಾಕಶಾಸ
ನಗೆ ... ... ॥೧೧॥

ಅಮರಪತಿಕೇಳವನಿಯಲಿಭೂ | ರಮಣರುಂಟಾನೇಕವದರೊಳು |
ನಿಮಗೆಪೇಳ್ವೆವಿದರ್ಭಪುರಪತಿಭೀಮನೃಪತನುಜೆ ॥ ಕಮಲಮುಖಿದಮಯಂತಿ
ಗೆಪ್ಪನೆ | ಸಮತಳಿಸಲುಚಿತದಿಸ್ವಯಂವರ | ಕಮಿತಬಲನೃಪರೈದಿಬರುತಿದೆ
ಧರಣಿಯಗಲದಲಿ ... ... ॥೧೨॥

ಅಲ್ಲಿಸೆರದಸಮಸ್ತಧರಣೀ | ವಲ್ಲಭರನೇನೆಂಬೆಪಟ್ಟಣ | ವೆಲ್ಲತುಂಬಿದೆ
ದೇಶದೇಶಾಂತರದಯಾಚಕರು ॥ ನಿಲ್ಲದೈತರುತಿದೆವಿವಾಹವ | ನಲ್ಲಿನೋಡುವೆವೆ
ನುತಮುನಿಕರ | ಪಲ್ಲವದವೀಣೆಯಲಿಹಂಸೆಯನೇರಿಹೊರವಂಟ ॥೧೩॥

ಅರಸಕೇಳಮರೇಂದ್ರನಾಮುನಿ | ವರನವಚನವಕೇಳಿಹೆಚ್ಚಿದ |
ವಿರಹವಲಿಕರಸಿದನುಸತಿಯರಿಗೆಂದನೀಹದನ ॥ ಪರಮಸತಿದಮಯಂತಿಯುಳ
ನುಪ | ಚರಿಯದಲಿಮನಗೊಲುವಮಾಡೆಂ | ದುರುತರದವಸ್ತುಗಳನಿತ್ತಬಲೆಯ
ರಬೀಳ್ಕೊಟ್ಟ ... ... ॥೧೪॥

ತರಿಸಿಯೇರಿವದಿವ್ಯರಥವನು | ಕರಸಿದನುಯಮವರುಣವಾಯು |

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

Digitized by ROJA MUTHIAH RESEARCH LIBRARY

ವ್ಯರುಸಹಿತಹೊರವಂಟನುಮುನಿಪತಿಯನಮರೇಂದ್ರ ॥ ಧರೆಗಿಳಿದುಬರೆಯುಂದಿ ಮಾರ್ಗದಿ । ಸ್ಮರನರೂಪಿನನೈಷಧನಕಂ । ಡರುಮನೋರಾಗದಲಿಕಾಣಿಸಿ ಕೊಂಡರುಚಿತ್ರದಲಿ ... ... ॥೧೫॥

ನಳನಮಿತ್ರನತೇಜದಿಂಧರೆ । ಗಿಳಿವಮಹಿಮರಕಂಡುಬರದಿಂ । ಇಳೆಗಿಳಿದುಭಕ್ತಿಯಲಿ ನಳಕೈಮುಗಿದುನಿಂದಿರಲು ॥ ತಳತಹರುಷಾನಂದದಲಿ ಬರ । ಕಳದುಬಿಗಿಯಪ್ಪಿದರುರಾಯನ । ಚಲುವನೀಕ್ಷಿಸಿನಲಿದುಕೊಂಡಾಡಿದರು ಮನವಲಿದು ... ... ॥೧೬॥

ಕುಶಲವೇನಳನೃಪತಿಬಾರೈ । ಶಶಿಕುಲೋದ್ಭವನಿನ್ನಪಿತನೀ । ವಸು ಧೆಗಧಿಪತಿವೀರಸೇನನು ಪರಮಸಖನೆಮಗೆ ॥ ಪೊಸದುಬೇಡುವಕಾರ್ಯವಿದು ಬರ । ವಸದಿಬಂದೆವುನಮಗೆಫಲಸಿ । ದ್ಧಿಸಿದುದುಪಕಾರಾರ್ಥನಿನ್ನಿಂದಾಗ ಬೇಕೆಂದ ... ... ॥೧೭॥

ಕರಿಗಮನಚಿತ್ತೈಸುನಾವೀ । ಸ್ವರರುನಿಮಗಂತರವೆಸಾಕಂ । ತಿರಲಿನಿಮ್ಮಪದಾಬ್ಜದರುಶನವಾಯಿತಿಂದಿನಲಿ ॥ ಹರುಷದಿಂದೆನಗೇನಬುದ್ಧಿ ಯ । ಕರುಣಿಸುವಿರವಮಾಳ್ಪೆನೆನೆಸಚಿ । ಯರಸನಾನುಡಿಕೇಳಿ ನಗುತಿಂತೆಂ ದನಾನೃಪಗೆ ... ... ॥೧೮॥

ಭೂತಳದೊಳಹಸತಿಮಣಿರಲಿರೂ । ಪಾತಿಶಯದಮಯಂತಿಯಾನಲಾ । ಮಾತಿನಲಿಮನವಲಿದುದವಳಲಿಯೆನಗೆನೀಪೋಗಿ ॥ ಆತಳೋದರಿಗುಚಿತವಚ ನ । ಪ್ರೀತಿಪೂರ್ವಕದಿಂದಸತಿಯುಳ । ನೀತಿಳುಹಿಯನುಕೂಲವನುಮಾಡೆಂ ದನಮರೇಂದ್ರ ... ... ॥೧೯॥

ಈತಪಿತೃಪತಿಯಮರಪತಿತಾ । ನೀತವರುಣನುವಾಯುವೀತನು । ಮಾತಮನ್ನಿಸುಮಾಡುತನಗುಪಕಾರವನುನೀನು ॥ ಈತತೂಕ್ಷಣದೃಶ್ಯವರವ ನು । ಪ್ರೀತಿಯಿಂದೊಲಿದಿತ್ತವಿಂದಿನೊ । ಳಾತಲೋದರಿವಲಿವಹದನನುಮಾ ಡುಹೋಗೆಂದ ... ... ॥೨೦॥

ಕೇಳುತಾಮಾತಿನಲಿಚಿಂತೆಯ । ತಾಳಿದನುಚಿತ್ತದಲಿನಳನೃಪ । ಲೋಲಲೋಚನೆತನ್ನನೇಪತಿಯೆಂದುಬಯಸಿಹಳು ॥ ಈಲತಾಂಗಿಯಮೇಲೆಪರ ಮವಿ । ಶಾಲಮನವಿಹುದಿನ್ನುಶಿವಶಿವ । ಬಾಲಕಿಯಬೆಸಗೊಳಲಾನಾಲಿಗೆಯಂ ತುತನಗೆಂದ ... ... ॥೨೧॥

ಎಂದುಮನದೊಳುಮರುಗಿವಿನಯದೊ । ಳೆಂದನೆಲೆಯಮರೇಂದ್ರ

Digitized by ROJA MUTHIAH RESEARCH LIBRARY



ನಿಮಗಾ । ಮಂದಗಮನೆಯವಳಗುಮಾತೆಂದೆನಗೆಪೇಳ್ವರಲ ॥ ಹಿಂದುಗಳದರೆ ಮನಕೆಖತಿನಿಮ । ಗಿಂದುಬಾರದೆಬಿತದುಲೋಕದಿ । ಯೆಂದುಮುಖಿಯರಗು ಣವತಿಳಿವಡಸಾಧ್ಯಕೇಳೆಂದ ... ... ॥೨೨॥

ಆಯುವತಿಯರುಕಾರ್ಯಗತಿಗಳ । ಬೀಯಮಾಳ್ಪರುಕುಟಿಲವಿದ್ಯದಿ । ಮಾಯೆಗಳಹೆಣ್ಣವರುಸತ್ಯದಿಹುಸಿಯನಾಡುವರು ॥ ಕಾಯವಳಿದರುಅಂತರಂ ಗದ । ಬಾಯಬಿಡರನ್ಯಾಯಮಾಡುವ । ರಾಮತಾಕ್ಷಿಯರಂಗವಿದುಯಮರೇಂ ದ್ರಕೇಳೆಂದ ... ... ॥೨೩॥

ಕಪಟವನುಬಿತ್ತಾತ್ಮಬುದ್ಧಿಯೊ । ಳುಪಮೆಗಾಣದೆನುಡಿದುಹೊ ಳೆವರು । ಚಪಲಚಿತ್ತದಿಮನವವಂಚಿಸಿಮಾತನಾಡುವರು ॥ ಗುಪಿತಕಳೆವಡರಾ ಪ್ತರೊಡನೆಯ । ನಪಹರಿಸಿಸಾಹಸದಿಮೆರೆವರು । ನಿಪ್ಪಣೆಯರಿಗಿದುಸಹಜ ಗುಣವಮರೇಂದ್ರಕೇಳೆಂದ ... ... ॥೨೪॥

ಸಾವಿಗೆಣಿಸರುಮನದಿಸತ್ಯವ । ಭಾವಿಸರುಹುಸಿಯೊಳುಮುದೋ ರುವ । ರಾವಪರಿಯಲಿಹೃದಯಗೊಡರನೃತಗಳನಾಡುವರು ॥ ಪಾಪವರ್ತನವಿ ಲ್ಲಸತ್ಯಕೆ । ಪಾವಕನಮುಟ್ಟುವರುಸತಿಯರಿ । ಗಾವಪರಿಯಲಿನಂಬಬಹುದೈ ಯನುತಹೊರವಂಟ ... ... ॥೨೫॥

ನಲವುಹಿಂಗಿದಮನದಿನೃಪಮಾ । ರ್ಗಲವನೆಲ್ಲಿಯೆಯಿರಿಸಿಬರುತಿರೆ । ತಳತರರತ್ನಪ್ರಭೆಯಸಾಲಿನಸೌಧಪಂಕ್ತಿಗಳ ॥ ಹೊಳೆವಕಲಶದಗೋಪುರದಕೊ । ತ್ತಳದಸಾಲಿನಕೋಟೆಯನುಕಂ । ಡೆಳಘುಭುಜಬಲನೃಪತಿಪ್ರೇಕ್ಷಿವಿದರ್ಭಪ ಟ್ಟಣವ ... ... ॥೨೬॥

ಅರಮನೆಯಬಾಗಿಲಿಗೆಬರಲಿ । ತ್ತರದವೇದಿಕೆಗಳಲಿಪಟುಭಟ । ರುರುತರದಕ್ಕೈದುಗಳಕಾಹಿನದ್ವಾರಪಟ್ಟದಲಿ ॥ ಬರಲುಕಂಡನುತರುಣಿಯರ ಸಂ । ಚರಿಸುತಿಹಸಡಗರವನಳಭೂ । ವರನದೃಶ್ಯದರೂಪಿನಲಿಪೊಳಹೊ ಕ್ಕನರಮನೆಯ ... ... ॥೨೭॥

ಆಗಲಾದಮಯಂತಿಚಿತ್ರದ । ಬಾಗಿಲುಪ್ಪರಿಗೆಯಲಿರ್ಪ್ಪದ । ತೂ ಗುಮಂಚದಹಾಸಿನಲಿಕುಳ್ಳಿರಲುಕೆಳದಿಯರು ॥ ಆಗರುಮೆಯೋಲಗದೊಳಿರುತಿ ರೆ । ಪೂಗಣೆಯಮನೆಸುಗೆಯಲಿನಳಚರಿ । ತಾಗಮದಕಥನಗಳತಾನಾಲಿಸುತ ಚಿತ್ತದಲಿ ... ... ॥೨೮॥

ಬಂದರಲ್ಲಿಗೆಸುರಪಕಳುಹಿದ । ಮಂದಗಮನೆಯರಬಿಳಪಸ್ತ್ರವ ।

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ತಂದುಕಾಣಿಕೆಗೊಟ್ಟುಕೈಮುಗಿದೆರಗಿನಿಂದಿರಲು ॥ ಬಂದಸತಿಯರನೋಡಿನೀ
ವೆ । ಲ್ಲಿಂದಬಂದಿರಿನಿಮ್ಮಹೆಸರೇ । ನೆಂದುಬೆಸಗೊಳಿಪಿನಯದಿಂದರುಹಿದರು
ಮಾನಿನಿಗೆ ... ... ॥೨೯॥

ತಾಯೆಕೇಳವರೇಂದ್ರನಿಮ್ಮನಿ । ಜಾಯತದಚೆಲುವಿಕೆಯುಕೇ
ಳಿದು । ಕಾಯಜನಶರಹತಿಗೆನೊಂದುರಿಕಳುಹಿದನುಪವುಗೆ ॥ ಆಯತದಭೂ
ಷಣವತೊಡುಸುರ । ರಾಯನಿಗೆಸತಿಯಾಗುಮರ್ತ್ಯದ । ರಾಯರಸ್ಥಿರನರ
ರನೆಚ್ಚದಿರೆಂದರಾಸತಿಗೆ ... ... ॥೩೦॥

ಪದವಿಯಾವುದುಲೋಕದಲಿಸುರ । ಪದವಿಯಲ್ಲದೆಬೇರೆಮಿಕ್ಕನ ।
ಪದವಿಯುಂಟೇತಾಯೆಭಾವಿಸಿನೋಡುಚಿತ್ತದಲಿ ॥ ಸದನಪೇನರಜನ್ಮದವರಿಗೆ ।
ಪಡೆಗಲರಿಯದುಪುಣ್ಯನಿನಗಿದು । ಸುದತಿಕರುಣಿಸುಪಾತನೆಂದರುನಗುತರಂ
ಭೆಯರು ... ... ॥೩೧॥

ಅಲರುಪರಿಮಳದೆಡೆಗೆತುಂಬಿಗೆ । ಳೊಲಿದುಪೋಪಂದದಲಿಲೋಕ
ದೊ । ಳಲರುತಾಹಾರೈಸಿಪೋಪುದೆಯಾಳಿಗಳಿದ್ದೆಡೆಗೆ ॥ ಸಲೆತವಕದಿಂದಮರ
ಪತಿಯಡೆ ॥ ಗೊಲಿದುನೀಪೋಪಂತೆಸುರಪತಿ । ನೆಲವಿನಿಂದಲೆನಿನ್ನಬಳಗೈದಿ
ದರೆಪುಣ್ಯಫಲ ... ... ॥೩೨॥

ಎಲೆಲುಕೇಳದಳಾನುಡಿಯಸುರ । ಪನಿತೆಗೆಂದಳುಚಿತ್ತವೆಸಗೊ ।
ಬ್ಬನಲಿಶಿಲುಕಿತುಮರಳಿಪಡೆಕಮಲಾಕ್ಷಗಳವಲ್ಲ ॥ ಅನಿಮಿಷಾಧಿಪನಗದೇಪಾಂ
ಗನೆಯರಿರುತಿರೆಮನುಜಸತಿಪಾ । ವನವೆಬರಿದೆದುರಾಸೆಏನಗೇಕೆಂದಳಂದು
ಮುಖಿ ... ... ॥೩೩॥

ಮೆರಳಿದರುಊರ್ವಶಿಯರಿತ್ತಲು । ಬರುತನಳನೃಪತಿಲಕತಾಮನ ।
ಹರುಷದಲಿನಿಜರೂಪತಾಳ್ದನುರಾಜತೇಜದಲಿ ॥ ಅರಸನಿರೆದಮಯಂತಿಕಂಡ ।
ಚ್ಚರಿಯುಮನದೊಳುನಳನೊನಳಕೂ । ಬರಜಯಂತನೊಯನುತವಿಸ್ಮಯ
ಗೊಂಡಳಾತರುಣಿ ... ... ॥೩೪॥

ಎಂದುಸಂತೋಷದಲಿ ನಾರೀ । ವೃಂದಸಹಿತಿದಿರೆದ್ದು ವಿನಯದಿ ।
ನಿಂದುಕರಗಳಮುಗಿದು ಸಿಂಹಾಸನದಿಕುಳ್ಳಿರಿಸಿ ॥ ಕಂದುಮುಕ್ತಾಫಲಗಳನು
ಮುದ । ದಿಂದಕಾಣಿಕೆಯಿತ್ತುಸತಿಯರ । ಸಂದಣಿಯಕೆಲಕೊತ್ತಿನುಡಿದಳುಪ
ಧುರವಚನದಲಿ ... ... ॥೩೫॥

ಆರುನೀವೆಲ್ಲಿಂದಬಂದಿರಿ । ಕಾರಣವಿದೇನೆಮ್ಮರಾಜ । ದ್ವಾರಪನು



ನೀವ್‌ಹೊಕ್ಕಹದನೇನಿಲ್ಲಿಗಂಡುನೊಣ ॥ ಸೇರುಮ್ಮದುನೀಪಸಾತದ । ವೀರ
ರತಿಸೌಂದರ್ಯರೆನೆನಳ । ಭೂರಮಣನಸುನಗುತನುಡಿದನುಸತಿಗೆವಿನಯದಲಿ ॥

ತರುಣಿ ಕೇಳವರೇಂದ್ರನಟ್ಟಿದ । ಚರನುತಾವಿಗೆ ನಿನ್ನರೂಪನು ।
ಸುರಮುನಿಪನರುಹಿದರೆ ಕೇಳದನಿಂದ್ರವಿರಹದಲಿ ॥ ಕರಗಿಮದನನಶರಹತಿಗೆ
ಮನ । ಮರುಗಿಬಂದಿಹನಿಲ್ಲಿಗಾತಂ । ಗರಸಿಯಾಗೆನೆಕೇಳಮುಳಿದಿರುಹಿದ
ಳುದಮಯಂತಿ ... ... ॥೩೭॥

ಬಲ್ಲವರುನೀವಧಿಕರೆಮ್ಮೊಳು । ಸಲ್ಲದೀನುಡಿಯಾತಕಿದುಕಟ । ವಲ್ಲಭ
ನವಮಾತೇನುಸಾಕಂತಿರಲಿಯನಗಿನ್ನು ॥ ವಲ್ಲಭನುನಳನೃಪತಿಯಲ್ಲದೆ । ನಲ್ಲರುಂ
ಟೇಜಗವಿನೀವುಸುರ । ರಲ್ಲನಿಮ್ಮಭಿದಾನವೇನೆಂದಳುಸರೋಜಮುಖಿ ॥೩೮॥

ದೂತರನು ಕುಲಗೋತ್ರಗಳನೀ । ನೇತಕರಸುವೆ ತರುಣಿಯಿಂದ್ರ
ನು । ಖ್ಯಾತಪುರುಷನುಬಯಸುವಮುಕ್ತತಪುಣ್ಯನಿನಗೈಸೆ ॥ ಭೂತಳದನರ
ರಧಿಕರೇಸಂ । ಪ್ರೀತಿಯೇಕವರಲ್ಲಿಬಿಡುಪುರು । ಹೂತನನುಕೈವಿಡಿದುನೀ
ಸುಖಿಯಾಗುನಡೆಯಂದ ... ... ॥೩೯॥

ಇಳೆಯಮರ್ತ್ಯರು ನಾಕನಿಳೆಯುರಿ । ಗಳವೆಯಂತರವಲ್ಲನುಡಿಗಳು ।
ಕುಲಗಿರಿಗೆನೊರಜಂತರವೆನೀನೋಡುಚಿತ್ತದಲಿ ॥ ನಳನೃಪನಬಯಸುವಡೆನಿನ
ಗವ । ನೊಲಿವನೇಧಾತ್ರೀಶರೊಳಗ । ಗ್ಗಳನೆಸಾಕೆಂದೆನಲುಕನಲಿದುನುಡಿ
ದಳಾತರುಣಿ ... ... ॥೪೦॥

ಮಾನವಾಧೀಶ್ವರ ರೊಳಗೆಸನು । ಮಾನವೃಕ್ಷವ ಸತ್ಯಸಂಧನಿ । ದಾ
ನಿಹಿಮಕರವಂಶಪಾವನಸಾರ್ವಭೌಮನಲ ॥ ಆನರೇಂದ್ರಗೆಸರಿಯೆಮನುಮು
ನಿ । ದಾನವಾಮರರಿನ್ನುನಿಮಗೀ । ಹೀನವೃತ್ತಿಯಮಾತದೇಕೆಂದಳುಸರೋ
ಜಮುಖಿ ... ... ॥೪೧

ನಿಷಧಪತಿಯೇಸತಿಯನುತಭಾ । ವಿಸಿದೆನಾತನಕರುಣವೆನ್ನಲಿ ॥
ಪಸರಿಸಿದಡದುಲೇಸುಲೇಸಲ್ಲದೊಡೆನಳನೃಪಗೆ ॥ ಅಸುಪತೆರುವೆನುಯನ್ನಫಲಿ
ಸಿ । ದ್ಧಿಸಲಿನಿಜಸಂಕಲ್ಪವೆಂದಾ । ಶಶಿವದನೆಕಂಬನಿಯುಮಿಡಿದಳುಸಖದಕೊ
ನೆಯಲ್ಲಿ ... ... ॥೪೨॥

ಕರಗಿದಂತಃಕರಣನೃಪತಿಗೆ । ಸರಸಿಜಾಕ್ಷಿಯದೃಢವಕಂಡನು । ಕರು
ಣಲತೆಕುಡಿದೋರಿತಾಕ್ಷಣನುಡಿದನಾಸತಿಗೆ ॥ ಸರಸಿಜಾನನೆಕೇಳುತಾನೇ । ಧರ
ಣಿಪತಿನಳನೆನಲುಲಜ್ಜಿಸಿ । ಶಿರವನಮುಬಾಗಿದಳುಮತ್ತಿಂತೆಂದಳಾನೃಪಗೆ ॥೪೩॥

Digitized by ROJA MUTHIAH RESEARCH LIBRARY

ನಾಕನಿಳೆಯುರುಕುಟಿಲವಿದ್ಯರ | ನೇಕಮಾಯಾವಿದರು ಯಿಳೆಯೊ
ಳು | ವಿಕೃತರುನಾವುನಿಮ್ಮನಂಬುವಪರಿಯುದೆಂತೆನುತ ॥ ಸಾಕುಮಾನಸಂ
ಬಾವರಿಹೃದಯದ | ಚೋಕೆಯುಲಿಕುರುಹೆನಗೆತೋರೆನೆ | ಲೋಕಮಲಲೋಚ
ನೆಗೆನುಡಿದನುನೃಪನಿದರ್ಶನವ ... ॥೪೪॥

ವನಜಮುಖಿನಿನ್ನಂತರಂಗದ | ಮನವನೋಡುವಬಗೆಯೊಳೀನಿಂ |
ದಿನಲಿಯುನಿನಿಷನೆಂದುಪೇಳದೆಯಿದರತಪ್ಪೇನು ॥ ಮನದಸಂಶಯವೇನುಹಂ
ಸೆಯು | ನಿನಗೆಕಳುಹಿದೆಸಾಯುಭ್ರಾದಿ | ವನಿತೆನೀನಿದತಿಳದುನಂಬುವ್ರದೆನ್ನ
ನೀನೆಂದ ... ... ॥೪೫॥

ನಳನೆನಲುತನು ಪುಳಕಜಾಲದಲಿ | ಮುಳ್ಳುಗಿ ಹೋಂಪುಳಯಾಗಿತನ್ನ
ಯ | ಕೆಳದಿಯರಮರೆಗೊಂಡುಹರುಷದಹೃದಯಭೀತಿಯುಲಿ ॥ ತೊಲಗಿದಳು
ನೃಪನಿತ್ತಪುರವನು | ಕಳವುಬಂದನುಮನದವಿರಹದಿ | ಬಳಲುತಿಹದೇವೇಂ
ದ್ರನೆಡೆಗೈತಂದನೊಲವಿನಲಿ ... ... ॥೪೬॥

ಬಂದುಭಯುಭಕ್ತಿಯುಲಿ ನಳನೃಪ | ಯಿಂದ್ರಮಾರುತಯಮವರುಣ
ರಿಗೆ | ವಂದಿಸುತದಮಯಂತಿಪೇಳವಮಾತವಿವರಿಸಲು ॥ ಯಿಂದುನಿನ್ನಲಿಕುಟಿಲ
ವಿಲ್ಲರ | ವಿಂದವದನೆಯರಿಂದಕೇಳದೆ | ವೆಂದುಸಂತೈಸಿದರುಭಯುಗೊಂಡಿಹನೃ
ಪಾಲಕನ ... ... ॥೪೭॥

ನಳನಮುಖಿಯುರಕಪಟಚಿತ್ರವ | ತಿಳಿಯಲಾರಿಗೆಸಾಧ್ಯಕೇಳೈ |
ನಳನೃಪತಿನಮಗಾಗಿಬಳಲಿದೆಯೆನುತಲುಪಚರಿಸಿ ॥ ಒಲಿದುಭೂಷಣವಿತ್ತುಕ
ಳುಹಿದ | ರಿಳೆಯುವಲ್ಲಭಗಿತ್ತುತಾವೃತಂ | ಮೊಳಗೆಯಾಲೋಚಿಸಿದರಾಯಾಮ
ರಿಂದ್ರವಮಾರುತರು ... ... ॥೪೮॥

ಲಲನೆವ್ರೊಲಿವ್ರುದಕಿನ್ನು ಹದನಿದು | ಹಲವ್ರುಮಾತೇನೆಂದುನಾಲ್ವರು |
ನಳನರೂಪವತಾಳ್ದರಿತ್ತಲುಧರಣಿವಲ್ಲಭರು ॥ ಒಲಿವುಬರುತಿರೆಸ್ವರ್ಗಮರ್ತ್ಯ
ವಳಯುಸುಜನರುಸಿದ್ಧಕಿನ್ನರ | ರಾಲಿಯುಗುಹ್ಯಕ ಗರುಡಗಂಧರ್ವಾಮರೇಂ
ದ್ರರಲಿ ... ... ॥೪೯॥

ನರವರಗಣಿಶದರಸುಗಳುಕರಿ | ತುರಗರಥಪಮಯುಳವ್ರುಸಂದಣಿ |
ಮೊರೆವಶಂಖವ್ರುದುಗ ತಂಬಟಭೇರಿನಿಸ್ಸಾಳೆ ॥ ಉರುಬಿತಲ್ಲಿವಿದರ್ಭಪುರಪ
ತಿ | ಧರಿಸಲಾಪನೆಹರುಷಾದೇ | ಪರಸಬಣ್ಣಿಸಲರಿಯೆನೆರದಮಹಾಮಹೀ
ಸುರರ ... ... ॥೫೦॥



ಅವರವರ ಕರಕರದು ವಿನಯುದೊ | ಳವರವರ ಪರಿಯಾದಿಮೇರೆ
ಯೊ | ಳವರವರಸತ್ಕರಿಸಿಕುಳ್ಳಿರಿಸಿದನುಭೀಮನೃಪ ॥ ಅವರವರಿಗುಚಿತೋ
ಪಚಾರದೊ | ಳವರವರಮನ್ನಿಸುತಲಿರ್ದನು | ಭುವನಪತಿಗಳನೇಕರನುಸಭೆ
ಯೊಳಗೆಕೇಳೆಂದ ... ... ॥೫೧॥

ಒಂದುಕಡೆಯುಲಿತಾಳವಾದ್ಯಳೆ | ವೊಂದುಕಡೆಯುಲಿಸರಸನೃತ್ಯಗ |
ಳೊಂದುಕಡೆಯುಲಿಸಾರತರಸಂಗೀತಸಾಹಿತ್ಯ ॥ ವೊಂದುಕಡೆಯುಲಿಗದ್ಯಪದ್ಯ
ಗ | ಳೊಂದುಕಡೆಯುಲಿತರ್ಕಶಾಸ್ತ್ರಗ | ಳೊಂದುಕಡೆಯುಲಿಹಾಸ್ಯವಿಂದಿರು
ತಿರ್ದುದಾಸ್ಥಾನ ... ... ॥೫೨॥

ಇತ್ತಲಾದಮಯಂತಿಗೆಣ್ಣೆಯ | ನೊತ್ತಿದರುಶೋಭಾನಗಳವಾ |
ಡುತ್ತಗೆಲಿದರುತಿಗುರುವಿಗೆವಿವಿಧೋಪಚಾರದಲಿ ॥ ಉತ್ತಮಾಂಗನೆಗಳವಡಿ
ಸೆನಲಿ | ವೃತ್ತಸತಿಯರುಮಜ್ಜನದಮನೆ | ಗತ್ಯಧಿಕಹರುಷದಲಿದಮಯಂತಿ
ಯನುಕರದೊಯ್ದು ... ... ॥೫೩॥

ಬೆರಸಿದರು ಪನ್ನೀರಹೊಂಗೊ | ಪ್ಪರಿಗೆಯಲಿಮೊಗೆಮೊಗದುನಾರಿ
ಯ | ರೆರವರಂಗನೆಗಮಲಚಂದನಗಂಧಪರಿಮಳವ ॥ ತರುಣಿಯರುಲೇಪಿಸಿದರ
ರಸಿಗೆ | ವರದುಕೂಲಾಭರಣಗಳಶೃಂ | ಗರಿಸಿದರುದಮಯಂತಿಯೊಪ್ಪಿದಳಧಿ
ಕತೇಜದಲಿ ... ... ॥೫೪॥

ಮಡದಿಯರುಬಳಸಿದರುಸುತ್ತಲು | ಹಡಪಚಾಮರಗಿಂಡಿವ್ರೊಳಗ |
ದೊಡನಿರಲುಬಂದಳುಸಿತಾಬ್ಜಕಲಕ್ಷ್ಮಿಯಂದದಲಿ ॥ ಎಡಬಲದೊಳಹಕಂಚು
ಕಿಗಳು | ಗ್ಘಡದವಾಯವಧಾರಿನಲಿವ್ರುಂ | ಗುಡಿಯುಸುಖಿಯಾಗಗಣದಲಿನಡೆ
ತಂದಳಂದುಮುಖಿ ... ... ॥೫೫॥

ಕುಡಿತೆಗಂಗಳಶಿರಿಮುಡಿಯುಬಡ | ನಡವ್ರುಕೆಳೆವತಿಬೆಡಗಿನಲಿಭ್ರೂಂ |
ಗೊಡವೊಲೆಯುವೈಯಾರದುಡುಗೆಯುನೆರಿಯುಸಡಗರದ ॥ ತೊಡರರುಣರುಣ
ರವದವೊಲ್ಲದಿ | ಯಿಡುವಗವುನದಭರದಿಕಿರುಬೆಮ | ರಿಡುತಬಂದಳುಸತಿಯುರೊ
ಡನೆವಿವಾಹಮಂಟಪಕೆ ... ... ॥೫೬॥

ಅವನಿಪತಿನಿಜಕುಮರಿಗೆಂದನು | ವಿವಿದಗತ್ನದಮುಕುಟವರ್ಧನ | ಭು
ವನಪತಿಗಳನೇಕವಿದಲಾಸಿಂಹಪೀಠದಲಿ ॥ ಯುವತಿನೋಡಿತ್ತರದೊಳಹನೃ
ಪ | ನಿವಹದಲಿನೀಹಾಯ್ಕುಮನವಿ | ದ್ದವನಕೊರಳಿಗೆನುತ್ತಕೊಟ್ಟನುಪು
ಷ್ಪಮಾಲಿಕೆಯು ... ... ॥೫೭॥

Digitized by ROJA MUTHIAH RESEARCH LIBRARY

ಬಂದಳಾ ದಮಯಂತಿ ನೃಪಸಭೆ । ಗೆಂದುಹೊಕ್ಕಳು ಕೆಳದಿಯರು ಮುಂದೆ । ಹಿಂದತೋರಿದರಲ್ಲಿಯಿಪ್ಪರಿವರೆಂದುವಿವರಿಸುತ ॥ ಮುಂದೆಬರೆಕೈತಂಬಿಯರುಬಲು । ಸಂದಣಿಯಕೆಲಕೊತ್ತಿಸುತಲಿರ । ಲಿಂದುಮುಖಿನೋಡಿದಳು ಲಜ್ಜಾಭರದೊಳವನಿಪರ ... ॥೫೮॥

ಮಾಳವಾಧಿಪ ನೀತಮಗಧನೃ । ಪಾಲನೀತನು ಮತ್ಸ್ಯಕರ್ನಾಟೇ । ಪಾಳನೀತನುಕೋಸಲಾನ್ವಯನೀತಬರ್ಬರನು ॥ ಚೋಳನೀತನುಸಿಂಧುರಾಜನು । ಶೀಲನೀತಕಳಿಂಗಕುಂತಳ । ಪಾಲಕನನೋಡಿತ್ತಲಮರೇಶ್ವರನಪ್ರೋಲಗವ ... ... ॥೫೯॥

ಎನ್ನನೊಲಿದಿಹಳೆಂದುಕೆಲಬರು । ಸನ್ನೆಮಾಡಿದಳೆಂದುಕೆಲಬರು । ಗನ್ನದಿಂದೀಕ್ಷಿಸುತಲಿರ್ದರುಕೆಲರುಹುಬ್ಬಿನಲಿ ॥ ಎನ್ನನೋಡಿದಳೆಂದುಕೆಲಬರು । ಬಿನ್ನಣದಿಮಿಗೆಪ್ರೇರೆನೋಟದಿ । ಕಣ್ಣಿನಿಂದೀಕ್ಷಿಸಿದಳೆಂದಾಡಿದರುಕಲಕೆಲರು ... ... ॥೬೦॥

ಬಾಯಬಿಂಕದಸವಿಯನುಡಿಗಳ । ರಾಯಗಾಡಿದರಲ್ಲಿಕಮಲದ । ಳಾಯತಾಂಬಕಿನಳನರೂಪಿನನಾಲ್ವರಿರೆಕಂಡು ॥ ಮಾಯವಿದುತಾನರಿಯೆನಿವರನಿ । ಜಾಯಿತವನೆಂದೆನುತಮರಿದಾ । ವಾಯುಗತಿಯಲಿಬಂದುಹೊಕ್ಕಳುತನ್ನಮಂದಿರವ ... ... ॥೬೧॥

ಕಂಡುಪೇಕ್ಷಿಸಿಬಂದಳಂಗನೆ । ಮಂಡಲಾಧಿಪರೆಲ್ಲರನುಯದ । ಕಂಡುಭೀಮನೃಪಾಲ ತನುಜೆಯಬಳಿಗೆನಡೆತಂದು ॥ ಅಂಡಲೆದುಬೆಸಗೊಂಡಡೆಂದಳ । ಖಂಡಲನಮಾಯಗಳವಿವರಿಸೆ । ಹಿಂಡುಬುದ್ಧಿಯನುಳ್ಳನೃಪಚಿಂತಿಸಿದಭಾರತಿಯ ... ... ॥೬೨॥

ವಾಣಿಪಂಕಜಪಾಣಿಬ್ರಹ್ಮನ । ರಾಣಿಪನ್ನಗವೇಣಿಸ್ವೀಕೃತ । ಶ್ರೋಣಿಸುರನಿಕುರುಂಬವಂದಿತಸತ್ಯಸಂಚಾರಿ ॥ ಆಣಿಸ್ತ್ರೀಕುಲರನ್ನವರಗೀರ್ವಾಣಿರಕ್ಷಿಸುರಕ್ಷಿಸೆಂದಾ । ಕ್ಷೋಣಿಪತಿಕೈಮುಗಿದುಬೇಡಿದನಾಸರಸ್ವತಿಯ ॥

ನೆನೆಯಲಾಕ್ಷಣಬಂದಳಲ್ಲಿಗೆ । ವನಜನಾಭನಸೊಸೆಜಗತ್ಪಾವನೆಸುರಾರ್ಚಿತೆದೇವಿಭಕ್ತಾಶ್ರಿತಜನೋದ್ಧಾರಿ ॥ ಜನಪನೀನಿಂದಿನಲಿಯನ್ನನು । ನೆನದಹವನೇನೆನಲುಪದಯುಗ । ವನಜಕಾನತನಾಗಿಬಿನ್ನೈಸಿದನುಭಾರತಿಗೆ ... ... ... ॥೬೩॥

ನಿಗಮನುತೆಗೀರ್ವಾಣಿರಕ್ಷಿಸು । ಮುಗುದನು ಕರುಣದಲಿನೋಡುತಭೆ



ಲಗಣಿತದಿಭೂಭುಜರು ನೆರದಿದೆತಿಳಿಯದಾದೆಮಗೆ ॥ ಮಗಳಮನವಿಗಡಿಸಿತ್ರನಾಲ್ವರು । ಬೆಗಡುಗೊಳಿಸಿದರೆನಲುಭಾರತಿ । ನಗುತನುಡಿದಳುಕರದುದಮಯಂತಿಯಳನುಪಚರಿಸಿ ... ... ॥೬೪॥

ದೇವಮಾಯವಿದೀಗಕೇಳೆಲೆ । ದೇವಿಯಿಂದ್ರನಭಜಿಸೆನಲುಸಂಭಾವಿಸೀಯಳುಸಭೆಗೆಬಂದೆರಗಿದಳುಭಕ್ತಿಯಲಿ ॥ ದೇವಕುಲಸಂಭವರುರಕ್ಷಿಸಿ । ನೀವುಮಗಳೆಂದೆನುತಭಾವಿಸಿ । ಪಾವನರುತರಳೆಯನು ಪತಿಕರಿಸೆಂದಳಂಬುಮುಖಿ ... ... ... ೬೬॥

ಘಳಿಲನೇಪಥ್ಯಸ್ನವೇಪವ । ಕಳದುಮುಪವಮಾನವರುಣರು । ಬಳಿಕಸುರಪತಿಮೆಚ್ಚಿದಮಯಂತಿಯನುಕೊಂಡಾಡಿ । ನಳನೃಪನಕರಿಸಿದರು ಹುವ್ವಿನ । ಮಳೆಯಕರೆದರುದೇವದುಂದುಭಿ । ಮೊಳಗೆಯರಸಿನಕೊರಳಗಿಟ್ಟಳುಪುಷ್ಪಮಾಲಿಕೆಯ ... ... ॥೬೭॥

ಆಸಮಯದಲಿಭೀಮನೃಪಸಂ । ತೋಷಪಡೆಮುನಿವಧುಗಳಾಕ್ಷಣ । ಶೇಷೆತಳೆದರುಹರಸುತಾವಧುವರರಿಗಕ್ಷತೆಯ ॥ ಭೂಸುರರಮಂತ್ರದಿಂದಲಾಧರ । ಣೀಶಧಾರೆಯನೆರದನಲ್ಲಿವಿ । ಲಾಸದಿಂಮಾಡಿದರುಮುತ್ತೈದೆಯರುಶೋಭನವ ... ... ॥೬೮॥

ಮಂಗಳಾರತಿಯತ್ತಿದರುದೇ । ವಾಂಗನೆಯಗಮನಿಪಗೆಧರೆಯೊಳು । ತುಂಗವಿಕ್ರಮನಾಗೆನುತಹರಸಿದರುವಿನಯದಲಿ ॥ ಹಿಂಗದಮರೇಶ್ವರಮಹೋತ್ಸವ । ದಂಗವಸ್ತ್ರಾಭರಣವಿತ್ತುಸು । ರಾಂಗನೆಯರೊಡೆಗೂಡಿಕಳುಹೀಸಿಕೊಂಡನುಚಿತದಲಿ ... ... ॥೬೯॥

ಅರಸಕೇಳ್ವೈವಾಹಸಮನಂ । ತರದೊಳೈದನೆದಿವಸದಲಿಕೊ । ಪ್ಪರಿಗೆಯಲಿತುಂಬಿದರುಪನ್ನೀರಿನಲಿಕುಂಕುಮವ ॥ ಬೆರಸಿಹೊಯ್ದಾಡಿದರುಪ್ರಭೆಯದ । ತರುಣಿಯರುಪ್ರೋಕುಳಿಯಪರಿಮಳ । ಪ್ರೇರದುದವನೀತಳವಸುರನಿಕುರುಂಬನಲಿದಾಡೆ ... ... ॥೭೦॥

ಅರಸಕೇಳೈತನ್ನಬಾಂಧವ । ಧರಣಿಪರಮಂತ್ರಿಗಳಮುನಿಮುಖ್ಯರನುಗಾಯಕವಂದಿತರಭೂಸುರರಯಾಚಕರ ॥ ಹರುಷಮಿಗಿಲಾಧರಿಸಿಕರಿರಥ । ತುರಗವಸ್ತ್ರಾಭರಣದಿಂದುಪ । ಚರಿಸಿಭೀಮನೃಪಾಲನವರವರುಗಳಬೀಳ್ಕೊಟ್ಟ ... ... ॥೭೧॥

ಅಳಿಯನನುಮನ್ನಿಸುತಮಗಳಿಗೆ । ಹೊಳೆವಮಣಿಭೂಷಣದಪೆಟ್ಟಿಗೆ ।

Digitized by ROJA MUTHIAH RESEARCH LIBRARY
ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಗನುಗಜರಥತುರಗಹೇಮದಮಂಚೋಲಸೇರ ॥ ಬಳುವಳಿಯನಿತ್ತುವಸಿಪತಿ
ನಿಜ । ಬಲಸಹಿತಮಾಡಿದನುಪಯಣವ । ಪ್ರಲಿವಚಂಗಳಪಾಠಕರಸಂದಣಿ
ಯರಭಸದಲಿ ... ... ॥೨೨॥

ವರಮುಹೂರ್ತದೊಳೇರಿದನುಮಣಿ । ಕಿರಣದುನ್ನತರಥವನಳ
ಭೂ । ವರನುನಿಜಸತಿಸಹಿತಹೊಕ್ಕನುನಿಷಧಪಟ್ಟಣವ ॥ ಮೊರೆವಶಂಖಮೃ
ದಂಗಭೇರಿಗ । ಳುರುಬಿದಂಧಣಿರೆನಲುಮಿಗೆಮೋ । ಹರಿಸಿದವುನಿಸ್ಸಾಳತತಿ
ಘನವಾದ್ಯಘೋಷದಲಿ ... ... ॥೨೩॥

ಬಂದುಹೊಕ್ಕನುಅರಮನೆಯನೃಪ । ವೃಂದನಲಿಯಲುಸಕಲಜನ
ಸಹಿ । ತಂದುಸಿಂಹಾಸನಕೆಬಂದನುಸಚಿವರೊಗ್ಗಿನಲಿ ॥ ಇಂದುಮುಖಿದಮ
ಯಂತಿಯೊಡನಾ । ನಂದದಲಿಸಾಂಬ್ರಾಜ್ಯವಾಳಿದ । ನಂದುಪರನಗರಾಧಿಪತಿ
ಚನ್ನಿಗನಕರುಣದಲಿ ... ... ॥೨೪॥

ಅಂತು ಸಂಧಿ ೩ಕ್ಕೆ ಪದ್ಯ ೧೯೭ ಕ್ಕೆ ಮಂಗಳಮಸ್ತು.

## ನಾಲ್ಕನೆಯ ಸಂಧಿ

ಸೂಚನೆ॥ ಮರುಗೆಪುರಜನಜೂಜಿನಲಿಪು । ಷ್ಕರಗೆರಾಜ್ಯವ
ಸೋತುನಳಭೂವರನುನಿಜಸತಿಸಹಿತನಡೆತಂದನುವನಾಂತರಕೆ॥

ಪದನು॥ ಕೇಳಿದೈರಾಜೇಂದ್ರಧರ್ಮನೃ । ಪಾಲನೈಷಧನತುಳಸಂ
ಪದ । ದೇಳಿಗೆಯನೇನೆಂಬೆಸಪ್ತದ್ವೀಪದವನಿಪರ ॥ ಮೌಳಿಗಳುನೃಪನಂಘ್ರಿ
ಕಮಲದೊ । ಳೋಲಗಿಸುತಿಹುದಮಳಕೀರ್ತಿಯ । ಡಾಳಸಿತುತ್ರೈಜಗವನವ
ನೀನಾಥಕೇಳೆಂದ ... ... ॥೧॥

ಇಂತೆಸೆವಸಂಪತ್ತಿನಲಿಭೂ । ಕಾಂತನಳಚಕ್ರೇಶನಲಿದಮ । ಯಂ
ತಿಪಡೆದಳುಪುತ್ರಕನನಿಜಪುತ್ರಿಯೋರ್ವಳನು ॥ ಸಂತಸದೊಳಿರಲಾವಿದ
ರ್ಭಪು । ರಾಂತರದಿನಿರದಿರ್ದಜನಭೂ । ಕಾಂತರೊಡನೈತಂದುಹೊಕ್ಕರುತ
ಮ್ಮನಗರಿಗಳ ... ... ॥೨॥

ಸುರಪನಾಗವಿದರ್ಭಪುರವನು । ತೆರಳುತಮರಾವತಿಗಡಿಕ್ಪಾ ।
ರಸಹಿತವಲವಿಂದದಮಯಂತಿಯಚರಿತ್ರಯನು ॥ ಹರುಷವಿಂಗೆಕೊಂಡಾಡು
ತೈತರು । ತಿರಲುಮಾರ್ಗದಿಕಂಡರಾಕಲಿ । ಪುರುಷನನುಕುಟಿಲಾತ್ಮಕನನಿ
ಸ್ಸಾರಹೃದಯನನು ... ... ॥೩॥



ಕುರುಳುಜುಂಜುರುತಲೆಯತಗ್ಗಿನ । ಕೊರಳಕೆಂಗರಿಗಣ್ಣಮೋರೆ
ಯ । ಪರಕುಗತ್ತದಕೆಂಚುಮೀಸೆಯಮಲಿನವಸನದಲಿ ॥ ನೆರದಪೀಂಕರಾಳಭ
ಟರಿ । ತ್ತರದೊಳುಕ್ಕಿನತೇರಿನಲಿಕಲಿ । ಪುರುಷಕಾಣಿಸಿಕೊಂಡನಮರೇಶ್ವರ
ನನಸುನಗುತ ... ... ॥೪॥

ಆರುನೀಜಂಭಾರಿಕೇಳಿವ । ರ್ಯಾರುಯಮವರುಣಾದ್ಯರೇಸಂ ।
ಚಾರವೆತ್ತಲುನಿಮಗೆಯೆನಲುಮಹೇಂದ್ರನಸುನಗುತ ॥ ಕೋರಹಸ್ತದೊಳಂ
ದವಳನಿಗೆ । ನಾರಿದಮಯಂತಿಯನುಮದುವೆಯ । ಧಾರೆಯೆರೆಯಿಸಿಬಂದೆವೆನೆ
ಖತಿಗೊಂಡಕಲಿರಾಯ ... .. ॥೫॥

ಅನಿಮಿಷರುನೀವಧಿಕಬಲರಾ । ವನಿತೆಯನುಕೈಕೊಳ್ಳಲಾರದೆ । ಜ
ನಪನಳನಿಂಗಿತ್ತುಬಂದಿರಿಹರಮಹಾದೇವ ॥ ಎನಗೆನೇಮಿಸಿಕಳುಹಿನಿಮ್ಮ
ಯ । ಮನವಬಯಕೆಯಸಲಿಸುವೆನುಕೇ । ಳೆನಲುಸುರಪತಿನಸುನಗುತಕಲಿ
ಪುರುಷಗಿಂತೆಂದ ... ... ॥೬॥

ಲೇಸನಾಡಿದೆಕಲಿಪುರುಷನಿನ । ಗೀಸುಪೌರುಷವುಂಟೆನಮಗಿ ।
ನ್ನಾಸರೋರುಹಗಂಧಿಯಲಿಮನವಿಲ್ಲನಳನೃಪತಿ ॥ ಈಸಮಸ್ತನೃಪಾಲರಲಿ
ಸ । ದ್ಭೂಷಣನುಶೌರ್ಯೋನ್ನತನುಕಮ । ಲಾಸನಂಗಳವಲ್ಲನಿನ್ನಲಿಹರಿ
ವುದೇನೆಂದ ... ... ॥೭॥

ಎನಲುಖತಿಗೊಂಡೆಂದಕೇಳೆಲೆ । ಯನಿಮಿಷಾಧಿಪಯನ್ನನರಿಯೆ
ಯ । ದಿನಪನಿವಿರಿಲಿತಮದಗಾವಳಿಯೋಮಹಾದೇವ ॥ ಎನಗೆಸರಿಯಾರಿನ್ನು
ತಹೆನಾ । ವನಿತೆಯನುಕುಹಕವಲಿನಳಭೂ । ಪನನುಕೆಡಿಸಿಯಶೋಕಾನನಕೆಕಳು
ಹುವೆನುತಾನೆಂದ ... ... ॥೮॥

ಹರಿಹರಬ್ರಹ್ಮಾದಿದೇವರು । ನರಸುರಾಸುರಯಕ್ಷಕಿನ್ನರ । ಗ
ರುಡಗಂಧರ್ವಾದಿಸುಮನಸರೆಲ್ಲರನುಬಿಡದೆ ॥ ಹುರುಳುಗೆಡಿಸುವೆಸಾಕುನಳ
ಭೂ । ಪನನಮಾತೇನಿನ್ನುಲೋಕಾಂ । ತರದೊಳವರಿಲ್ಲೆನಗೆನೀಪಿಂತರಿಯಿ
ರೇಯಂದ ... ... ॥೯॥

ನಿಮಗೆಪೌರುಷವಿಲ್ಲನಳನಾ । ಕ್ರಮಿಸಿಕೊಂಡನುಸತಿಯಪುರು
ಷಾ । ಧಮರುನಿಮಗಿನ್ನೇಕೆಕೊಡಿವಬುವೇಷವನುತನಗೆ ॥ ಕಮಲಮುಖಿಯ
ನುನಿಮಗೆಪಟ್ಟದ । ರಮಣಿಯನುಮಾಡುವೆನುಯೆಂದು । ಭ್ರಮಿಸಿನುಡಿದನು
ಗರ್ವದಲಿಕಲಿಪುರುಷಸುರಪತಿಗೆ ... ॥೧೦॥

Digitized by ROJA MUTHIAH RESEARCH LIBRARY

ಕೇಳಿಕಿವಿಮುಚ್ಚಿದನು ಶಿವಶಿವ । ಬಾಳಲೋಚನನೆನುತವನಲಿ ।
ಖೂಳನಾಡಿದನುಡಿಗೆಸುರಪತಿಕನಲಿಖತಿಗೊಂಡು ॥ ಕೇಳುಮಾತುಗಳೇಕನಿನ
ಗಿದು । ನೀಲಮೇಘಶ್ಯಾಮನಿಗೆಸಮ । ಪಾಳಯನಿ ರೂಪನಳನೃಪಗೆಯೋಷಣೆಸು
ವುದೆಯೆಂದ ... ... ॥೧೧॥

ಭವಣಿಯೇಕೆಹಿಮಾಂಶುಕುಲಸಂ । ಭವನುಸುಜನೋದ್ಧಾರನೃಪ
ಕುಲ । ನಿವಹದೊಳುವಿಖ್ಯಾತನಿತ್ಯೋದ್ದಾನನಿರ್ಮಲನು ॥ ಖವಗಪವಿತ್ರ
ವೃಸದಾಸನ । ದವನಾತಕಹರಿವುದೆಂದಾ । ಭುವನಪತಿಗೆಣೆಯಾರುಲೋಕದೊ
ಳೆಂದನಮರೇಂದ್ರ ... ... ೧೨॥

ಹಿಡಿಯೆಮುನ್ನವೆಹಿಡಿದಬಳಿಕದ । ಬಿಡನುಮತವೆನ್ನಲ್ಲಿನಿಷಧನ ।
ನಡವಿಗೈಸದೆಮಾಣೆವೆಮಾತಾಡದಿರಿನೀವೆನಲು ॥ ಮಿಡುಕಿದರುಕಡುಪಾಪಿಯೆಂದ
ತಾ । ಬಿಡನೆನುತಮನನೊಂದುಸುರಪತಿ । ತಡೆಯದೈದಿದನಮರಪುರಕವನೀಶ
ಕೇಳೆಂದಾ ... ... ॥೧೩॥

ಅಳದನವನೀತಳಕೆಖಳಕುಲ । ತಿಲಕನೆಂದನುತನ್ನಭಟರಿಗೆ । ನಳ
ನೃಪನಕಟ್ಟುವಡಸಾಧ್ಯವಿದೆನಗೆಯಾತನಲಿ ॥ ಒಲಿದಿಹಳುಜಯಾವಧೂಸುಶೀ
ಲತೆ । ನೆಲಸಿಹುದುಮನಸಿನಲಿದುರ್ಗುಣ । ತಿಳಿಯನರಸನೆನುತ್ತಹೊಕ್ಕನು
ನಿಷಧಪಟ್ಟಣವ ... ... ॥೧೪॥

ಮಲ್ಲಿಗೆಯಬನಸಂಪಿಗೆಯಬನ । ವೆಲ್ಲಕೇತಕಿಕುಸುಮಮಯವೈ
ಳೆ । ಯಲ್ಲರುದಾಕ್ಷಿಗಳುಸರಸೀರುಹದಕೊಳಗಳನು ॥ ಬೆಲ್ಲವತ್ತಗಳಕ್ಷು
ದಾಕ್ಷಿಗೆ । ಳೆಲ್ಲಖರ್ಜೂರಾದಿವಸ್ತುಗ । ಳಲ್ಲದಿಲ್ಲವೃಥಾಯನಳನೃಪನಾಳ್ವ
ರಾಜ್ಯದಲಿ ... ... ॥೧೫॥

ಇಲ್ಲವೆನ್ನರುಬೇಡಿದರೆಬಿಡ । ರಲ್ಲಿಪಾಡಿನಪಂಥಗಳನಾಡಿ । ಯಲ್ಲರ
ನೃತವನಾಡರಲ್ಲಿಹಸತ್ಯನಿರ್ಮಲರು ॥ ಎಲ್ಲರೊಳಗತಿಹಿತರುಕೊರ್ಥಗ । ಳಿಲ್ಲ
ದಿಹಸದ್ಧರ್ಮಜೀವಿಗ । ಳಲ್ಲಿಮೆರೆದರುಸುಜನರಾನಳನೃಪನರಾಜ್ಯದಲಿ ॥೧೬॥

ಪತಿಯಡಿಗೆವಂಚಿಸರುಸತಿಯರು । ಸುತರುಪಿತೃಗಳನುಡಿಗಳನು
ತಾವ್ । ನತಿಗಳೆಯರಾಚಾರವರ್ಣಾಶ್ರಮದಧರ್ಮದಲಿ ॥ ಮಾತಿಯತರುಹರಿ
ಭಕ್ತಿಭಾವದ । ವ್ರತನಿಯಮನೇಮದಲಿಜನಸಂ । ಮತದೊಳೆಸದೆಪ್ಪುವ
ರುನೈಷಧನೃಪನರಾಜ್ಯದಲಿ ... ... ॥೧೭॥

ಅಲ್ಲಿತಿರುಗಿದಬೀದಿಬೀದಿಗ । ಳಲ್ಲಿಪುರಜನರರಿಯದಂತಿರ । ಲಲ್ಲಿ



ಮಾಯಾರೂಪಿನಿಂದಪಿಶಾಚನಂದದಲಿ ॥ ಸಲ್ಲಲಿತಶಿವವಿಮಲ ಭಕ್ತರಿ । ಗೆಲ್ಲ
ನಯವಿನರಾದಸುಜನರ । ನೆಲ್ಲಕಾಣುತಬಂದನರಮನೆಗಾಗಿಕಲಿರಾಯ ॥೧೮

ಮುರಿದುನೋಡಿದನಲ್ಲಿತೆಂಗಿನ । ಮರಗಳುನ್ನತವಿವಿಧವೃಕ್ಷದ । ಹೊರಗೆ
ಯಲಿಕಣ್ಗೆಸೆವನಗರೋದ್ಯಾನವೀಧಿಯಲಿ ॥ ವೃರುತದೊಳಹರ್ಷವತ್ರದ ।
ತರುವಿನಲಿನೆಲಸಿರ್ದುಬಹುದಿನ ವರಸಕೀಳ್ಕಲಿಪುರುಷನಿತ್ತಲುರಾಜಭವನದಲಿ॥

ಕರಸಿದನುನಳನೃಪತಿಮುನಿಮು । ಖ್ಯರನುಭೂಸುರವರ್ಗವನುಸ ।
ತ್ಕರಿಸಿಜಪತರಹೋಮಯಜ್ಞಾಳಗಳನನುಕರಿಸಿ ॥ ಸುರರಸಂತರ್ಪಣೆಯೊ
ಳಿರುತಿಹ । ನರಸನನುದಿನಪೂರ್ವಜನ್ಮಾಂ । ತರದಘವದನರಿಯೆಬಂದುದು
ಕಾಲಗತಿನೃಪಗೆ ... ... ॥೨೦॥

ಒಂದುದಿವಸದೊಳಾಗನೃಪನಿಗೆ । ಬಂದುದಲ್ಪಾಚಮನಕಾಲದೊ ।
ಳಂದುಕುದಾಚಮನವಿಲ್ಲದೆಮರವನಿರ್ಗಮಿಸೆ ॥ ಇಂದುಯನಗಿದುಸಮಯ
ವೆಂದಾ । ನಂದದಲಿಕಲಿಪುರುಷರಾಯನ । ಸಂಧಿಸಿದವಿಧಿವಶವತಪ್ಪಿಸ ಲಾರಿಗ
ಳವೆಂದ ... ... ॥೨೧॥

ಕಪಟಭೂಸುರವೇಷದಲಿನಿ । ಷ್ಕಪಟನಳಭೂವರನಕಡಿಸುವ ।
ವೃಪನೆಯನುತಾನೆನದುಬಂದನುಪುಷ್ಕರನಬಳಿಗೆ ॥ ನಿಪುಣನೆಂದನುನಿನಗೆನ
ಳಭೂ । ನೃಪತಿಸಖನೆನಿಕೇಳಸಂದೆನು । ನಪದೆಸೆಗೆಹೆದರದಿರುನಿನಗಹುದಖಿಳ
ಸಾಂಮ್ರಾಜ್ಯ ... ... ॥೨೨॥

ಬಲ್ಲಿಯಾನೀನೆನ್ನಲೋಕಕೆ । ಬಲ್ಲಿದನುತಾಕಲಿಪುರುಷನಳ । ನಲ್ಲಿ
ದ್ಯೂತವನಾಡಿಗೆಲಿಸುವೆನಿನ್ನಲೆತ್ತದಲಿ ॥ ಒಲ್ಲನನದಿಸಕಲರಾಜ್ಯದ । ವಲ್ಲ
ಭನವನಾಡುವೆನುಯಿಮಪ್ರುಸಿ । ಯಲ್ಲನಿಷಧನಕಿತ್ತುಬಿಸುಡುವನೆಂಬುನೀನೆಂದ॥

ನಂಬಿದೆನುಲೇಸಾಗಿಭಾಷೆಯ । ನಿಂಬುಗೊಂಡುದುಹೃದಯಪುಷ್ಕ
ರ । ನೆಂಬುಳಸಂತೋಷದಲಿಕಲಿಪುರುಷನೊಡಗೊಂಡು ॥ ಅಂಬುಜಾಕ್ಷನಕಳೆ
ಗೆತಾಪ್ರತಿ । ಬಿಂಬನೆನಿಸುವನಳನಬಳಿಗತಿ । ಸಂಭ್ರಮದೊಳೈತಂದರಿಬ್ಬರ್
ಲಾಯಕೇಳೆಂದ ... ... ॥೨೪॥

ಮಿಸುನಿರತ್ನಪ್ರಭೆಗಳಲಿರಂ । ಜಿಸುವಮಂಟಪದೊಳಗೆರಾಜ ।
ಪ್ರಸರರಹಿತನನೀಶನಿದ್ದನುಸಿಂಹಪೀಠದಲಿ ॥ ಶಶಿಮುಖಿಯರೆಡಬಲದಿಕೈವಾ ।
ರಿಸುತಲಿಕೆಚಾಮರವಚಮ್ಮಲು । ನಸುನಗುತಕೈಮುಗಿದುಪುಷ್ಕರನೆಂದನಾ
ನೃಪಗೆ ... ... ... ॥೨೫॥

Digitized by ROJA MUTHIAH RESEARCH LIBRARY

ಅರಸಕೇಳಾಶ್ಚರ್ಯವನುಭು | ಸುರಸುತೇಜದೊಳೆಸೆವಲಿತ್ತವ |
ನಿರವಿಕಾಣಿಕೆಗೊಟ್ಟುಯಿದಿರಲಿನಮಿಸುನವಾಯ್ತು ॥ ಅರಹುಹಾಸಂಗಿಗಳನಾ
ಡುವ | ನಿರವೆಸೋತವರಾವನಾಗಲಿ | ಧರೆಯನುಳಿದುವನಾಂತರಕೆಕಳುಹುವ
ದುಸತಿಸಹಿತ ... ... ॥೨೬॥

ಧರಣಿಪತಿನಿನಗಿನಿತುಚಿತ್ತಕೆ | ಹರುಷವಾಗಿರಲಿನ್ನುಮನದಲಿ |
ಕೊರತೆದೆ ದಾದುವರಾಣುಯಿದುವಾರ್ಥಿವರಪಂಕಣ ॥ ಧುರಕೆಬೇಂಟಿಗೆಜೂ
ಜಿನೆಸೆಯಲಿ | ಕರದಡೋಸರಿಸುವವುಹಗರಣ | ದರಸುತನಚಿತ್ತ್ಯಸಂಯೆಂ
ದನುನೃಪತಿಕೈಮುಗಿದು ... ... ॥೨೭॥

ಮೇಧಿನೀಪತಿಕೇಳುಸಜ್ಜನ | ಸಾಧುಬಲ್ಲನೆಖಳನಹೃದಯವ | ನಾ
ದುರಾತ್ಮನನುಡಿಯಕೈಕೊಂತಾಡಿದನುನೃಪತಿ ॥ ಭೇದದಲಿಕಲಿಪುರುಷವಾ
ಯೆಂ | ಪಾಡಿಯಲಿಪುಷ್ಕರನಜೂಜಿನ | ವಾದದಿಂದರಘಳಿಗೆಯಲಿಗೆಲಿಸಿದ
ನುವಸ್ತುಗಳ ... ... ॥೨೮॥

ದುಗನುಪಂಚಕಭಾರವೇರಡಿ | ತ್ರಿಗಯುಬೇಡಿದಡಲ್ಲಿಬೀಳ್ವದು |
ವಿಗಡಪುಷ್ಕರನೃಪನಗೆಲಿದನುಹಲಗೆಯೊಂದರಲಿ ॥ ಬಗೆಬಗೆಯರತ್ನಗಳಧನಧಾ
ನ್ಯಗಳಗಜರಥತುರಗವೊದಲಾ | ದಗಣಿತದವಸ್ತುಗಳಸೋತನುನೃಪತಿಪು
ಷ್ಕರಗೆ ... ... ... ॥೨೯॥

ಆಡಿದನುಜೂಜಿನಲಿನೃಕಹೋ | ಗಾಡಿದನುರಾಜ್ಯವನುಕೋಶವ |
ಕೇಡುಗರಕೈಮೇಳವಿಸಿದುದುದೈವಗತಿಯಿಂದ ॥ ಬಾಡಿತರಸನವದನಸಭೆಯ
ಲಿ | ನೋಡಿದರುಸಜ್ಜನರುಮರುಗಿದ | ರಾಡಲೇನವನರಸಸೋತನುವಿಧಿಯಘ
ಟನೆಯಲಿ ... ... ॥೩೦

ತೀರಿತಿನ್ನೇನರಸಬಹುಧಂ | ಡಾರವಸ್ತುಸುವಸ್ತುವೆಲ್ಲವು | ಸೇ
ರಿತೆನಗಿಂತಿನಲಿಡಯಣವೆನಿನ್ನಹೊಳೆನಲು ॥ ಭೂರಮಣಚಿಂತಿಸಿದವನದಲಿ
ನಾರಿಯಳನೊತ್ತುವೆನುಸೋತಿಹ | ಧಾರುಣಿಯುಕೆರೆಗೆಲುವೆನೆನ್ನುತತನ್ನವು
ನದೊಳಗೆ ... ... ೩೧॥

ಅರಸನಾಪ್ತಪುರೋಹಿತನುದಾನ | ಹರುಷವಳಿದೈಕಂಪನಂತಃ |
ಪುರವಹೊಕ್ಕನುರಾಜನದಸೆಯುಸಭೆಗೆತಾಬಂದು ॥ ತರುಣಿಯರವೋಳದಲಿನೃ
ಪಸತಿ | ಪರಮರತ್ನದಪೀಠದಲಿತಾ | ಹರುಷವಿಗೆರಂಜಿಸುವಸತಿಯಳಕಂ
ಡುಕೈಮುಗಿದು ... ... ॥೩೨॥



ತಾಯೆಬಿನ್ನಹವಿಂದುನಿಮ್ಮಯ | ರಾಯಸೋತನುಜೂಜನಲಿನಿ |
ರ್ದಾಯದಲಿಪುಷ್ಕರನುಗೆಲಿದನುಸಕಲರಾಜ್ಯವನು ॥ ನೋಯಲಾಗದುಚಿತ್ತ
ದಲಿಸಿರಿ | ಬೀಯವಾದದಕೇಳಯಿನ್ನಿದ | ರಾಯತವನೀವುಬಲ್ಲಿರೆಂದನುವಿಪ್ರ
ಕೈಮುಗಿದು ... ... ॥೩೩॥

ಕಮಲವನದಲಿಮಂಜುಸರಿದಾ | ಕ್ರಮದಬಗೆಯಲಿಸತಿಯರಿಗೆಮು
ಖ | ಕಮಲಬಾಡಿತುನುಡಿಯಕೇಳುತಮನದಚಿಂತೆಯಲಿ ॥ ಕಮಲನಾಭನಕ
ರುಣದಳತೆಯು | ಸಮದರಾರೇಗುವದುಶಿವಶಿವ | ಕುಮತಿಪುಷ್ಕರನಿಂತು
ಮುನಿವನೆಯನುತಮರುಗಿದಳು ... : ॥೩೪

ವಿಮಲಮತಿನಳನೃಪಗೆರಾಹು | ಭ್ರಮಣವಾಯಿತೆಯನುತಸತಿ
ಭೂ | ರಮಣನೆಡೆಗೈದಿದಳುಕಂಡಳುಯಿನಯನಿಂಗಿತವ ॥ ತಮದರಾಹುಗ್ರ
ಹವ್ರಸೋಂಕಿದ | ದ್ಯುಮಣಿಯಂತಿರೆಕಂಡುಧೈರ್ಯದಿ | ಕಮಲಮುಖಿಕೈಮು
ಗಿದುಬಿನ್ನೈಸಿದಳುನಿಜಪತಿಗೆ ... ... ॥೩೫॥

ಶಶಿಕುಲಾಂಬುಧಿಚಂದ್ರರಿಪುನೃಪ | ನಿಶಿತಭಾಸ್ಕರತೇಜನಿಮಗೀ |
ವೆಸನದೋರಲುಬಹುದೆಹರಹರಹರಮಹಾದೇವ ॥ ಬಿಸರುಹಾಕ್ಷನಕರುಣವ
ದುಸೋ | ಲಿಸಿದನೇಪುಷ್ಕರನುಯಿದುವಿಧಿ | ವಶವಲಾತಪ್ಪೇನುಸಾಕೆಂನೆಂದ
ಳಭುಜಾಕ್ಷಿ ... ... ॥೩೬॥

ಲಲನೆವರಾಡಿದನುಡಿಗೆಸಭೆಯವ | ರಳಲಿಬೈದರುಪುಷ್ಕರನಕೇ |
ಳಲವ್ರೊಬಾಹಿರನಾಕುತೆಗೆಚಾರಿಗಳನೆಂದೆನುತ ॥ ಹೊಲಬುತಪ್ಪಿದಹುಲ್ಲೆಬೇ
ಡನ | ಬಲೆಗೆಬಿದ್ದಂತಾಗಿನಳನೃಪ | ತಿಲಕನೆಂದನುವದನದುಗುಡದಿತನ್ನನಿ
ಜಸತಿಗೆ ... ... ॥೩೭॥

ತರುಣಿಕೇಳಪಜಯದನಾರಿಯ | ಶರಗಹಿಡಿದೆನುರಾಜ್ಯಲಕ್ಷ್ಮಿಯ |
ಪರರಿಗಿತ್ತುಳುಹಿದೆನುದೇಹವನಿದಕೆಯಂಜದಿರು ॥ ತರುಣಿನೀಕಾನನವಿಗಿರಿಗಂ
ಹರಗಳಲಿಬಿತದೆಂತುತೊಳಲುವೆ | ಹರಹರಾಯನುತರಸಸತಿಯನುನೋಡಿ
ಬಿಸುಸುಯ್ದ ... ... ॥೩೮॥

ಚಿತ್ತವಿಸುಶಶಿಕುಲಶಿರೋಮಣಿ | ಹೆತ್ತವರುಸತಿಸುತರುಮನೆಮ
ನೆ | ವಾರ್ತೆಬಾಂಧವಧರಣಿಪರಭೋಗ್ಯಕಸಂಪದವು ॥ ನಿತ್ಯವಲ್ಲಶರೀರಸುಖ
ಗಳ | ನಿತ್ಯವೆಂಬುದುತಿಳಿಯಿರೇನಿಜ | ಸತ್ಯವನುಕೈಬಿಡಿದುಸಲಹೆಂದಳುಸ
ರೋಜಮುಖಿ ... ... ॥೩೯॥

Digitized by ROJA MUTHIAH RESEARCH LIBRARY

ಚಿಂತಿಸಿದೆಂ ನಸನವನುವಿಗೆ । ಸಂತವಿಟ್ಟಳು ನೀತಿಯುಳಿದವ । ಯಂತಿನಿಜದುಂಬಿರಕೆ ಪರಿಪಾಲುಕಂಡೆಪುಷ್ಕರನು ॥ ಯಿಂತುಜಾಜಿಲಿಸೋಕು ತಿರುಗಿ । ನ್ನಂತುರಾಜ್ಯವಿನಿಲುವಿರೆನೆಭೂ । ಕಾಂತವನವಾಸಕ್ಕೆ ನಿಜಸತಿಸಹಿತ್ತಲನುವಾದ ... ... ॥೪೦॥

ತಳತಮಣಿಭೂಷಣಗಳೆಲ್ಲವ । ಕಳಚಿಬಿಸುಟನುಗಾರುವಿನಂಘ್ರಿಗೆ । ನಳನಮುಖಿಸಹಿತರಗಿಹೊರಹೊಂಟರುನಿಜಾಲಯವ ॥ ಬಳಕರ್ಲ್ಪದಿಪರಖಿಳ ಪುರಜನ । ಕಿಳಿಸಿಕಣ್ಣಲಧಾರೆಗಳುಘಾ । ವಳಿಸಗಿಕ್ಕಲ್ಲಿ ಪಟ್ಟಣವೆಲ್ಲಶೋಕಿಸಲು ... ... ॥೪೧॥

ಸಾಲುಕಂಬನಿಗಳಲಿನೆನವರು । ವ್ರೂಳಗದಪರಿಜನರುಮಂತ್ರಿಗ । ಳೋಳಗದಸಾಮಂತಸಚಿವರುಮಲ್ಲಗಾಯಕರು ॥ ಬಾಲೆಯರ್ಬಾಲಕರುಪುರಜನ । ಜಾಲವೆಲ್ಲವುಶೋಕದಲಿಕ್ಷಿತಿ । ಪಾಲನರಸಿಯಕಂಡುಮರುಗಿತುಮಂಡಿಘೋಳಡುತ ... ... ॥೪೨॥

ಮನದಿನುನ್ನವೆತಿಳಿದುನೃಪಸುತೆ । ತನಯರನುರಥದೊಳಗೆತಂದೆಯು । ಮನೆಗೆಕಳುಹಿಪರಾಪ್ತರೊಡನೆವಿದರ್ಭಪಟ್ಟಣಕೆ ॥ ಜನಪಕೇಳತ್ತಲುಮಹಾರೋ । ದನದಿಪಟ್ಟಣವೆಲ್ಲಮರುಗಲು । ವನಿತೆಪತಿಯೊಡನೈದಿದಳು ದೃಢತರದಮತಿಯಿಂದ ... ... ॥೪೩॥

ಯೇನನೆಂಬೆನುಜೀಯಲೋಕದ । ಮಾನಿನಿಯೆದಮಯಂತಿಸತ್ಯ । ಜ್ಞಾನಿಯಲ್ಲವೆಸತಿಯರಿಗೆ ಗುರುಪತಿವ್ರತವಗುಣದಿ ॥ ಮೌನದಲಿಪತಿಯಂಘ್ರಿಕಮಲ । ಧ್ಯಾನದಲಿಮನಸಂಮಸತಿಘನ । ಕಾನನಕೆಗಮಿಸಿದಳುವರಪುರದರಸನಾಜ್ಞೆಯಲಿ ... ... ॥೪೪॥

ಅಂತು ಸಂಧಿ ೪ ಕ್ಕೆ ಪದ ೨೧೧ ಕ್ಕೆ ಮಂಗಳಮಸ್ತು.

## ಐ ದ ನೆ ಯ ಸಂ ಧಿ.

ಸೂಚನೆ॥ ಅಡವಿಯೊಳು ಪತಿಕಳದುಬಿಡೆಘಣಿ । ಯೊಡಲಿಗಿಳಿಯದೆಬಂದುಕರಿಗಳ । ಪಡೆಗೆರಗಿದಮಯಂತಿಹೊಕ್ಕಳುಚೈದ್ಯನಗರಿಯನು ॥

ಪದ ॥ ಕೇಳುಕುಂತೀತನಯನಳನೃಪ । ಬೀಳುಗೊಂಡನುಪುರವನಲ್ಲಿಂ । ಮೇಲೆನಡದರುಪಯಣಗತಿಯಲಿಹಲವುಯೋಜನವ ॥ ಹೇಳಲೇನಾನವರಲಿಧಯನು । ನಾಲಿಗೆಗಳೊಣಗಿದವುಸತಿಯಳ । ಕಾಲೊಡದುಬಸಿವರುಣಜಲದಲಿಬಟ್ಟೆಕೆಸರಾಯ್ತು ... ... ॥೧



ಎಳೆಯುಬಾಳೆಯುಸುಳಿಯುನಸಲ । ಜ್ವಾಲನಹೊಲಲಿಕಾರಿಸಿದವೋಲ್ । ಬಳಲಿದಬಳಿಯಕಂಡುನೃಪಮರುಗಿದನುಮನದೊಳಗೆ ॥ ಲಲಿತಹೇಮದತೂಗುಮಂಚವ । ಹೊಳೆವಹಂಸೆಯಹಾಸಿನಲಿಹಾ । ಮಲಗುತಿಹಸತಿಗೀವಿಧಿಯೆಹಾಯೆನುತಬಿಸುಸುಯ್ದ ... ... ॥೨॥

ಮಾಗಲಿಸ್ಯಾಕರಸಬಿಡುನಿಧಿ । ಬರದಬರಹವತಪ್ಪಿಸಲುಹರಿ । ಹರವಿರಿಂಚಾದಿಗಳಗಳವೆ ನಮ್ಮಪಾಡೇನು ॥ ಹರವುದಾಕ್ಷಣತುಂಬುವದುಗೋ । ಚರಿಸುವುದೆಶಿರಿನಿತ್ಯನೇಯಿದ । ನರಿಯದವನೇನೋಯಲೇಕೆಂದಳುಸರೋಜಮುಖಿ ... ... ॥೩॥

ನುಡಿಯುಕೇಳುತಮನದಿಮಿಡುಕುತ । ಪೊಡವಿಪನುಸತಿಸಹಿತಘನಘೋರ । ಡವಿಯಲಿಬರುತಿರೆಜಗನ್ಮೋಹನದಪಕ್ಷಿಗಳು ॥ ಪೊಡವಿಗಿಳಿಯುಲುಕಂಡಪೇಕ್ಷಿಸಿ । ಹಿಡಿವೆನೆಂದುರವಣಿಸಿನೃಪಹಿ । ಚ್ಚಡವಬೀಸಿದಡದರಕೊಂಡೊಯ್ದುದುನಭಸ್ಥಲಕೆ ... ... ॥೪॥

ಮಾಗಿನಲಿಬೆರಳಚ್ಚುಕಟಿವ । ತೂಗಿದನುನಸುನಗುತನಿಂದಿರ । ಆಗಸೂಚಿಸಿದವುನಿರಂತರರಾಜ್ಯಭೋಗವನು ॥ ಬೇಗದಿಂದಪಹರಿಸಿಕೊಂಡವ । ನೀಗನಾನಿವಿವರವೆಂದುಸ । ರಾಗದಿಂದಲಿಪಸಾಯುವಾದವುಪಕ್ಷಿಗಳು ... ... ॥೫॥

ಧರಣಿಪತಿಕೇಳ್ ನಿಷಧಪತಿಕಲಿ । ಪುರುಷಮಾಯದಬಲ್ಲನೇಮನ । ಮರುಗಿನಿರ್ಗಮದಲಿನಿಂದಿಲಾಗೆಸತಿಕಂಡು ॥ ಹರಹರಾಯನುತಾಗಳೇರೆಯ । ಕರಗಹರಿಸಿತ್ತಳುನೃಪಾಲಗೆ । ಸಿರಿವನಸುಬಾಗಿದಳುನಾಚಿಕೆಯಾಗಲಿಂತೆಂದ ॥೬॥

ಧರೆಯನೃಪರಿಗೆನಿಷಧಪುರಪತಿ । ಯರಮನೆಯೊಳ್ವ್ರೋಲಗದಸೌರಭ । ದೆಡರಕಲದುಕಾರುಣ್ಯವೆಂಬೀಯಾಗಿಸುತನನಮಗೆ ॥ ಹರದುದೆಲ್ಲಸಮಸ್ತರಾಜ್ಯದ । ಸಿರಿಗೆಬಾಹಿರನಾಗಿಸತಿಯುಳ । ಕರಗನುಡುವಂತಾಯ್ತುಹರಹರಯೆನುತಬಿಸುಸುಯ್ದ ... ... ॥೭॥

ಧರೆಯಸಂಪದವಷ್ಟಭೋಗತ್ರ । ಪರಿಹರಿಸಿನಿಜಪುತ್ರಮಿತ್ರರ । ತೊರದುನಂಬಿದಸತಿಯುಘೋರಾರಣ್ಯಮಧ್ಯದಲಿ ॥ ಹಿರಿದುಬಳಲಿಸಿನೋಯಿಸಿದೆಕೇ । ಳ್ತರುಣಿಯನ್ನವೊಲುಂಟೆಪಾಪಿಗ । ಳರಿಯೆನೀಪೋಗಿನ್ನುತಂದೆಯಮನೆಗೆನಡೆಯಿಂದ ... ... ॥೮॥

ಇನೆಯನಾಡಿದನುಡಿಗೆಯಂಗನೆ । ಕನಲಿನುಡಿದಳುಶೋಕದಲಿನೀ ।

Digitized by ROJA MUTHIAH RESEARCH LIBRARY

ನಿನಿತು ಮುನಿದಾಡುವರೆ ಸಾಕಿನ್ನಾರು ಗತಿಯೆನಗೆ ॥ ಅನುದಿನವು ನಾ ನಿನ್ನ ಪದ
ಯುಗ । ವನಜವನು ಭಜಿಸುವೆನು ಯುಗಲೀ । ತನುವ ಸ್ಪರಿಸಲೊಲ್ಲೆನೀ ಕೇಳೆಂ
ದಳಂದುಮುಖಿ ... ... ॥೯॥

ನೆಳಲು ತನುವಿನ ಬಳಿಯೊಳಲ್ಲದೆ । ಚೆಲುವ ಸುಪ್ರದೇಶಾ ಬೇರೆ ಗತಿಯೆ ।
ಹಲವು ಮಾತಿನ್ನೇಕೆ ನೀನೇ ಗತಿಯು ಎನ್ನನಗೆ ॥ ಅಳುಪಿಯೆ ಸಾಂಬ್ರಾಜ್ಯ
ಸಿನ್ನಡಿ । ನೆಳಲಿನಲ್ಲಿರೆ ನೀನು ಮಿಲ್ಲದ । ನಿಳಯ ವೇಂಗಾನಗಡವಿ ಲೇಸೆಂದಳಾ
ಸರೋಜಮುಖಿ ... ... ॥೧೦॥

ಎನುತ ಸುರಿವಳು ಕಣ್ಣ ನಲಿಕಂ । ಬನಿಯ ಮಿಡಿದಳು ಬೆರಳ ನಲಿನಾ ॥
ನಿನಿತು ಮಾಡಿದ ಕರ್ಮಫಲವಿದಕೇನ ಮಾಡುವುದು ॥ ಎನಗೆ ಚಿಂತಿಸಲೇಕೆ ಸಿ
ನಿಂ । ದಿನಲಿ ಚಿತ್ತದಿ ನಿರ್ಮಳದಿ ಕಾ । ನನದಿ ಚರಿಸುವೆ ನಿನ್ನೊಡನೆ ತಾನೆಂದ
ಳಂಬುಮುಖಿ ... ... ॥೧೧॥

ಶೋಕವೇಕೆಲೆ ರಮಣಿ ಬಾರೆಂ । ದಾಕಮಲಲೋಚನೆಯ ತೋಳನೊ
ಳಾಕಿ ಬಿಗಿಯಪ್ಪಿದನು ಶರಗಿನೊಳೊರಸಿ ಕಂಬನಿಯ ॥ ಜೋಕೆಯಲಿ ಕುಳ್ಳಿರಿಸಿ
ತೊಡೆಯೊಳ । ನೇಕಪ್ರೀತಿಯೊಳೆಂದನೀನವಿ । ವೇಕಿಯೆ ಬಿಡು ಮನದದು
ಗುಡವನೆಂದನಾ ನೃಪತಿ ... ... ॥೧೨॥

ಎಂದು ಸತಿಯನು ಸಂತವಿಟ್ಟರ । ವಿಂದನಾಭನ ಧ್ಯಾನದಲಿ ಬರೆ ॥
ಮುಂದೆ ಘೋರಾರಣ್ಯವೆಸೆದುದು ಘನಭಯಂಕರದಿ ॥ ಸಂದಣಿಸಿ ಮೃಗವಲ್ಲಿ ಸೆರ
ದಿರೆ । ಬಂದು ಹೊಕ್ಕರು ಕಾನನವ ನರ । ವಿಂದಸಖ ಹೊದ್ದಿದನು ಮೆಲ್ಲನೆ ಪಶ್ಚಿ
ಮಾಂಬುಧಿಯ ... ... ॥೧೩॥

ಲೋಕಕಧಿಪತಿ ನಳನರಾಣಿಗೆ ॥ ಶೋಕವಬ್ಬಿದ ತೆರದಿ ಕತ್ತಲೆ ॥
ಲೋಕವನು ಮುಸುಕಿದುದು ಭರಣಿಯ ಮುಚ್ಚಿದಂದದಲಿ ॥ ಭೀಕರಧ್ವನಿಗಳಗೆ ಹೆ
ದರಿದ ॥ ಳಾಕಮಲಲೋಚನೆಯ ಕಂಡು ವಿ ॥ ವೇಕನಿಧಿ ಸಂತೈಸಿದನು ನಳನೃಪತಿ
ತಾ ಪಿಡಿದು ... ... ॥೧೪॥

ತರುಣಿಯಂಜದಿರಂಜದಿರು ವಿಧಿ । ಬರೆದ ಬರಹವಿದೆನುತ ವೃಕ್ಷದ ।
ತರಗೆಲೆಯ ಹಾಸಿನಲಿ ಮಲಗಿಸಿ ಸತಿಯನೀಕ್ಷಿಸುತ ॥ ವರರತುನ ಮಂಚದಲಿ ಪವ
ಡಿಸಿ । ಪರಮಸುಖದಲ್ಲಿರುವ ಸತಿಗಿದು । ಸರಿಯೆ ಹರಹರ ಎನುತ ಕಂಬನಿ
ದುಂಬಿದನು ಮರುಗಿ ... ... ॥೧೫॥

ಎಲ್ಲರೋ ಪಾಪಿಯಲಿ ಪತಿವ್ರತೆ । ಯಲ್ಲವೀ ದಮಯಂತಿ ಬಿಡುವವ ।



ಳಲ್ಲ ತನ್ನನು ತರುಣಿ ಕಾಣದ ಕಡೆಗೆ ತೆರಳದರೆ ॥ ಅಲ್ಲಿ ತಂದೆಯ ಮನೆಗೆ ಹೋಗುವ
ಳಲ್ಲಿ ತಾನಿರೆ ಬಿಡಳೆನುತ ಮನ । ದಲ್ಲಿ ಯೋಚಿಸಿ ನಿದ್ರೆಗೈಸಿದ ತನ್ನ ನಿಜಸತಿಯ ॥

ಮಾದು ಮಲಗಿದಳವಳ ಮಗ್ಗುಲ । ಕರಗ ಮೆಲ್ಲನೆ ಜಾರಿಸುತ ಲಾ । ಗರ
ಸವೆ ಪನವ ಗೊಂಡು ಮಲಗಿದ ಸತಿಯನೀಕ್ಷಿಸುತ ॥ ಮರುಗಿದನು ಮನದೊಳಗೆ
ನೃಪತಿ । ಹರಿಜಗನ್ನುತ ಯಿಂತಡವಿಯಲಿಯ । ಚ್ಚರಿಸದೇ ತಾನೆಂತು ಪೋ
ಗುವೆನೆನುತ ಬಿಸುಸುಯ್ದ ... ... ॥೧೭॥

ಮತವಿದುಗಲಿ ಅಬಳೆ ಕಲಸ್ಲಿಹ । ತಡಿಯದಾಂಟುವ ಪರಿಗಳ ನಿಜಸತಿ
ಯೆಡೆಗೆ ತಿರುಗುವ ಚಂದ್ರಬಿಂಬಾನನವನೀಕ್ಷಿಸುವ ॥ ಅಡಸಿದತಿದುಃಖದಲಿ ಮೆಲ್ಲ
ಡಿ । ಯಿಡುವ ಸತಿಯನು ನೋಡಿ ಮರುಗುವ । ನೊಡನೆ ಶೋಕದಿಂದ ನಳನೃಪ
ನೊಂದು ಯೋಜನವ ... ... ॥೧೮॥

ಮರುಗುವನು ನೆನೆದೊಮ್ಮೆ ಕಂಗಳು । ಮರಳನೋಡುವನೊಮ್ಮೆ
ಸತಿಯಾಳ । ಯಿರವ ಕಾಣದೆ ಕಳವಳಕ್ಕೆಡಾದುದಾ ಹೃದಯ ॥ ಕರಗಿತರಸನ
ಧೈರ್ಯಚಿತ್ತದಿ । ಮುದುವಗ್ಗದ ಮಹಿಮೆ ಶೋಕದ । ಹೊರಿಗೆಯಲಿ ಕಾತ
ರಿಸಿ ನಡೆದನು ನೃಪತಿ ಕೇಳೆಂದ ... ॥೧೯॥

ಕರುಣದೋರದೆ ಮನವಿ ನಳನೃಪ । ತೊರೆದು ಬಿಟ್ಟನು ಸತಿಯಾಳನು
ಹುಲಿ । ಕರಡಿ ಮೃಗದುಪಟಳವ ತಾನಿನ್ನೆಂತು ಸೈರಿಪಳೊ ॥ ಮೊರೆಯ ಲಾ
ಲಿಸಿ ನೋಳ್ಪನೆಂಪುರು । ತೆರದ ಪ್ರೇಮದಿ ಬಂದು ಸತಿಗೆ । ಚ್ಚರಿಸುವಂದದಿ ತರಣಿ
ತಲೆದೋರಿದನು ಪೂರ್ವದಲಿ ... ॥೨೦॥

ನಳನ ಮುಖ ಮೈಮರೆದು ನಿದ್ರೆಯ । ತಿಳಿದು ಮೆಲ್ಲನೆ ನೋಡಿದಳು
ಯಡೆ । ಬಳವನೀಕ್ಷಿಸಿ ಪತಿಯ ಕಾಣದೆ ಬಲಿದ ಮೂರ್ಛೆಯಲಿ ॥ ಮಲಗಿದಳು
ಮೈಮರೆದು ನಿಮಿಷಕೆ । ತಿಳಿದು ಕಾಣದೆ ಕಾತುರದಿ ಹಂ । ಬಲಿಸಿ ಹಲುಬಿದಳ
ಲ್ಲಿ ಗಿರಿ ತರುನಿಕರ ಮಧ್ಯದಲಿ ॥೨೧॥

ಹಾ ರಮಣ ನಳನೃಪತಿ ಹಾ ರಣ । ಧೀರ ಸದ್ಗುಣ ಹಾರ ರಿಪುಸಂ । ಹಾರ
ನಿತ್ಯೋದ್ಧಾರ ನಿರ್ಮಳ ಸತ್ಯಸಂಚಾರ ॥ ಘೋರಕಾನನದೊಳಗೆ ನಂಬಿದ ।
ನಾರಿಯನು ಬಿಸುಡುವರೆ ತನಗಿ । ನ್ನಾರು ಗತಿ ಮುಖದೋರೆನುತ ಹಲುಬಿದಳು
ದಮಯಂತಿ ॥೨೨॥

ಪ್ರೊಡವಿಗಿಳಿವೆನೊ ಹಾಯ್ದು ಪಾವಕ । ನೊಡಲ ಹೊಗುವೆನೊ ಹಾಸ
ರೆಯು ಭಳು । ಮತುವಿನೊಳು ಮುಳುಗುವೆನೊ ಜಪ ಮಂತ್ರೋಪನೆನೊ ಬಿಡದೆ ॥

Digitized by ROJA MUTHIAH RESEARCH LIBRARY

ಅಡಸಿದಾಪತ್ತಿನಲಿಗರಳವ । ಕುಡಿವೆನೋ ತಾನೆನುತ ಸತಿ ಜಾ । ಯ್ಬಿಡುತ ಕಾ
ನನದೊಳಗೆ ತಿರುಗಿದಳಧಿಕ ಶೋಕದಲಿ ॥೨೨॥

ಕಾಣಿರೇ ಯರಸಂಚೆಗಳು ನೀವು । ಕಾಣಿರೇ ನಿಜಪತಿಯ ಗಿಳಿಗಳು ॥
ಕಾಣಿರೇ ಮೃಗಪಕ್ಷಿಗಳು ನಳಚಕ್ರವರ್ತಿಯನು ॥ ಕಾಣಿರೇ ತರುಲತೆಗಳದನ
ನ । ಕಾಣಿರೇ ನೀವೆಂದು ಶೋಕಿಸಿ । ಯೇಣಲೋಚನೆ ಹಲುಬಿದಳು ಪುಲಕಾಂಗದ
ಲಿ ಪತಿಯ ॥೨೩॥

ಮುಡಿಬಿಚ್ಚಿದ ಪುಡಿಯೊಳಗ್ಗ ಹೊರಳುತ । ಮಲಿನ ತಾಡಿದಳು ಧರೆ
ಯೊಳ । ಗಡಪಿ ಮಾಲಾಗಂಡು ಪಡೆದಳೊ ಜನ್ನನಿಜಜನನಿ ॥ ಪೊಡವಿಯರಸ
ನನ್ನಂತೆ ಶೋಕಿಸಿ । ಮಡಲತೆತ್ತಾ ಮರು ಶೋಕಿಸಿ । ಪ್ರೋಡಪಿ ಪತಿ ಮುಖದೇ
ನೆನುತ ಹಂಬಲಿಸಿದಳು ಪತಿಯ ॥೨೪॥

ಮಾನವಾಧಿಪ ಕೇಳು ಬನದಲಿ । ಹಾನಿ ಸಿಸಿ ಪತಿ ತೊತ್ತುದುಃಖದ ॥
ಹಾನಿಬಂದುದನೇನ ಸೆಂಜೆನು ಪತಿಗೆ ಬಾಯ್ಬಿಡುತ ॥ ಕಾನನದ ಬಳಿವಿಡಿದು ಬರೆ
ಸು । ವ್ಯಾನದಲಿ ತರಗೆಲೆಯ ಹಕ್ಕೆಯ । ಮಾನದಲಿ ಉರಗೇಂದ್ರನಿದ್ದನು ಬಲಿ
ದನಿದ್ರೆಯಲಿ ॥೨೫॥

ತರಳೆ ಕಾಣದೆ ಬರುತ ಮೆಟ್ಟಿದ । ಳುರಗಪತಿಯನು ಕೋಪದಲಿ ಮಿಗೆ ।
ಸುರಿವ ಗರಳ ವಿರೋಧ ಪ್ರಮಯ ರೂಪಿನಲಿ ಬಾಲಕಿಯ ॥ ತರುಬಿ ಹಿಡಿದುದು ತೆಪೆಕ
ದಲಿಹಿಂದು । ಕರನಸುಂಗುವರಾಹು ಪಂದದೊ । ಳುಂಕಕೇಳಂಗನೆಯ ವಿಧಿಯ
ನುಕೇಳಲೇನೆಂದ ... ... ॥೨೬॥

ಹಾರವಾಣನೆ ನನ್ನ ಪತಿತನ್ನನೆ । ಬಾಳ್ಗೊಪ್ಪಿಸಿ ಕಳೆದೆ ಧರರರ ।
ಕ್ರೂರಸರ್ಪನ ಬಾಯ್ಗೆ ಗುತ್ತಾಡೆಸೆ ಜಗನ್ನಾಥ ॥ ಆರಿಗೊರಲುವೆ ನಿನ್ನವ
ವವ । ನಾರು ಕಾಯುವರಿನ್ನು ಬಿಡಿಸ್ಲೆ । ವಾರಿಜಾಕ್ಷ ಮುಕುಂದ ಸಲಹೆಂದಳು
ಸರೋಜಮುಖಿ ... ... ॥೨೭॥

ಶೈಲಶಿಖರದೊಳಿದ್ದು ಕೇಳಿದ । ಬಾಲಕಿಯ ಶೋಕ ಕಾನುಬಿಲ್ಲಿನ ।
ಕೋಲುಗರ್ರೆಗಳ ಕರದ ಕಣ್ಣಿಯ ತೆಬರ್ರಿನೈತಂದು ॥ ಆಲತಾಂಗಿಯ ಪಿಡಿದ ನಾಗ
ವ । ಕಾಲಭುಜಗನ ಕಂಡು ನಿಜಕರ । ವಾಳದಲಿ ಕಡಿಸಿದನು ಬಿಡಿಸಿದ
ನು ಸತಿಯ ... ... ॥೨೮॥

ಹಾಯೆನುತ ಸುರರುಲಿಯೆ ಕೋಪಿಸಿ । ಬಾಯೊಳಗ್ಗಿಸಿಲು ಕಿರ್ದ ಕಪಾ
ಲನ । ಛಾಯೆ ತಾಕ್ಷಿಯು ಬಿಡಿಸಿ ಸಂತೈಸಿದನು ಬಾಲಕಿಯ ॥ ರಾಯ ಕೇಳ್ವರಾ



ಹುನಿಸಕೆವ । ಮುಯುಚೆಂಬ್ರತೆಳವ ಕ್ರೋಲಿ । ದಾಯತದಮ್ಮೊರ್ಷಾ ।
ಳಡುದುಕಬರವಂತ್ರದಲಿ ... ... ॥೨೯॥

ಬಂಧುಕೆಂಪಾವೆಯ ಕೊಳದಲಿ । ಮಿಂದು ನಿಂದಿರೆ ಬರಸೆಂದನು
ಯಿಂದು ಮುಖಿ ನೀನೆನಗೆ ಸತಿಯಾಗೆನಲು ಖತಿಗೊಂಡು ॥ ಇಂದು ಯೆನಗೆ ಸುಮಿತ್ರ
ಸಲಹಿದ । ತಂದೆಯಲ್ಲವೆ ನೀನು ಕೇಳು ಪ್ರು । ಳಂದನುಳಿದರೆ ಶಪಿಸುವೆನು ಹೋ
ಗೆಂದಳಂದು ಮುಖಿ ... ... ॥೩೦॥

ತರುಣಿಕೋಪಿಸಿನುಡಿಯೆ ಭಯದಲಿ । ಗಿರಿವನಾಗಿ ಪುಳಿಂದನತ್ತಲು ।
ಮರಳಿದ ವುವನು ಯಂತಿ ಬನದಲಿ ಪತಿಯ ಹಂಬಲಿಸಿ ॥ ಮರುಗುವಳು ಮುಪಡೊಳ
ಗಭ್ರೂಪನ । ನರಸಿ ಕಾಣದೆ ಬಯಲನಪ್ಪುವ । ಳುರವಣಿಪ ಕಣ್ಣೀರಿನಿಸೆ ನಡೆ
ತಂದಳಂದು ಮುಖಿ ... ... ॥೩೧॥

ಅರಸ ಕೇಳಾಶ್ಚರ್ಯವನು ಸತಿ । ಬರುತಲಿ ಕಾನನದಿ ಸೆರಗಿಹ । ಪ
ರುಳು ಬಳಗವೃಕ್ಷ ಫಲತ ಪೇತಾಳಗಳು ತೊಲಗಿದವು ॥ ಶರಭ ಮೊದಲಾದಾನೆ ಸಿಂಹ
ಗ । ಳರದೆ ಜಾರಿದವಲ್ಲಿ ಸತಿಯಾಳ । ಪರಮ ಪಾತಿವ್ರತದ ಮಹಿಮೆಯ ಸರಸಶೀ
ಳೆಂಪ ... ... ... ॥೩೨॥

ಮುಂದೆ ಕಂಡಳು ಹೊಳೆವ ತಾಪಸ । ವೃಂದವನು ಕಣ್ಣೀರಸುರಿಸುತ ।
ಬಂದವರಿಗೆ ಯುಕೇಳಿದರು ಮುನಿವರರು ವಿನಯದಲಿ ॥ ಇಂದುಮುಖಿ ನೀನಾರು ಯಿ
ಲ್ಲಿಗೆ । ಬಂದ ಹದನೇನೆನಲು ಶೋಕದಿ । ನೊಂದು ನುಡಿದಳು ಮುನಿಗಳಿಗೆ ಕೈಮು
ಗಿದು ವಿನಯದಲಿ ... ... ॥೩೩॥

ಏನನೆಂಬೆನು ತನ್ನ ಪುಣ್ಯದ । ಹಾನಿಯನು ಚಿತ್ತೈಸಿ ಕರುಣದಿ ।
ಮಾನನಿಧಿಗಳು ಬಲ್ಲಿರೆ ನಳಚಕ್ರವರ್ತಿಯನು ॥ ಆನರೇಂದ್ರನ ಮಡದಿ ತಾನೀ ।
ನ್ಯೇನ ಕೊಂಕಿಸೆ ಪತಿಯು ಗಲಿಫನ ॥ ಕಾನನಕೆ ಗುರಿಯಾದೆನೆಂದಳು ತರುಣಿ ಬಿ
ಸುಸುಯ್ದು ... ... ॥೩೪॥

ಭೂತಳಪ ನಳನೃಪತಿ ಜಾಜಿಲಿ । ನೀತಿ ಪುಷ್ಕರಗಿತ್ತು ಸತ್ಯದ ।
ನೀತಿತಪ್ಪದೆ ಬರುತ ಬನದಲಿ ತನ್ನ ನಗಲಿದನು ॥ ಧಾತು ಗುಂದಿದೆ ಪತಿಯ ಕಾಣದೆ ।
ಭೀತಿಯಲಿ ನಿಮ್ಮಡಿಯ ಕಂಡೆನು । ಭೂತದಯ ನಿಮಗುಂಟು ಸಲಹೆಂದಳು ಸರೋ
ಜಮುಖಿ ... ... ॥೩೫॥

ವನಜಮುಖಿಯ ಕರುಣಕೇಳುತ । ಮುನಿಗಳೆಂದರು ತಾಯೆ ಶೋಕದಿ ।
ಬಳಲಿ ಕಂಗೆಡಬೇಡ ನಿಜಪತಿ ರಾಜ್ಯಸಹಿತ ತರು ॥ ನಿನಗೆ ಬಂದಪ ದಿನ್ನು ಯೋಗ

Digitized by ROJA MUTHIAH RESEARCH LIBRARY

ದ । ಮನವೆಳಸಿದೆ ಸ್ತ್ರೀನಾತ್ರಯಂಜದಿ । ರೆನುತಪೇಳಿಯದೃಶ್ಯವಾದರು ಮುನಿಗಳೊಗ್ಗಿನವು ... ... ॥೩೭॥

ಆತರುಣಿ ಬೆರಗಾಗಿ ಕನಸಿನ । ರೀತಿಯಾಯ್ತು ಕಟಕಟವಾಸ್ನಿ । ಪಾತ್ರವೆನ್ನೊಲು ಸರಿದುದೊ ವಿಸ್ಮಯವಲಾ ಯೆನುತ ॥ ಆತಳೋದರಿಪತಿಯ ಕಾಣದೆ । ಕಾತರದಿ ಬರುತಿರಲು ಕಂಡರು । ನೂತನದ ಬೇಹಾರಿಗಳು ತೊಳಲುವ ನಿತಂಬಿನಿಯು ... ... ॥೩೮॥

ಅರಿವಳುವನಲಕ್ಷ್ಮಿ ಸ್ತ್ರಿಯೋ ಸುರ । ನಾರಿಯೋ ವಾರಾಂಗನೆಯೊ ಮದ । ನಾರಿಸತಿಯು ಳಕೈಗಿಳಿಯೊ ಮೋಹನ ಸುರವಧೂನಿಸಿಯೊ ॥ ಆರವನಿತೆಯೊ ಮಾಯರೂಪಿನ । ಭೂರಿಭೂತವ್ರೊತಿಯು ಳವಳಂ । ನ್ಯಾರೆನುತ ಭಯಗೊಂಡು ಪ್ರೋಡಿವಗಲ್ಲಿ ವಾಣಿಜರು ... ... ॥೩೯॥

ನೋಡಿದಳು ದಮಯಂತಿ ಭೀತಿಯೊ । ಳೋಡುತಿಹ ಬೇಡಿಕೆಯ ವೈಶ್ಯರ । ಹೇಡಿತನವನು ಕಂಡು ನಸುನಗುತಲ್ಲಿಗೈತಂದು ॥ ಓಡಲ್ಯಾತಕೆ ನಿಮಗೆ ನೃಪಹತಿ । ಮಾತುವಳು ತಾನಲ್ಲ ಜಗಕತಿ । ರೂಢಿಸಿದ ನಳನೃಪನಸತಿ ತಾನೆಂದಳಂದು ಮುಖಿ ... ... ॥೪೦॥

ತಾ ಪೆನಿಮ್ಮ ಪದಾಬ್ಜದರುಶನ । ವಾಯಿತೆಮಗಿಂದಿನಲಿ ಧನ್ಯರು । ಬೀಯವಿಸ್ಥಗೆ ತಂದುದೇ ವಿಧಿಯೆನುತಲೆರಗಿದರು ॥ ನೋಯುತಿರಿಯಿದೆ ಚೈದ್ಯಪುರವೆಂ । ದಾಯುವತಿಯೊಡಗೊಂಡು ಬರುತಿರೆ । ತೋಯಜಾಪ್ತನು ಪಶ್ಚಿಮಾಂಬುಧಿಗಿಳಿದ ನೊಲವಿನಲಿ ... ... ॥೪೧॥

ವೀರಸೇನನ ತನಯ ನಳನೃಪ । ಧಾರುಣಿಯನೆರೆ ಸೋತು ಕಾರ್ಯ । ಕಾರಣವಿನಪ್ಪೆತಂದನಡವಿಗೆ ತನ್ನನಗಲಿದನು ॥ ದಾರಿತಪ್ಪಿದೆನಿಲ್ಲಿ ನಿಮ್ಮನು । ಸೇರಿದೆನು ಪರದೇಸಿಯನಗೊಂ । ದೂರಕಾಣಿಸಿ ನೀವೆನುತ ದುಂಬಿದಳು ಕಂಬನಿಯು ... ... ॥೪೨॥

ಹಗಲು ಸವಿದುದು ಸ್ಫೋಂಬಿಸಿಲು ನೆರೆ । ತೆಗೆದುದತಿ ವೇಗದಲಿ ಕತ್ತಲೆ । ಬಿಗಿದುದವನೀತಳವ ಪೆಟ್ಟಿಗೆ ಮುಚ್ಚಿದಂದದಲಿ ॥ ಸುಗುಣೆ ದಮಯಂತಿಯಳ ನೋಡಲು । ಸೊಗಸಿನಿಂದನಿಮಿಷರವ್ರೋಲ್ತು । ರೆಗಳು ಮೂಡಿದವಂಬರದಿ ಪ್ರಜ್ವಲಿಪ ಕಾಂತಿಯಲಿ ... ... ॥೪೩॥

ಅವನಿ ರತಿಕೇಳ್ವೈಶ್ಯಕುಲಸಂ । ಭವರು ಹಾಯ್ಕಿದರಲ್ಲಿ ಗೂಡಾರವನು ಬಿಟ್ಟರು ಸಾಳ್ವದಲಿ ಮಲಗಿದರು ರಾತ್ರಿಯಲಿ ॥ ಅವಧಿ ಬಂದುದನೇನನೆಂ



ಬೆನು । ಕವಿದು ಕಾಡಾನೆಗಳು ಮುಡುವಿಗೆ । ತವಕದಿಂ ನೀರಡಿಸಿ ಬಂದವು ಗಿರಿಗಳಂದದಲಿ ... ... ॥೪೪॥

ಮುರಿವ ತರುಗಳ ನಿಡುತ ಮೊಳಗೆಳ । ನೊರಸಿ ಮೆಟ್ಟುತ ಕೋಡಿಸಲಿ ಭೂ । ಮೊರಡಿಗಳ ಕಿತ್ತೊಡೆದು ಕಂಡಿತು ಗಿಮಾವ ಜೀವಿ ॥ ಕರಿಗಳ್ತೆರೆ ಕಂಡು ಭೀತಿಯೊ । ಳರವೆ ಹೊಯಿದರು ಕೆಲರು ಧೈರ್ಯದೊ । ಳುರುಬಿನಿಂದರು ಸಬಳದಲಿ ಹೊಕ್ಕಿರಿದು ಕಾಡಿದರು ... ... ॥೪೫॥

ಹರಿವಮೃಗ ಮದಕರಿಗಳವನು । ಸೀಳಿದವು ಕೆಲಕೆಲರ ಮುಮ್ಮೊನೆ । ಯಾಳು ಕವಿದುದು ಹೆಕ್ಕಿ ಕಾದಿದರಖಿಳ ಭುಜಬಲರು ॥ ತಾಳಬಲ್ಲರೆ ಯಮರು ಕರಿಗಳ । ಧಾಳಿಗಿದಿರೇ ಮುರಿದು ಕಾಪ್ಪುರು । ಹೇಳಲೇನದ ಸರಸತೆಗಡೋಡಿದರು ದೆಸೆದೆಸೆಗೆ ... ... ॥೪೬॥

ತರಹರಿಸಿ ನಿಲರಿದು ಕರಿಗಳ । ಉರುಬು ಘನವಿಟ್ಟಣಿಸಿ ಕೋಂತಿರೆ । ಹರಣವನು ಹೆಂಗಡಲೇಕೆಂದೆನುತ ಪಟುಭಟರು ॥ ತೊಳಕಲ್ಲಿಯದಲ್ಲಿ ವಾಣಿ । ಜ್ಜರು ಮುರಿದು ಬರೆ ಕಾಣುತಾ ವೈಶ್ಯರಿಗಧಿಪ ಚಿಂತಿಸಿದನಿವಕಿನ್ನೇನು ಗತಿಯೆನುತ ... ... ॥೪೭॥

ಅಮ್ಮ ಕೇಳೀ ಮದಗಜಂಗಳು । ನಮ್ಮ ಕೊಲುತಿದೆ ಹದನ ಕಾಣೆವು । ನಮ್ಮ ನೀವೆನ್ನರೆ ತಂಬಿ ಬಂದಿರಿ ಯಿದಕೆ ಗತಿಯೇನು ॥ ನಿಮ್ಮನಿಲ್ಲಿಗೆ ತಂದು ದೇವಿ ಧಿ । ಬ್ರಹ್ಮಲಿಖಿತವ ಮೀರುವವರಾ । ರಮ್ಮ ಲೋಕದೊಳೆಂದು ಮರುಗಿದ ವೈಶ್ಯಕುಲತಿಲಕ ... ... ॥೪೮॥

ಜನನವೇ ವರಭೀಮಸೇನನ । ತನಯಳ್ ನಳಚಕ್ರವರ್ತಿಯ । ವಿನಯನಗ್ಗದ ವೀರಸೇನನ ಸೊಸೆಯಾಗಿರಲು ॥ ವನದೊಳಹ ಕರಿಗಳಿಗೆ ತಾ ನಿಜ । ತನುವ ತೆರಬೇಕೆಂಬ ಕಾರಣ । ತನಗಿರಲು ನೀವೇನ ಮಾಡುವಿರೆಂದಳಂದು ಮುಖೀ ॥

ಎನುತ ಕಣ್ಣೀವೆ ಬಿಗಿದು ಮನದಲಿ । ನೆನೆದಳಚ್ಯುತನಂಘ್ರಿ ಕಮಲವ । ವನಜನಾಭ ಮುಕುಂದ ಸಲಹೆನೆ ಕರಿಗಳಾಕ್ಷಣಕೆ ॥ ವನಕೆ ತೆರಳೆ ತವವರನೆಲ್ಲರ । ವನಿತೆ ಸಂತೈಸಿದಳು ದೈವವ । ನೆನವ ಭಕ್ತರಿಗುಂಟೆ ಭಯವೆಲೆ ನೃಪತಿ ಕೇಳೆಂದ ... ... ॥೫೦॥

ಕಳೆದರಂದಿನ ರಾತ್ರಿಯನು ರವಿ । ಬೆಳಗಿದನು ಪೂರ್ವಾದ್ರಿಯಲಿ ಸಂ । ದಣಿಸಿ ನಡೆವರು ಮುಂದೆ ಕಂಡರು ಚೈದ್ಯಪಟ್ಟಣವ ॥ ಹೊಳೆವ ಹೇಮದ ಸೌಧಗಳ ಥಳ । ಥಳಿಪ ನೆಲೆಯುಪ್ಪರಿಗೆಗಳ ಕಂ । ಡೊಲಿದು ಮನಹರುಷದಲಿ ಹೊಕ್ಕರು

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

Digitized by ROJA MUTHIAH RESEARCH LIBRARY

ಸತಿಸಹಿತೆಪ್ಪೆನೆ ... ... ‖೫೧‖

ರಸನಲೇಪದವಿಸುಸಿಯೋಮಲಿ । ವ್ಯಸನದಲಿಹುಮಗಿರ್ದರಕ್ಷ್ವ ಪ್ರೊ । ವಿಶದವೇಷದಿ ಳೆಸೆವಚಂದ್ರನಬಿಂಬದಂದವಿ ‖ ಕೆಪಿಪದನೆಬಗಾತಿರಲು ಪುರಜನ । ವೆವದುನೋಡಿದರಲ್ಲಿಗಲ್ಲಿಗೆ । ಬಿಸಜನಯನೆಯಿವಳ್ಯಾರೆನುತಬಿ ರಗಾಯ್ತುಜನನಿಕರ ... ... ‖೫೨‖

ನುಡಿಗೆಸುಕಬಿಕಸಲಿಯೆಮಿಗಿಳಿ । ನಡುಬಳುಕಲ್ಸೃಸ್ತ್ರಸ್ತನಕಸೆಸೀ । ಮುಡಿಯುಭಾರಕೆಕೊರಳುಕೊಂಕಲುಪೊಲ್ಲದಿಯನಿಡುತ ‖ ಕುಡಿತೆಗಂಗಳನೋಟಕಾರ್ಸ್ಮೃಗಿ । ಲೆಕ್ಕಡುಮಿಂಚುಮಿಂಚಿನಂದದಿ । ಸಡಗರದಿಬರುತಿರ್ದಳಂಗನೆ ಬೆಳಲಬೀದಿಯಲಿ ... ... ‖೫೩‖

ಕೇಮದು ಪ್ಪರಿಗೆಯಲಿನೃಪಸತಿ । ಕಾಮಿನಿಯರೋಲಗದೊಳೊಪ್ಪುತ । ತಾಮರಸದಳನಯನೆದಮಯಂತಿಯನುತಾಕಂಡು । ಈಮಹಾಸತಿಯಾರಿವಳುಸು । ತ್ರಾಮನರಸಿಯೊಯೆನುತಕರೆಸಿದ । ಡಾಮಹಿಳೆಬಂದಳುನೃಪಾಲನಸತಿಯಸನ್ಮುಖಕೆ ... ... ‖೫೪‖

ತಾಯೆನೀನಾರಾವದೇಶದ । ರಾಯನರಸಿಯಿದೇನುನಿನಗೀ ಹಾಯ್ದವಲಿಕಳೆಗುಂದಿಖೇದವಿದೇಕೆಹೇಳೆನಲು ‖ ಆಯುವತಿಕಣ್ಣೀರಿನಲಿಪ್ರೊ ರಾಯಶೋಕದೊಳೆಂದಳಾತರ । ಳಾಯತಾಕ್ಷಿಗೆತನ್ನವೃತ್ತಾಂತವನು ಬ್ವಿಸ್ತಾ ಸ್ತರಿಸಿ ... ... ... ‖೫೫‖

ಕ್ಷಿತಿಯನೆಲ್ಲವಸೋತುಜೂಜಿಲಿ । ಪತಿವನಕೆಬಂದೆನ್ನನಗಲಿದ । ಮತಿವಿಕಳೆತನದಿಂದತಿರುಗುತಬಂದೆನಿಮ್ಮಡಿಗೆ ‖ ಹಿತವರಾರನುಕಾಣೆನೀವೆ । ಗತಿಯೆನಗೆಪರದೇಸಿಯನುಪರ । ಹಿತವೆಪುಣ್ಯವ್ಪರಕ್ಷಿಸೆಂದಳು ನಳನೃಪನ ರಾಣಿ ... ... ... ‖೫೬‖

ನುಡಿಯುಕೇಳುತಚೈದ್ಯಭೂಪನ । ಮಡದಿನೂಪ್ಪುರಘಲ್ಲುಘಲಿರೆನ ಲಡಿಯಿಡುತಲಪ್ಪಿದಳುಕರಗಿನೋಳೊರಸಿಕಂಬನಿಯ ‖ ಬಿಡುವ್ಯಥೆಯಪರಭೂಷಣಂಗಳ । ತೊಡುದುಕೂಲವನುಡುಸುಮಾಲ್ಯವ । ಮುಡಿಗೆಸೇರಿಸುತರುಣಿ ಯೆಂದಳುಚೈದ್ಯನೃಪನರಸಿ ... ... ‖೫೭‖

ದೇವಿನಿಮ್ಮುಪಚಾರವೇಸಂ । ಭಾವನೆಯಲಾನಮಗೆಬೇರೆ । ನ್ನಾವ ಭೂಷಣವೇಕೆದೇಶಿಗರಪ್ಪನಿಮ್ಮಡಿಯ ‖ ಸೇವೆಯಲಿತಾನಿರ್ಪೆನುಹೀನವ । ನಾಪ್ರಬಳೆನುಪರಲ್ಲತನ್ನನು । ಕಾವಕೊಡನನುಸೀವೆಬಲ್ಲಿರಿಯೆಂದಳಾಸತಿಗೆ ‖೫೮‖



ಎನಲುನಗುತಿಂತೆಂದಳಾಕೆ । ನಿನಿಗೆತನ್ನಿಂದಾಗದುಪರಹಿತಿ । ನಿನಗಪ್ಪೇಳೆನುಹೀನಕೆಲಸವಚಿಂತೆಬೇಡೆನುತ ‖ ತನಗೆಮಗಳುಸುನೀತೆಯಾಕೆಯ । ಮನೆಯೊಳಿರುಸೈರಂಧ್ರಿತನದಿಂ । ದನವರತನೀನೆಂದುಸೇವಿಸೆಳುಹಿದಳುಮಾನಸೆಗೆ ‖

ಚೈದ್ಯಭೂಪನಮಡದಿತನ್ನಸ । ಹೋದರಿಯಸುತೆಯೆಂದುಬಲ್ಲಳೆ । ಮೇದಿನಿಯೊಳಿವಳಾರಸತಿಯೆಂದರಿದುಮನದೊಳಗೆ ‖ ಆದರಿಸಿಸಲಹಿದಳುಮಗಳೋ । ಪಾದಿಯಲಿದಮಯಂತಿಯನುಮಾನ । ಭೇದವಿಲ್ಲದೆಕರುಣದಿಂದಂಗನೆಯನೃಪನರಸಿ ... ... ‖೬೦‖

ಮನದಪಗೆಯತಗಿತುಸುನೀತೆಯು । ಮನೆಯೊಳಿದ್ದಳುಭೇದವಿಲ್ಲದೆ । ಯನುದಿನದೊಳಾಹಾನಿದಾಂಗನೆಯುತ್ತನುಳಿದು ‖ ವನಜನಾಭನಕರುಣದಲಿಬಂ । ದಿನಯನೆಂದಿಗೆಮುಖವದೋರುವ । ನೆನುತಚಿಂತಿಸುತಿರ್ದಳಾಪರಪುರದ ಚೆನ್ನಿಗನ ... ... ... ‖೬೧‖

ಅಂತು ಸಂಧಿ ೫ಕ್ಕೆ ಪದ ೩೨೦ಕ್ಕೆ ಮಂಗಳಮಸ್ತು.

---

## ಆರನೇಸಂಧಿ

ಸೂಚನೆ। ಇಂದುವದನೆಯನಗಲಿತಾಮುನ । ನೊಂದುಕಾರ್ಕೋಟಕ ನದೆಶೆಯಲಿ । ಬಂದುಹೊಕ್ಕನುನಳನೃಪತಿ ಋತುಪರ್ಣನಗರಿಯನು ‖

ಕೇಳುಕುಂತೀತನಯನಿಷಧನೃ । ಪಾಲನಿತ್ತಲುಮರದುಮಲಗಿದ । ಬಾಲಕಿಯಬಿಟ್ಟಡವಿಯಲಿಹೊರವಂಟನಾಶ್ರಮವ ‖ ಕಾಲವಾತನಕೇಳುಮಾಡಿತು । ಶೂಲಪಾಣಿಯೆಬಲ್ಲನಳಭೂ । ಪಾಲಕನವಿಧಿಯೇನನೆಂಬೆನುಬಂದನಡವಿಯಲಿ ‖

ವನಿತೆಮಲಗಿಹಳೋಅದ್ವರ್ಯದಿ । ನೆನವಳೋದೈವವನುನಿದ್ರೆಯ । ಕನಸಕಂಡೇಳುವಳೋಕಾಣದೆಮಲವಹಂಬಲಿಸಿ ‖ ಕನಲಿವಿಧಿಯನುಬೈವಳೋ । ಕಂಬನಿಯಸುರಿವಳೋಶೋಕದಲಿನಿಜ । ತನುವಬಿಡುವಳೊಕಾಂತೆಯಂತಿಹಳೆನುತಬಿಸುಸುಯ್ವ ... ... ‖೧‖

ಸುತರಪರರೆಡೆಗಿತ್ತುನಂಬಿದ । ಸತಿಯುತಂದಪವಿಯಲಿಮಲಗಿಸಿ । ಮತಿವಿಕಳನಾದೆನುಪುರಾಕೃತಪುಣ್ಯಫಲವೈಸೆ । ಕ್ಷಿತಿಯೊಳಾರುಂಟೆನ್ನವೋಲ್ನಿಜ । ಸತಿಗೆತಪ್ಪಿದಪಾಹಿನನ್ಯಯಂ । ಪತಿಯದಶೋಕದಲಿತೊಡದನುಶಿವಶಿವಾಯೆನುತ ... ... ‖೨‖

ಲೋಕವೊಳಗಗ್ಗಳೆಯನುಹಿಮರ । ನೇಕವವರೊಳಗಾರನೊಲ್ಲ

Digitized by ROJA MUTHIAH RESEARCH LIBRARY

ದೆ । ನೂಕಿಕನ್ನೆನೆವ್ರೋಲಿದ್ಯಕ್ಕೆಕೊಂಡೆಳಸರೋಜಮುಖಿ ॥ ಆಕೆಯಗಲಿದ
ಪಾತಕನ್ನು ತಾ । ಸೋಕೆಧರೆಯೊಳು ಶಿವಶಿವಾಯೆಂ । ದಳಕಮಲಲೋಚನೆಗೆಮ
ರುಗಿದನರಸಕೇಳೆಂದ ... ... ॥೪॥

ಈಪರಿಯೊಳತಿಶೋಕದಿಂದವ । ಕ್ಷಾಪಸುತಲಾನೃಪತಿಬಿಚ್ಚಿದ ।
ತಾಪದಲಿ ಕತ್ತರಿಸಿಕೊಂಡು ಬಳಲುತ ಕನ್ನ ವನದೊಳಗೆ ॥ ಶ್ರೀಪತಿಯನೆನೆಯುತ್ತ
ಹೃದಯದ । ತಾಪದೊಳು ಬರುತಿರಲು ಮುಂದೆಸ । ಮೀಪದೊಳು ಹುತವಹ
ನವಾಹಿಮೆಯ ಕಂಡನವನೀಶ ... ... ॥೫॥

ಏನನೆಂಬೆನು ನೃಪತಿ ಕಿಚ್ಚಿನ । ಹಾವಳಿಯ ನಡವಳಿಗೆ ಬೇಗೆ ತಾ ।
ಭಾನುಮಂಡಲವ ತಗಿದು ಸುತ್ತಿದ ಹೊಗೆಯ ಹೊರಳಿಯಲಿ ॥ ಕಾನನವನೆತಗೊಂ
ಡುದ್ಧರಿ । ಗಾನಳಾ ಪವಿತ್ರ ನಿರವ್ವೆ । ಮುನಿಕರ ನಡೆಸಡು ಬೆಂದುದಾ ಸಕ
ಲವನಭೂಮಿ ... ... ॥೬॥

ಬಿದಿರುವನಿಗಳ ಭುಗಿಲು ಭುಗಿಲೆ । ಬ್ಬಿದಿರು ಛಟಿ ಛಟಿ ಛಟಿಲೆನುತ ರಿಯೊ
ಳು । ಕದಳಿಗಳು ಶಿವಿ ಶಿವಿ ಸಿತರುಗಳ ನೂರಡಿ ಮರಳಗಳನು ॥ ಗದಗೆ ಸಿಗು
ಹಗಳಲಿ ಮೃಗತತಿ । ಬೆದರಿ ಹಾಯ್ದವು ಪಕ್ಷಿಸಂಕುಲ । ಉದುರಿದವು ಗಿರಿಸಹಿತ
ಬೆಂದವು ವನದ ಮಧ್ಯದಲಿ ... ... ॥೭॥

ತಗದು ಹಾಯ್ದವು ಸಿಂಹಶಾರ್ದೂಲ । ಲಗಳ ಕರಿಗಳು ಹಿಂದು ನಾನಾ ।
ಮೃಗಗಳಗಣಿತ ಬೆಂದು ಬಿದ್ದವು ನಿಮಿಷಮಾತ್ರದಲಿ ॥ ಚಿಗಿದು [illegible] ಗಂ
ಡಭೇರುಂ । ಡಗಳು ಮೊದಲಾದಖಿಳ ಮೃಗಪ । ಕ್ಷಿಗಳು ಕೆಡೆದುದು ಕಿಚ್ಚಿನೊಳ
ಗವನೀಶ ಕೇಳೆಂದ ... ... ॥೮॥

ಪ್ರಳಯದಿನದವಲಿಸುಳಿವವತಬಾ । ನಲನೊಯಂದದಿ ವಸುಂತ
ಲಿ । ಸುಳಿಸುಳಿಯುತಾಹಾರಗೊಳುತಿರಲಲ್ಲಿದ್ದ ವಿಷಗಾಯು ॥ ಸಿಲುಕಿದೆನು
ಪಾವಕನೊಳೆನ್ನನು । ಬಲಿದು ಹಾನೃಪಕುಲಶಿರೋಮಣಿ । ಕಳದು ಬಿಡಿಸೈ ಸು
ಕೃತನಿನಗಹುದೆಂದು ಬಾಸಿನವ ... ... ॥೯॥

ಆಗಲಾಧ್ವನಿ ಕೇಳನೃಪತಿ ಸ । ರಾಗದಲಿ ಬಂದು ಹೊಕ್ಕನು ।
ಕೂಗಿದವರಾರೆನುತ ಬರುತಿರೆ ಕಂಡನುರಗಪತಿ ॥ ಪ್ರೇಗುತಿದೆಯನ ಸಂಪ್ರಸಲ
ಹುವ್ವ । ಡಾಗಪುಜ್ಞ ನೃಪಾಲನಲ್ಲಿ । ಭೋಗಿಯನು ಕಂಡನಸನ್ಯೈರೆಂ
ದುಬೆಸಗೊಂಡ ... ... ॥೧೦॥

ಉರಗಪತಿ ಕೇಳ್ ಕೋಟಿನುತ । ನರಸ ಕೇಳ್ ವನದೊಳಿರುತಿರೆ ।



ಪರಮಯೋಗಿ ಬಂದೆನ್ನ ಕಾಲಿಗಿದನೆಂದು ಭೀತಿಯಲಿ । ಕರದು ಕೊಟ್ಟನು ಶಾಪವ
ನಂ । ಚಾಸದಂತಿರೆ ಯೆನಗೆ ಮಿದು ಹರಿ । ಹರವ್ರಯಂಬಿಗ ಮುನಿಪ ಕರುಣಿಸು
ಯೆಂದಡಿಂತೆಂದ ... ... ॥೧೧॥

ಇರಲಿರಲು ಕಾಲಾಂತರಕೆ ಭೂ । ವರನು ನಳನೃಪನಿಲ್ಲಿಗೈದುವ । ಧರ
ಣಿಪನ ಕರಕಮಲ ಸೋಂಕಲು ಶಾಪವದು ಬಳಿಕ ॥ ಪರಿಹರಿವುದೆನೆ ಮುನಿಯು ಪಚ
ನದಿ । ಒರವಹಾರೈಸಿದೆನು ಬಂದ್ಯೆ । ಕರುಣದಿಂದೆನ್ನಯನು ಪರಿಹರಿಸೆಂದನು
ರಗಪತಿ ... ... ॥೧೨॥

ಕರುಣದಲಿ ನೃಪ ಭೀತಿಗೊಳ್ಳದೆ । ಉರಗಪತಿಯನು ತೆಗೆಯುತನ
ಲನ । ಪುರಿಯುತಪ್ಪಿಸಿ ಕಂಪು ಸರಸಿಯ ತಡಿಯೊಳುಪಚರಿಸೆ ॥ ಕರಪಿಡಿದು ಧರ
ಣಿಪನಗಚ್ಚಿದ । ಡುರವಣಿಸಿ ವಿಷವೇರಿ ನೃಪತಿಯ । ಪರಮಕೋಮಲದೇಹಕ
ಟ್ಟತು ಸಿತ್ಯತಿರೂಪಾಗಿ ... ... ॥೧೩॥

ದೊಡ್ಡವು ದಾದಗಳನು ಚೆನ್ನಿನ । ಳಹ್ಯನೋರೆಯ ಗಂಟುಮೂ
ಗಿನ । ದೊಡ್ಡ ಕೈಕಾಲುಗಳ ಪ್ರದುರಿದರೋಮವಿರೂಸೆಗಳ ॥ ಜಿಡ್ಡುದೇಹದ
ಜಿಪ್ಪುಗೂಲಿನ । ಗಿಡ್ಡರೂಪಿನ ಹರಕುಗಡ್ಡದ । ಹೆಡ್ಡನಾದ ಕುರೂಪಿಕನ
ದಲಿ ನೃಪತಿಪಿಪ ಕಂಡ ... ... ॥೧೪॥

ಮಹಾನಾಕಾರದ ನೃಪಾಲಕ । ಕ್ರೂರರೂಪದನು ರ್ರಾಕೃತ ।
ವಿರೂಲಂಳಕೊಂಡುನ ಬಿದವುತನ ಮನದೊಳಗೆ ॥ ಸೇರಿವಾಣಿಕಮೆಂದು ಪಿ
ಡಿವರಿ । ಭೂರಿ ಕಂಡನಿದಾಯಿತ್ತು ಹರಹರ । ಕ್ರೂರಜಂತುಗಳೊಡನೆ ಸಖಿತನ
ಫಲಿಸಿತೆನಗೆಂದ ... ... ॥೧೫॥

ಮುನ್ನ ಮಾಡಿದ ಕರ್ಮಫಲವಿದು । ಚೆನ್ನಬಿಡುವುದೆ ಉರಗಪತಿ ಕೇಳ್ ।
ಯನ್ನ ನೈ [illegible] ಸಾಪಿಯಮಾಡೆನಲ ॥ ಚನ್ನನಾರಿದ್ದ ಜನಕ ನೃಪತಿತನ ।
[illegible] ನ್ನು ತಪ್ಪದ ಬಳಿಕ ಲೋಕದೊ । [illegible] ನ್ನು ಸೈರಿಸಲಾರದು ಶಪವೆಂದೆನು ತಮರು
ಗಿದನು ... ... ॥೧೬॥

ಯಾಜನ್ಯಪತಿ ವ್ಯಥಾಮಾನಸೋತ್ಸಹ । ಕಾಕೊಳಗಲು ಬೇಡ ನವಿ ।
ವೇಕಿ [illegible] ನಾಕಿನ್ನು ನಿನಗುಪಕಾರದ ನಂಬಿಡಿರು ॥ ಲೋಕ ನಿನ್ನನು ಕಾಣದಂತಿರ ।
ಬೇ [illegible] ನುತಲೇ [illegible] ಸಿದೆ ನಗಳವ । ಸೋಕ ಪ್ರಶಾಂತಂಗಳ [illegible] ಧವಿದರಿಂದ ನಿನಗೆಂದ ॥೧೭॥

ಗರಳಮಯ ಸರ್ವಾಂಗದಲಿ ಸಂ । ಚರಿಸುತಿಹ ಪರಿಯಂತ ರಿಪುಗ
ಳ । ಕರಜಲಾಗ್ನಿ ಭುಜಗಕೆ ನಾವಿಗಳ ಭಯವಿಲ್ಲ ॥ ನಿರತವಿದು ವಜ್ರಾಂಗಿ

Digitized by ROJA MUTHIAH RESEARCH LIBRARY

ಜೋಡಿ । ನ್ನರಸಚಿಂತಿಸಬೇಡಕಾರ್‍ಯದ । ಹೊರಗೆತಾನಿದುಬೇರೆಭಯಬೇಡಿ
ನ್ನನಿನಗೆಂದ ... ... ॥೧೮॥

ಜನಪಕೇಳ್ಳೆಧರೆಗೆಯಿತುಪ । ರ್ಣನುಮಹಾರಾಜೇಂದ್ರಗುಣನಿಧಿ ।
ಯಿನಕುಲಾಂಬುಧಿಚಂದ್ರಶಾಶ್ವತನಪುರವಯೋಧ್ಯಪದು ॥ ನಿನಗೆಪರಹಾದಕ್ಕರದಹ
ದಯವಾ । ತನಲಿಸೀನವಗಶ್ವಹೃದಯಪ । ನೆನುಗೊಳಿಸುಸುಕಿನ್ನ ಚಿಂತಿಸ
ಬೇಡಹೋಗೆಂದ ... ... ॥೧೯॥

ಪೊತವಿದನಪ್ರೋತ್ಸೈಸುವಾಘೆಯು । ಪಿಡಿದುಬಾಹುಕನೆಂಬನಾಪ
ತಿ । ನಡೆಸುರಥವನುಹೀನವೃತ್ತಿ ಯಿದಲ್ಲನಿನಗಿನ್ನು ॥ ಬಡದುಪಾನ್ನಿನಗೂ
ಪುಬೇಕಾ । ದೊಡೆನೆನಪ್ರುದಾಪಕ್ಷಿಗಳುಹ । ಚ್ಚಡಸೀವಪ್ರಧರಿಸಲಡಗುವ
ಹೇತುರೂಪಿಸನ ... ... ॥೨೦॥

ನಿನ್ನಹವಣೇಪ್ರೂರ್ವದಲಿಭಿ । ಪ್ರಾನ್ನವನುಬೇಡಿದನುಪಶುಪತಿ ।
ವನ್ನಗಾರಿಧ್ವಜನುಕಾಯ್ದನುಪಶುಗಳಡವಿಯಲಿ ॥ ಪ್ರನ್ನಕ್ಕೈಶ್ವರ್ಯಪ್ರದನು
ಶತ । ಪನ್ಯುಬನದಲಿನಪಂಸೇನಾ । ಕಿನ್ನನೋಯದಿರಿದಕನೀಹೋಗೆಂದ
ನುರಗಪತಿ ... ... ॥೨೧॥

ಪರಮಸತ್ಯವ್ರತನೆಕೇಳ್ವ । ಪ್ಕರನಗೆಲಿದುನ್ನಿಜರಾಜ್ಯದ ।
ಸಿರಿಸಹಿತನಿಬಾಜ್ಯವಾಳುವೆನಿನ್ನಸತಿಸಹಿತ ॥ ಪರವನಿತ್ತನುನಿನಗೆಯಿಂ
ದುಪ । ಚರಿಸಿಕಾರ್ಕೋಟಕನುನಳನೃಪ । ಗರುಹತಾಕ್ಷಣ ಪಾಯವಾದ
ನುರಾಯಕೇಳೆಂದ ... ... ॥೨೨॥

ಬಳಿಕಚಿಂತೆಯನಾಂತುಮನದಲಿ । ನಳನೃಪತಿಕಾನನದಿಬರುತಿರೆ ।
ಮರದುಮಲಗಿದದುಷ್ಟಮೃಗಗಳಕಂಡುಸುನಗುತ ॥ ಹಲವುಗಿರಿಗುಹೆಗಳನು
ಕಾಣುತ । ಕಳದುಪಂವಣಜನಪದಂಗಳ । ಬಳಿಪಿಡಿದುನಡೆತಂದನಲಸದರಶ
ಲಪ್ರಯೋಜನವ ... ... ॥೨೩॥

ಹರಿಪನವಿಗಳವನತಟಾಕದ । ಪರಕುಸುಮವಲ್ಲಿಗೆಯಬನಗಳ ।
ಪುರದಪಾಂತ್ಯದೊಳೆಸೆವಕೆಂದಾವರೆಯಕೊಳಗಳನು ॥ ಉರುತರದಮಂಟಪ
ಗಳೆಂದುರೆ । ಮೆರೆವರಾಜ್ಯವಕಳದುಪಂಡಕೆ । ಬರುತಯೋಧ್ಯಾಪ್ರುರವ
ಕಂಡನುನೃಪತಿಕೇಳೆಂದ ... ... ॥೨೪॥

ಧಗಧಗಿಪಕೋಟೆಪಳಯಹೊಗ । ರೆಗುವಹೇಮದಕೊತ್ತಳಂಗ
ಳ । ಗಗನವನುಚುಂಬಿಸುವತೆನೆಗಳನಾಲುರತ್ನಗಳ ॥ ಸೊಗಸುದೋರ್ಪ



ಕ್ಷೇರಿಗಳಸುತ್ತಿರು । ಪಗಳಘಾತಪನಾರಬ್ಬರು । ಬಿಗಿದವಜ್ರಕವಾಟವೆ
ಸವಿರಲಪಟ್ಟದಿಕ್ಕಿನಲಿ ... ... ॥೨೫॥

ಹೊಳೆವಮಸುನಿಯರತ್ನನಿಚಯದ । ನೆಲೆಯಸೌಧಾಗ್ರದಲಿವಿಂಗೆ
ಪ್ರ । ಜ್ವಲಿಪಹೇಮದಕಲಶಗಳವಿಚಿತ್ರಶಾಲೆಗಳ ॥ ಒಲಸೆಯರಗಾನಾವಿ
ನೋದದ । ಹಲವುಗೋಪುರಶಿಖರದಗೋತ । ನೆಲೆಯವರ್ಣಿಸಲರಿದಯೋಧ್ಯಾ
ಪ್ರುರವ್ರರಂಜಿಸಿತು ... ... ॥೨೬॥

ಅರಸುಗಳುಭೂಸುರರುವಿಗೆವೈ । ಶ್ಯರುಚತುರ್ಥರುನಾಗರೀಕದ
ಪ್ರಜನರುಸುಂದರಿಸಿತಗಣಿತಕೇರಿಕೇರಿಯಲಿ ॥ ಕರಿತುರಗರಥಪಾಯದಳಗೋ
ಚರಿಸುತಂಗಡಿನವಿಧಾನವೆ । ಆರುವಯೋಧ್ಯಾಪ್ರುರವಕಂಡನುಶಿರವತೂಗಾಡಿ ॥

ಬಂದುಹೊಕ್ಕನುಪ್ರುರವಮೆರೆವತಿ । ಚಂದವನುನೆರೆನೋಡಿಮನದೊ
ಳ । ಗಂದುಕೊಂಡಾಡಿದನುಋತುಪರ್ಣನನುಹಾಸಿರಿಯ ॥ ಹಂದುದೇವಿಧಿತ
ನ್ನನಿಲ್ಲಿಗೆ । ಮಂದಭಾಗ್ಯನುಶಾನೆನುತಮನ । ನೊಂದುನೆನೆವನುವರಭ್ರುಗಾಧಿಪ
ಚನ್ನಕೇಶವನ ... ... ... ॥೨೮॥

ಅಂತು ಸಂಧಿ ೬ ಕ್ಕೆ ಪದ ೩೦೦ ಕ್ಕೆ ಮಂಗಳನುಸ್ತು.

---

## ಏಳನೇ ಸಂಧಿ

ಸೂಚನೆ। ಮಗಳಕಾಣದೆಭೀಮನೃಪಮೂ । ಜಗವಶೋಧಿಸಿ
ಚೈದ್ಯಭೂಪನ । ನಗರದಲ್ಲಿರೆಕಂಡುಕರೆಸಿದತನ್ನನಿಜಸುತೆಯ ॥

ಪದ। ಕೇಳುಕುಂತೀತನಯನಿರ್ಮಿತ । ದಾಲಯದಸೋಂಪಿನಲಿ
ವೋಲಗ । ಶಾಲೆಯಲಿಋತುಪರ್ಣನಿದ್ದನು ಸಿಂಹಪೀಠದಲಿ ॥ ಸಾಲವಮಕು
ಟವನೃಪರುಭೂಸುರ । ಜಾಲಮಂತ್ರಿಪುರೋಹಿತರುಗುಣ । ಶೀಲರುನ್ನತ
ಸತಿಯರಿಂದೆಸೆದಿರ್ದದಾಸ್ಥಾನ ... ... ॥೧॥

ಇದುಸಮಯತನಗೆಂದುನಳನೃಪ । ಮುದದಿವೇಷವಮರಸಿಹರಿ
ಯು । ದವಲಿತಾಬಂದಾಗಕಂಡನುನೃಪಗೆಕೈಮುಗಿದು ॥ ಸದಮಲಜ್ಞಾನದ
ಲಿಪ್ರನ್ನರ । ಕದನಗಲಿಗಳುಜೇಯನೆಲುನಯ । ಹೃದಯದಲಿಬಸ್ನ್ಯಸಿದ
ನುಋತುಪರ್ಣಭೂಪತಿಗೆ ... ... ॥೨॥

ಅವನಿಪತಿಕೇಳ್ನಮ್ಮಪದಕವು । ಲವನುಭಜಿಸುವೆಜೀಯ ಚಿತ್ತದಿ ।
ಸವಡಿನುಡಿಯುವಗಿಲ್ಲಬಾಹುಕನೆಂಬುದಭಿದಾನ ॥ ಭುವನನೊಳುತಾನ್ನ್ವಕುಲ

ಹೃದ । ಯಾನನ ಬಲ್ಲೆನು ಶಾಕಪಾಕದಿ । ಸವಿಗೊಳಿಸುವ ರವಿದ್ಯೆ ನನಗುಂಟೆಂ
ದವನ ನಗುತ ... ... ॥೩॥

ಸೂಪಕಾರವೆ ಒಳಗ್ಗಳನು ಕಡು । ರೂಪಿನವನಲ್ಲ ಚಿತ್ತದಿ ।
ತಾಪುರುಷನೆನ್ನದಿರು ನೋಡಾ ತನ್ನ ಪೌರುಷವ ॥ ಭೂಪಮುಂಗೈ ಕಂಕಣಕೆ
ಕಾಲ । ದೀಪಕನ್ನಡಿಯೇಕೆ ತರಿಸು ಪ್ರ । ತಾಪವಾ ಹೇಳೆನೆಂದು ಬಿನ್ನೈಸಿದನು
ನಸುನಗುತ ... ... ॥೪॥

ಪ್ರೌಢವಿಪ್ರತತಿಯುತ ಋತುಪರ್ಣ ಬಾಹುಕ । ನುಡಿದ ವಚನಕೆ ಮೆಚ್ಚಿ ಮಾನ
ಘ । ಗ್ಘಡದ ತೇಜಿಯು ತರಿಸಿ ಕಡಲೇರಿದನು ಬೇಡಿದುಲಿ ॥ ಮಿಡಿದ ಸನ್ನೆಗೆ ಕಾ
ಶಿಪುರಿವೆಗಾ । ಲಿಡುತ ಜೋಡಣೆಯಿಂದ ರಥವಾಜಿ । ಗಡಗಚಂಪ್ರಿಮೆ ತುರಗ
ಯಾಮವೇಗದೊಳರಸಕೇಳೆಂದ ... ... ॥೫॥

ಕರದ ಮಾಘಿಯ ಸಡಿಲ ಬಿಟ್ಟೆನಿ । ಬ್ಬರದ ಗಮನ ಸುವೇಗ ಪೊಳ್ಳದಿ ತಪನಿಯೊ ।
ಘೋರವಣಿಸಿಕೆಂಧೂಳಿ ಮುಸುಕಿದು ದಂಬರವ ಬಿಡದೆ ॥ ಧರಣಿ ತಲ್ಲಣಿಸಿದುದು ಗಗನ
ದಿ । ಸುರರು ಕೊಂಡಾಡಿದರು ಬಾಹುಕ । ನರಸನರಥವ ದೇವ ಬ್ರಹ್ಮಪುಂಡ್ರ ಬಾಪೆಂದು
ದುಸೆ ಭೂಸ್ಥಾನ ... ... ॥೬॥

ಮುರುಹಿ ಹಿಡಿದ ಮೇಲುಮಿಡಿದ ಸನ್ನೆಗೆ । ತಿರುಗಿ ತಳಿವೇಗದಲಿ ಹಯ
ಲೋ । ಸರಿಸಿಕಿರುಬೆಮರಿಡಲು ನಿಲಿಸುತ ಮಾರ್ಗ ನಿಳಿದು ॥ ಕರವ ಮುಗಿಯ
ಲು ನೃಪತಿ ಮೆಚ್ಚುತ । ತರಿಸಿ ಕೊಟ್ಟನು ಭೂಷಣಂಗಳ । ಹಿರಿಯ ಸಂಬಳವಿ
ತ್ತು ನಿಲಿಸಿದ ನರಸ ಬಾಹುಕನ ... ... ॥೭॥

ಜನಪ ಕೇಳ್ ಬಾಹುಕನು ಮಾಲಾ । ಕ್ಯನಲಿ ಸತ್ಯಪಕ್ಷಿಸಿಯಮಾನ
ನನುಕಿನ ಪ್ರಕಟಿದಿರ್ದ ಸೂಂದಾನೆಂದು ಬಿನದಾ ಕ್ರ ॥ ವನಜಮುಖಿದಮಯಂತ
ಯೊಳು ಚಂ । ಬಿಸಸುಸಲ್ಲ ನಸು ಬಿಂಬಿಹ । ಕನಸ ಕಂಡೆಚ್ಚರಕಿಯಂದೆ
ಮುತ್ತ ಹಲುಬಿದನು ... ... ॥೮॥

ಕಾತರಿಣಿ ನಳನಾಕ್ಷಿನಮುಸಂ । ಪ್ರೀತಿ ಪೂರ್ವಕದಿಂದ ಕನಸಿಲಿ ।
ಮಾತುದೋರದೆ ಬಂದು ಸುಪ್ಪಲಿಕರು ಡಿಂಸೀನು ॥ ಧಾತುಗಾಂಧನ ಘಯ
ಸುಗಾ । ರಾಶಿಬಲ್ಲನೆ ನುತ್ತ ಮನದಲಿ । ಕಾತರಿಸಿ ನಿಜಸತಿಗೆ ಹಲುಬಿದನಂದನ
ನೆಸುಗೆಯಲಿ .. ... ॥೯॥

ನಾರಿ ಎನ್ನಗವೇಣಿ ಮುದ ನ । ಕೂಲನೆಸುಗೆಯನು ತಪ್ಪಿಸು ।
ಬಾರೆ ಬಳಲಿಸುವೇಡ ನಲಯು ಜಗಂಧಿತಕ್ಕೆಯೊಳು ॥ ಸೇರಿಸೆನ್ನಯ ತನುಮನ



ದನಕೆ । ಸೇರಿಸಧರಾಮೃತವ ನೆನಗುಪ । ಕಾರವನು ಮಾಡೆಂದು ಹಲುಬಿದ
ನಂದು ನಿಜಸತಿಗೆ ... ... ॥೧೦॥

ವಿಕಳವನು ಮಾಲಾಖ್ಯ ಕೇಳದು । ಪಕಪಕನೆ ನಗುತೆಂದನೆಲೆ
ಬಾ । ಹುಕನೆ ಹಲುಬುವುದೇನು ಕಂಪಗೆ ತಕ್ಕ ಜೋಡೆಯನು ॥ ಅಕಟ ನೀ ನಚೆ
ಲುವನೋ ಬಾ । ಲಕಿ ನಿನಗೆ ತಕ್ಕ ಸಳೊ ಲೋಕದಿ । ಮುಕರ ನೀ ತನವ ಮುಳಸೆಂದ
ಪಹಾಸ್ಯವ ಮಾಡಿದನು ... ... ॥೧೧॥

ಎಂದು ಹಾಸ್ಯವನಾಡಿದವನ ನೋಡ । ನೆಂದನಾ ಬಾಹುಕನು ಪೂರ್ವ
ದೆ ನ । ಳೆಂದು ಬ್ರಹ್ಮನೊಬ್ಬ ನಿಜಸತಿಯಗಲಿ ನಸೊನ್ನಡೆದ ॥ ನೊಂದು ನು
ಡಿದನು ವಿರಹದೆ ತಾ । ನಿಂದು ಕನಸಿಲಿ ಕಂಡ ಬಾ ಲೆಂತಿಯೊ । ಳೆಂದ ಮಾತೆ
ಪ್ರೇಮ ಸತಿ ಸುತರಿಲ್ಲ ತನಗೆಂದ ... ... ॥೧೨॥

ಅರಸ ಕೇಳಾ ಪುರದೊಳೊಬ್ಬರಿ । ಗರಿಯದಂದದಿ ನಳನಿರಲು ಭೂ ।
ಸುರರ ಮತದಲಿ ಕೆಳ್ದಿ ಭೀಮನೃಪಾಲನೀಕದನ ॥ ಧರೆಯನೆಲ್ಲ ಮಜ್ಜಿನಲಿ ಪ್ರ ।
ಪ್ಪರಗೆ ಸೋತು ನೃಪಾಲ ನಡಪಿಗೆ । ತರಳದನು ಸತಿಸಹಿತ ಲೆನೆ ಕೂರಳದನು ಕೋ
ಟದಲಿ ... ... ॥೧೩॥

ಹಾವ ಗಳಿಸಿ ಮಾಯಂತಿನಿಪಧಸ । ನಾಮನನು ಕೈ ಹಿಡಿದು ಬಾಳುವ ।
ನೆಂದನನು ಬಿಡುಕ ಪಿಗ್ಗ ಸಿತವಿಧಿ ವಿಕ್ರಮರ್ಗಫಲ ॥ ಭೀಮನೃಪನು ದಾಡಲಿಜನಿ
ಸಿವಿ । ರಾಮ ಮಾಯಿಕಸಿಸ್ಕ ಕೀಮುಖ । ತಾಮರಸಮನು ಕಾಣೆ ತೋರೆಂದರ
ಸ ಹಲುಬಿದು ... ... ॥೧೪॥

ಮಗಳ ಮೊಹದ ನುತಿ ನಾರಿಗೆ । ತೆಗೆದು ಬಿಸುಟೆನಿರಾಕೆಯ ಬಳಿಯೆ ನೀ
ಬಗೆ ತಂದು ನೆಪಿಥಿಯನು ನಿನ್ನನು ಹರಮುಹಾದೇವ ॥ ಹೊಗಲುಬಹ ದೇಕಾನನ
ದೊಳಹ । ಮೃಗಗಳಿಂದೇನ ಹಳೋಪತಿತಾ । ನಗಲಿದನೊ ಭೀತೆ ತಾ ನಿನ್ನುಂಗಿ
ತೊರಿಸಿ ನುತ ಹಲುಬಿದನು ... ... ॥೧೫॥

ಬಡವರುದರದೊಳುದಿಸಿ ಸುಖಿಪನು । ಕಡೆಯು ಜೋಲ್ಲದೆ ಬಂದು ನೀ
ನೀ । ಪ್ರೌಢನಿಪತಿಯಾದರವಲಿ ಮಿಗೆ ಜನಿಸುವರೆ ಯಿಳೆ ತಾಯೆ ॥ ಗಿಡಮುಗಿ
ಕಾರಣ್ಯದಲಿಹನು । ವಿಡಿದು ಸೈರಿಪುದೆಂತು ಮುಗಳೆ । ಸುಡು ಕನು ವಸಿದನೆಂದು
ಮರುಗಿ ವಳವಳ ನಿಜಜನನಿ ... ... ॥೧೬॥

ಸತಿಪತಿಗಳೀಪರಿಯ ಶೋಕೋ । ನ್ನತಿಯ ಸೈರಿಸಲಾರದೆ ಮಾ ।
ರುತನಸಖನೆಡೆ ಳು ಪ್ರೊಗುವೆವೆಂದು ರಮಣಿಸಿ ನಡೆತರಲು ॥ ಕ್ಷಿತಿಪ ಕೇಳಂತ ಪರಾಭ

ರುತಿರೆ । ಮತಿಯುತನೆಚಿಂತೆಯನುಬಿಡುಪತಿ । ವ್ರತೆಗಹಾನಿಯೆಸುಖದ್ಭೊ
ಳಹಳೆಂದಮನಭಿ ೀವಚನ ... ... ॥೧೭॥

ಎಂದವಾಕ್ಯವಕೇಳಭೂಸುರ । ವೃಂದದಲಿಮುನಿಯೊರ್ವನುಡಿ
ದನು । ಸಂದಪುರವಾನಂದಜೋತ್ಪನ್ನಯನವಾಕ್ಯವಿದು ॥ ಇಂದುಮುಖಿದ
ಮಯಂತಿನಳನೃಪ । ರೆಂದಿಗೂಸುಕ್ಷೇಮಿಗಳುನೀ । ನಿಂದುಕಳುಹಿಸಿಚರರ
ಭೇದಿಸಲೆಂದನಾಮುನಿಪ ... ... ॥೧೮॥

ಎಸಲುಮುನಿಪತಿಮಾತಿನಲಿಯರ । ಸುತೆಗೆಬಂದುದಿಶಾಲಚಿಂತೆಯು
ಮನದೊಳರಿಯಿಸನಿಳದನಸ್ತ್ರೀಬುದ್ಧಿಗೆವಿಸಯದಲಿ ॥ ಜನಪಸ್ವಾರ್ತಿ ್ರಯಲಿ
ನಿವಾರ್ತಿ । ಗನೆಯನುಳದಿರೆಪ್ರೂರ್ಣಶ್ಯೆಲವಿ । ದಿನಪತಲೆದೋರಿದನುಹರದುದು
ಅದನಿಯಾತ್ಸಣಕೆ ... ... ॥೧೯॥

ಅರಸಕರಸಿದನಾಪ್ತರಸುಘೂ । ಸುರರಿಗೆಂದನುನೀವ್ರುಳರುಣದಿ ।
ಧರೆಯೊಳೆಲ್ಲಿಹಳನ್ನಸುತೆ ದಮಯಂತಿನಳನೃಪರ ॥ ಅರಿಕೆಕಾಂಬುದುಕಂಡು
ಕರತಂ । ದರಿಗೆಕೊಡುವೆನುಧರೆಯೊಳರ್ಧವ ನಿರತವೆಂದುಪಚರಿಸಿಕಳುಹಿ
ದನೀಮನೃಪನವರ ... ... ॥೨೦॥

ಹರಿದರುಸಾಳುಗಳುಪಶ್ಚಿಮ । ಉತ್ತರದಕ್ಷಿಣಪೂರ್ವವೃತ್ತ್ರ । ಕು
ರುನರೇಂದ್ರರಾಷ್ಟ್ರಪರಿಯಂತವನಿಪಾಲಕರ ॥ ಪುರಗಳಲಿನವವೀಧಿಗಳತ ।
ದ್ವಿರಿಗಳಲಿನಾನಾದಿಗಂತದೊ । ಳರಸಿಕಾಣದೆಮುಂದೆನಡದರುಹಲವುದಿವಸ
ದಲಿ ... ... ॥೨೧॥

ಪುರವಳಯವೀಧಿಗಳಮಧ್ಯದಿ । ನೆರದಸಜ್ಜನಲಿಮಾರ್ಗದಲಿಸಂ ।
ಚರಿಸುವವರನುಕಂಡುಕೇಳುತಬಂದರಲ್ಲಲ್ಲಿ ॥ ಇಕವಕಾಣದೆಬಳಲಿಚಿಂತಿಸಿ ।
ಮರುಗುತವನೀಸುರರುಶೋಧಿಸು । ತಿರಲುಮೂವರು ಚೇದಿಪೊಕ್ಕರುಚೈದ್ಯನಗ
ರಿಯನು ... ... ॥೨೨॥

ಅಲ್ಲಿವಾರ್ತೆಯಕೇಳದರುಭೂ । ವಲ್ಲಭನಸತ್ರಸಮಯವೆಂದವ ।
ರಲ್ಲಿಗಮಿಸಲುಕಂಡರುಮೂವರುಕೂಡುತವರೆಡನೆ ॥ ನಿಲ್ಲದೈದಿದರರಮನೆಗೆತವಾ
ಗಲ್ಲಿದಕ್ಷಿಣೆತೃಪ್ತಿಭೋಜನ । ವೆಲ್ಲಮುಗಿಲಹುಡೆನುತ್ತಹೊಕ್ಕರುಯಜ್ಞಮಂ
ಟಪವ ... ... ... ॥೨೩॥

ಜನರನವನೀಸುರರುಮಂತ್ರದಿ । ಅನಿಲರನುನಾಂದಿಸಲುನೃಪ ।
ತನುಜೆಯಾದಸುನೀತೆಯಳದಮಯಂತಿಭುವಿಸುತ ॥ ವನಿತೆಯಿರೆಕಂಡನು


ಪರಾಮರ್ಶನ ಗ್ರಂಥ

ಸುದೇವನು । ಮನದೊಳನುಮಾನಿಸಿದನೀಸಾ । ನಿನಿಪುಹಾಸೆತಿಯೆನುತ
ವಿಸ್ಮಯಗೊಂಡಮನದೊಳಗೆ ... ... ॥೨೪॥

ಮುಗಿಲುಮುಸುಕಿದಚಂದ್ರಬಿಂಬವೊ । ಪಗಲೊಳೆಸೆವಸುದೀಪ
ಕಾಂತಿಯೊ । ಹೊಗೆಯೊಳೆಸಗಿದಚಿತ್ರಪ್ರತಿಮೆಯೊಸೇಳಲೇನದನ ॥ ಉಗಿ
ದುಬಿಸುಟವಿಭೂಷಣದವ್ವೊ । ಲಿಗೆಯತೇರೆಯಮಲಿನತನುಕಳೆ । ತೆಗೆದ
ಕೈಗಲ್ಲದಲಿನಿಂದಿರೆಕಂಡನಾಸತಿಯ ... ... ॥೨೫॥

ಇದುಪತಿವ್ರತಧರ್ಮವಹುದೀ । ಸುದತಿತೊರದಿಹಳೆಲ್ಲವನುನೃ
ಪ । ವಧುವಕಾಣಿಸಿಕೊಂಬೆನೆಂದುಸುದೇವನಡೆತಂದು ॥ ಹದನಿದೇಸೌತ್ರೇಯೆ
ನಿಸ್ಮಯ । ವದನಕಮಲತ್ವಬಾಡಿಕಡುಬೇ । ದವಲಿನೀನಿಹುದೇನುಕಾರಣ
ವೆನುತಲಿಂತೆಂದ ... ... ॥೨೬॥

ಇಂದುವದನೆವಿದರ್ಭಪುತ್ರ್ಯಣಿ । ದಿಂದಬಂದೆನುತಾಯೆಭೂಸುರ ।
ವೆಂದ್ಯನೆನ್ನಭಿಧಾನಕೇಳುಸುದೇವನೆಂಬುವನು ॥ ಇಂದುನಿಮ್ಮನುನೋಡಿಕ
ಳುಹಿದ । ತಂದೆಭೀಮನೃಪಾಲನಾತನ । ನಂದನಗೆತಾಸಖನುಚಿತ್ರಸೇನ್ನ
ಬನ್ನಪವ ... ... ॥೨೭॥

ಕ್ಷಿತಿಪಭೀಮನೃಪಾಲನಾತನ । ಸತಿಸುತರುಬಾಂಧವಸಹೋದರ ।
ರತಿಶಯರುನಿಮ್ಮಯಕುಮಾರರುಕುಶಲರಿಂದಿನಲಿ ॥ ಕ್ಷಿತಿಯನಗಲುತನಳನೃಪ
ತನಿಜ । ಸತಿಸಹಿತವನಕೈದನೆನೆಕೇ । ಳುತಲಿನಿಮ್ಮವರೆಲ್ಲಶೋಕಾಬ್ಧಿಯ
ಲಿಮುಳುಗಿಹರು ... ... ॥೨೮॥

ಘೋರತರಶೋಕವನುಸೈರಿಸ । ಲಾರದೇಸತಿಪತಿಗಳಬ್ಬರು ।
ನೋರುತಿಹಕಂಬನಿಗಳಲಿಕರದೆಮ್ಮಕಳುಹಿದರು ॥ ಧಾರುಣಿಯನರಸುತ್ತಬಂ
ದೆವು । ವಾರಿಜಾನನೆನಿನ್ನಕಂಡೆವು । ಸೇರಿತೆಮ್ಮಯಪುಣ್ಯವೆನುತಸುದೇವ
ಕೈಮುಗಿದ ... ... ॥೨೯॥

ವನಿತೆಕೇಳುತಶೋಕದಲಿನೆನ । ನೆನದುಬಾಧಕುಲತಿಲಕಬಾರೆಂ ।
ದೆನುತಮನ್ನಿಸಿತನ್ನವರಚಡಿಗಡಿಗಬೆರಗೊಳಲು ॥ ವನಿತೆನೋಡಿವಳಾಸುನೀ
ತೆಯು । ಜನನಿಗರುಹಲುಬಂದಳಾ । ಪ್ರಿಯಸನನೀವಾರೆನಲುನುಡಿದನುಬಂ
ದಸುಗತಿಯ ... ... ॥೩೦॥

ಕೇಳುತಾಯೆವಿದರ್ಭಪತಿಭೂ । ಪಾಲನಾತ್ಮಜೆಪತಿಯೊಡನೆತ ।
ನ್ನಾಲಯವತಾನುಳಿದುವನಕೈದಿದರುಯೆಂದೆನಲು ॥ ತಾಳಲಾರದೆನೋಡಿಕರ

Digitized by ROJA MUTHIAH RESEARCH LIBRARY

ತರ । ಹೇಳಿಕಳುಹಲು ಬಂದೆನಿಲ್ಲಿಗೆ । ಬಾಲೆದಮಯಂತಿಯನು ಕಂಡೆನೆನುತ್ತ
ಕೈಮುಗಿದ ... ... ॥೩೦॥

ಕೇಳಿ ಶಿವಶಿವಯೆನುತ ಶೋಕವ । ತಾಳಿತೆಗದಪ್ಪಿದಳು ಮಗಳವಿ
ಟಾ ಳಸಿತೆ ಸಿರಿಗಾ ಜಸಂಪದವೀ ಮಹಾ ವ್ಯಥೆಯ ॥ ಬಾಳದಲಿ ವಿಧಿ ಬರವನೇ ಜನ
ಪಾಲನಳ ನೃಪನೆತ್ತ ಸರಿದನೊ । ಕಾಲಗತಿಯಿಂತಾದುದೇ ಹಾ ಯೆನುತ ಮರುಗಿ
ದಳು ... ... ॥೩೧॥

ಬಾಲೆ ಬಿಡು ಶೋಕವನು ಭೀಮನೃ । ಪಾಲನರಸಿಗೆ ತಂಗಿ ತಾತ । ಸ್ನಾ
ಲಯದಿ ಕಡು ನೊಂದೆ ಮಗಳೇ ಸಾಕು ನಮ್ಮೊಡನೆ ॥ ಪೇಳದಿಹರೆ ಸುನೀತೆ ಗೆಯು
ಸಮ ಪಾಳನಿಂ ನೆಮಗೆಂದು ಹರುಷವ । ತಾಳಿ ಸಕ್ಕೃಸಿದಳು ದಮಯಂ
ತಿಯನು ತಾ ಬಿಡದೆ ... ... ॥೩೨॥

ಕಿರಿಯ ತಂದೆ ಸುಬಾಹು ಮರುಗಿದ । ಪರಕುವರಿ ದಮಯಂತಿಗೆಂದ
ನು । ಪುರುಷನಿಲ್ಲದ ಚಿಂತೆಯಿಂದೆಲ್ಲವನು ನೀ ತೋರದು ॥ ಕರಗಿ ಕಂಡಿದೆ ಮಗ
ಳೆ ತಾನಿಂ । ತರಿದು ದಿಲ್ಲ ಕಟಕಟ ಪುರುಷನ । ಕರಸಿ ಕೊಡಿಸುವ ನಿದಕೆ ಚಿಂತಿ
ಸಬೇಡ ನೀನೆಂದ ... ... ॥೩೪॥

ತರಳೆಯನು ಸಂತೈಸಿ ಕಣ್ಣಿನೊ । ಳೊರವ ಕಂಬನಿಗಳನು ತರಗಿ ನೊ ।
ಳೊರಸಿದ ದಮಯಂತಿಯ ಳವನ್ನಿಸಿ ಬಂದ ನೋಗಕೆ ॥ ಕರಸಿದನು ಭೂಸುರ
ಸುದೇವನ । ನಿರುಪಮ ಮಣಿ ಭೂಷಣಗಳಿಂದುವ । ಚರಿಸಿ ಕಳುಹಲು ಬಂದ ಭೀ
ಮನೃಪಾಲನೋಲಗಕೆ ... ... ॥೩೫॥

ಅರಸ ಕೇಳು ವಿದರ್ಭ ಪುರಪತಿ । ಮರುಗುತಿರಲಾ ಸಮಯದಲಿ ಭೂ
ಸುರ ಸುದೇವನು ಬಂದು ಕೈ ಮುಗಿದೆಂದನೀ ಹದನ ॥ ತರುಣಿ ದಮಯಂತಿಯನು
ಕಂಡೆನು । ಹರುಷ ಮಿಗಿಲಾ ಚೈದ್ಯ ಪುರದಲಿ । ಪರಜನಸಿ ಚಿಕ್ಕಮ್ಮನಲ್ಲಿ ಹ
ಳೆಂದನಾ ವಿಬುಧ ... ... ॥೩೬॥

ಕಂಡು ಮಾತಾಡಿದೆನು ಸತಿಯಳ । ಮಂಡೆ ಮಾಸಿದ ಮಲಿನ ವಸನದ ।
ಗಂಡನಗಲಿದ ಚಿಂತೆಯಲಿ ಮುಖ ಬಾಡಿದೇಹವನು ॥ ದಂಡಿಸಿದಳನ್ನದಲಿ ಮನ
ಮುಂ । ಕೊಂಡು ದಾ ಸತಿ ಗಿನೆಯನನು ಸೆರೆ । ಕಂಡು ಹೇಳುವರಾರನುತ ಮರು
ಗುವಳು ಮನದೊಳಗೆ ... ... ॥೩೭॥

ಕೇಳುತ ರಸನ ವದನ ಕಾಂತಿವಿ । ಶಾಲವಾದುದು ಮನದಿ ಹರುಷವ ।
ತಾಳಿ ಹೇಳಿಂಪ್ರುಳಯಾಗಿ ಭೀಮನೃಪಾಲ ಕರಸಿದನು ॥ ಬಾಲೆಯ ರತ್ನಾಪ್ತ ಸ



9697

ಚಿವರ । ಮೇಳದಲಿ ನಿಜ ಸುತೆಯ ಕರತರ । ಹೇಳಿ ರತ್ನಾಭರಣಗಳನಿತ್ತವರ
ಕಳುಹಿದನು ... 9697 ... ॥೩೮॥

ಬಂದರಲ್ಲಿಗೆ ಚೈದ್ಯನೃಪತಿಯ । ನಂದು ಕಾಣಿಸಿಕೊಂಡಡವರನು ।
ಮಂಪಿರದ ಸುಕ್ಷೇಮ ಕುಶಲವ ಕೇಳಿ ಪೇಳಿದರು ॥ ಇಂದುಮುಖಿ ದಮಯಂತಿಯನು
ಕಳು । ಹೆಂದು ಭೀಮನೃಪಾಲ ಹರುಷದೊ । ಳಂದು ಮನಿಸುಗುಡು ಗೆರೆಗಳನು
ಕಳುಹಿದನು ಕೇಳೆಂದ ... ... ॥೩೯॥

ಅರಸ ಕೇಳು ಸುಬಾಹು ಭೂಪತಿ । ಕರಸಿದನು ಮಂತ್ರಿಗಳ ಭೀಮ
ನ । ಪುರಕೆ ಪಯಣವ ಮಾಡಿದನು ದಮಯಂತಿಯನು ಕರೆದು ॥ ತರುಣಿ ನೀನ
ಮ್ಮಲ್ಲಿ ತಿಂಗಳು । ಹೊರದೆ ದೇಹವ ಕಷ್ಟದಲಿ ಯಂ । ದುರು ತೇದಪೆ ಪ್ರೇಮದಲಿ
ಕೊಟ್ಟನು ಸಕಲ ಭೂಷಣವ ... ... ॥೪೦॥

ತರಿಸಿದನು ದಂಡಿಗೆಯೊಳಗೆ ಕು । ಳ್ಳಿರಿಸಿ ಸತಿಯ ರಗಳದಲಿ ಮಂ ।
ದಿರವ ಹೊರವಟ ರಸನೇರಿದ ಗಜವ ಕಂದರವ ॥ ಮೆರೆವ ನಾನಾ ವಾದ್ಯರಭಸದಿ ।
ಕರಿತುರಗ ಕಾಲಾಳು ಸಂದಣಿ । ಯುರವಣಿಸೆ ನಡೆತಂದು ಹೊಕ್ಕ ವಿದರ್ಭಪ
ಟ್ಟಣವ ... ... ॥೪೧॥

ದೂತರೈದಿ ಪರೊಸಗೆಯಲಿ ಜನ । ಜಾತನಲಿಯಲು ಬಂದು ಬೇಗದಿ ।
ಭೂತಳೇಂದ್ರಗೆ ಕೈಮುಗಿದು ದಮಯಂತಿ ಬಂದಳೆನೆ ॥ ಮಾತ ಕೇಳುತ ಯುದ್ಧ
ಬಲಸಂ । ಘಾತಲೈತಂದವರ ಕಂಡತಿ । ಪ್ರೀತಿಯಿಂ ತಕ್ಕೈಸಿ ಕರತಂದನು
ನಿಜಾಲಯಕೆ ... ... ॥೪೨॥

ಅವನಿಪತಿ ಕೇಳಾ ಪುರದೊಳು । ತ್ಸವವನದನೇನೆಂಬೆನಂದಿನ । ದಿವ
ಸದೊಳಗರಮನೆಯೊಳಾ ದಮಯಂತಿಯನು ಜನನಿ ॥ ತವಕದಿಂ ಬಿಗಿಯಪ್ಪಿದ
ಳು ಬಳಿಕಂ । ಧವರು ಸಂತೋಷಿಸಿದರನಿಬರು । ಯುವತಿಯರು ನಿಜತನಯರಾ
ಲಿಂಗಿಸಿದರಂಗನೆಯ ... ... ॥೪೩॥

ಮಗನನೋಡಿ ಪಳುವ ಸೇನನ । ತೆಗದು ತಕ್ಕೈಸಿದಳು ಕರದಳು ।
ಮುಗಳ ಚಂದ್ರಾಸ್ಯಳನು ತೊಡೆಯೊಳಗಿಟ್ಟು ಮಮತೆಯಲಿ ॥ ಮೊಗವನೀಕ್ಷಿ
ಸಿ ಮೊಲೆಗಳಲಿ ತೊರ ॥ ದೆಗುವ ಹಾಲಿನ ಜನನಿ ಮಿಗೆ ನೀ ॥ ರೊಗುವ ಕಣ್ಣೀ
ರಿನಲಿ ಸಂತೈಸಿದಳು ನಿಜಸುತರ ... ... ॥೪೪॥

ಕುತುಪಿತನೊಲುಮೆಯಲಿ ಧರಣೀ ॥ ಕಾಂತ ಭೀಮನೃಪಾಲ ಬಾಂಧ
ವ ॥ ಸಂತತಿಯನಾದರಿಸಿ ಕಳುಹಿ ದನವರನು ಚಿತ್ರದಲಿ ॥ ಸಂತತವು ನಿಜಪತಿ

O, 33, 181 KA17 N M93
35

Digitized by ROJA MUTHIAH RESEARCH LIBRARY

ಯನಗಲಿದ | ಚಿಂತೆಯಲಿವನಗುಂದಿದಳುದಮ | ಯಂತಿಸೆನವೃತ್ತಿರ್ದಳಾವ
ರಪುರದಚೆನ್ನಿಗನ ... ... ||೪೫

ಅಂತು ಸಂಧಿ ೭ಕ್ಕೆ ಪದ ೩೪೫ಕ್ಕೆ ಮಂಗಳಮಸ್ತು.

---

## ಎಂಟನೆಯ ಸಂಧಿ.

ಸೂಚನೆ॥ ಸುರರುಮುಂಮುಖಿವೊಳಗೆಧರಣೀ |ಸುರನಲಿಯೆಮು ರಹರನಕರುಣದಿ | ತರುಣಿದಮಯಂತಿಯಳನೊಡಗೂಡಿದನುನಳನೃಪತಿ ||

ಪದ॥ ಕೇಳಧರ್ಮರಾಜೇಂದ್ರ ಧರ್ಮಜನೃ | ಪಾಲತಿಳಿವಮನುಳಾಲಂಗ ನೆ | ಧರೆಯಮುಸುಕಿದತುಂಡಿಯಮಾಸಿದವಸನಗಳನೋಡಿ ॥ ಕೇಳಿದಳುಪೂ ರ್ವೋತ್ತರವಭೂ | ಪಾಲನವನಿಯನುಳಿದುನಿನ್ನವ | ನಾಲಯದೊಳಂತಗ ಲಿದನುಹೇಳೆಂದಳುಜನನಿ ... ... ||೧||

ಕಪಟದಲಿರಾಜ್ಯವನುಪುಷ್ಕರ ॥ ನಪಹರಿಸಿದನುಜೂಜಿನಲಿನಳ | ನೃಪತಿಸೋತಾರಣ್ಯಕೈದಿದನೊಂಮುವಸ್ತ್ರದಲಿ ॥ ಗುಪಿತದಿಂಬರೆಮುಂದೆಪಕ್ಷಿ ಗ ॥ ಳುಪಮೆಯಲಿಕೊಂಡೊಯ್ದುದೊಲ್ಲಿಯು | ಕೃಪಣತನದಲಿತನ್ನಶೀರೆ ಯೊಳೊಯ್ದನರ್ಧವನು ... ... ||೨||

ಮರವುಮಲಗಿದರಾತ್ರಿಯಲಿಯು | ಚ್ಚರಿಸದೇನೃಪತೆರಳಿದನು ಕಾ | ತರಿಸಿಕಂಬನಿಯೊಳಗೆಬಂದೆನುಚೈದ್ಯನಗರಿಯಲಿ ॥ ತರುಣಿಚಿಕ್ಕಮ್ಮ ನಲಿತಿಂಗಳು | ಹೊರದೆನೀದೇಹವನುಯಿಲ್ಲಿಗೆ | ಕರಸಿಪಿರಿಣೀವೆನುತ ಕಂ ಬನಿಮಂಬಿದಳುತರಳೆ ... ... ||೩||

ಏನನೆಂಬೆನುಕನ್ನೆಪುಣ್ಯದ | ಹಾನಿಯನುಯಲೆತಾಯೆಲೋಕದ | ಮಾನಿನಿಯರಾರುಂಟುಯೆನ್ನಪೊಲೊತ್ತಳಲಿಬಳಲಿದರು ॥ ದಾನವಾಮರರೊ ಳಗೆಕಾಣೆಸ | ಮಾನವೀನಳನೃಪನಗೆಯಿನ್ನಿದ | ಕೇನಮಾಡುವೆನೆನುತಕಂಬನಿ ದುಂಬಿದಳುತರಳೆ ... ... ||೪||

ಕ್ಷಿತಿಯೊಳಿಲ್ಲಿಹನೋನೃಪತಿವರ | ಸತಿಯರಿಗೆಮನಸೋತಸೋ ತಪ | ವ್ರತವಕೈಗೊಂಡಹನೊಯಸುರರಬಲೆಗಶಿಲುಕಿದನೊ ॥ ಪಿತಳಕಿಳದನೋ ಮೇಣುಯಮರಾ | ವತಿಗೆಂಡದನೊಕೊರಮನಳಭೂ | ಪತಿಯಕಾಣೆನು ಯನಗೆಗತಿಯೇನೆಂದಳಂಮಮುಖಿ ... ... ||೫||

ಪತಿವಿಹೀನೆಗೆಸಲುಹುದೇಸು | ವ್ರತಸುಭೋಜನಸೌಖ್ಯಸುಖಸ|



ದ್ಗತಿಗಳುಪೇತಾಯೆಭಾವಿಸಿನೋಡ ಚಿತ್ತದಲಿ ॥ ಸತಿಯರಿಗೆಪತಿದೈವವೆಂಬು ದು | ಶ್ರುತಿವಚನವಾಡುವದುತನಗಾ | ಪತಿಯನಗಲಿದಬಳಿಕಗತಿಯಿಲ್ಲೆಂದ ಳಂಮಮುಖಿ ... ... ||೬||

ಧರೆಯೊಳಿಲ್ಲಿಹನೆನ್ನೀವಿಚಾರಿಸಿ | ಕರಸಿಕೊಡುಯೆಲೆತಾಯೆಯನ್ನ ಯ | ಪುರುಷನಿಲ್ಲದಬಳಿಕಬಿಡುವೆನುತನುವನೆಂದೆನಲು ॥ ಮರುಗಿದಳುಮ ಗಳೆಂದವಮಾತಿಗೆ | ಕರದುಕಂಬನಿತೊಡದುಕನ್ನೆಯು | ಪುರುಷನೊಡನಿಂತೆನಲು ಭೀಮನೃಪಾಲಚಿಂತಿಸಿದ ... ... ||೭||

ಅರಸಕೇಳುವಿದರ್ಭಪುರಪತಿ | ಕರಸಿದನುಭೂಸುರರನವರಿಗೆ | ಪ ರಮವಸ್ತ್ರವನಿತ್ತುಕಳುಹಿದನಿಷಧಪತಿಯಿರವ ॥ ಶರಧಿಮೇರೆಯೊಳಿಲ್ಲಶೋ ಧಿಸಿ | ಕರೆತುತಾರೆನುವವನುಬರುತಿರೆ | ಕರಸಿದಳುದಮಯಂತಿಯವರೊಡನೆಂ ದಳೀಮಾತ ... ... ||೮||

ನಳನೃಪತಿನಿಜರಾಜತೇಜವ | ನುಳಿದುತಾಮತ್ರಿರೂಪಧರಿಸಿಹ | ನಿಳೆಯೊಳಗ್ಗದಸಭೆಯೊಳಗೆನೀನೆಂಬುದೀನುಡಿಯು ॥ ಹಳುವದಲಿಸತಿಯುಟ್ಟ ವಸನವ | ಸೆಳೆಯುತರ್ಧವಕೊಂಡುನಾರಿಯ | ತೊಳದಹೋದವನಾರೆಂಬರೆನೆಯು ತ್ತರವಹೇಳುವನು ... ... ||೯||

ಆನುಡಿಯುಬಂದೆನಗೆನೀವನು | ಮಾನವಿಲ್ಲದೆಪೇಳೆನುತಸ | ನ್ಮಾನವಲಿಪೊಳ್ಕಳ್ಳಗೆನೆ ತೆರಳಿದರುಬಳಿಕ ॥ ಮಾನವೇಂದ್ರರ ಸಭೆಯನೋ ಡಿರಿ | ದಾನಿಸುತ್ತಸ್ಥಾನಾನಿಗಂತ | ಸ್ಥಾನದಲಿನಗರಗಳಶೋಧಿಸುತೈದಿದರು ಪಥವ ... ... ... ||೧೦||

ಇಳೆಯಮರರಲ್ಲಲ್ಲಿಗಿರಿವನ | ಗಳನಿರೀಕ್ಷಿಸಿಕೇರಿಯುಪಗಳ | ನಿ ಳಯಗಳನೋಡುತ್ತ ಕಾನನಕಳಗಳಂಜೀಗದಲಿ ॥ ಜಲಧಿಮೇರೆಯ ಮಧ್ಯದಲಿ ಭೂ | ವಳಯವೆಲ್ಲವಶೋಧಿಸುತತನು | ಬಳಲಿಕೆಯಭಾವಿಸದೆನಡದರುಮುಂ ದೆಪಥವಿಡಿದು ... ... ||೧೧||

ಮುಂದೆಬರುತಿರೆಕಂಡರೊಬ್ಬನ | ನಿಂದುಯಾಚಕಭೂಸುರನಯೆ | ಲ್ಲಿಂದಬಂದಿರಿಯೆನಲುತೋರ್ವ್ಯನಗರದಿಂದೆನಲು ॥ ಕಂಡದಲ್ಲಿವಿಶೇಷವೇನುಂ | ಟೆಂದೆನಲುಪೇಳಿದಯಾಗವನು | ದಂಡವಿಪ್ರನ ಮಾತಿನಿಂದೈದಿದರಯೋಧ್ಯೆ ಯನು ... ... ||೧೨||

ಮರುದಿವಸಯುತಪರ್ಣಮುನಿಮು | ಖ್ಯರುಸಹಿತಪ್ರೋಲಗದೊ

ಳರೆಕಂ । ಧರುವುಮಹಾಸಭೆಯೊಳಗೆಹೊಕ್ಕರುನಿಂದುಕೈಸನ್ನೆಗಳಿಂ ॥ ಹಿರಿಯುವರು
ಸಾಮಾಜಿಕರುವ । ಚ್ಚರಿಸುತಿದನೀವ್ಕೇಳಿರೆನ್ನುತ । ಪ್ರರುತರವಗಂಭೀರ
ವಾಕ್ಯದೊಳೆಂದನಾವಿಪ್ರ ... ... ॥೧೩॥

ಹಳುವಪಲಿಬಂವಲಸಿಪ್ಪಳಾದ । ಕುಲಸತಿಯುವಸನದೊಳಗರ್ಧವ ।
ಕಳವುಕೊಂಡೋಯ್ದಗಲಿಹೋದವರಾಂಟೆರಾತ್ರಿಯಲಿ ॥ ಇಳೆಯುಬಾಳ್ಪವನ್ನ
ವರಸತ್ಯದ । ಬಳಕೆಗಿದುಶಿಕ್ಷೆಸಲ್ಲವೆಚೆಪ್ಪನ । ವಳುಕಿನಸುನಗೆಯಿಂದ್ಧನುಡಿದನು
ಪ್ರೊಲಿವುಬಾಹುಕನು ... ... ॥೧೪॥

ಕ್ಷಿತಿಯುವುರರೆಲ್ಲಿಂವಬಂದಿರಿ । ಸತಿಯುನಗಲಿದಬಾಹಿರನ್ಸಿಜ ।
ಪತಿಯೆಸೋಕಂತಿರಲಿಬಿಡುಯುತುಪರ್ಣನೋಲಗದಿ ॥ ಅತಿಶಯದನುಡಿಕೇಳ್ದವಕ
ಟಾ । ಸತಿಗೆವಂಚನೆಯಿಲ್ಲವದುನಿಜ । ಪತಿಗೆಕೊರತೆಯುದೆಂದುಸೂಚಿಸಿನುಡಿ
ದವಿಪ್ರಗೆ ... ... ॥೧೫॥

ಈತನಾರುಕುರೂಪಿನೈಷಧ । ನೀತನೀಸಭೆಯೊಳಗೆತಾನೀ ।
ಮಾತನಾಡಲವೇಕೆಸಂಶಯವೆನುತಮನವೊಳಗೆ ॥ ಖ್ಯಾತರಾಲೋಚಿಸುತಬಂ
ದರು । ಭೂತಳಾಧಿಪಭೀಮನೃಪನಿಂ । ಜಾತೆಯನುಕಂಡರಿಗಿಕ್ಕೈವುಗಿದೆಂದ
ರೀಹದನ ... ... ॥೧೬॥

ಡೇಸಿಯುರಾಚಿತ್ರ್ಯಸಿದಿರೆಭುವ । ನಾವಳಿಗಳೆಲ್ಲವನುನೋಡುತ ।
ನಾವುಮುಂದೈತರಲುಕಂಡೆವಯೋಧ್ಯನಗರಿಯನು ॥ ಭೂವರನುಋತುಪರ್ಣ
ರಾಯನ । ಸೇವೆಯೊಳಗೆಕುರೂಪಿಯೋರ್ವನು । ಜೀವಸಖನಾತಂಗೆಬಾಹು
ಕನೆಂಬನಾಮದಲಿ ... ... ॥೧೭॥

ತುರಗನಿಕರದಶಿಕ್ಷೆಯಲಿಮಂ । ದಿರದಬಾಣಸಿತನದಕೇಸರಿ ।
ನಿನಿರ್ಘೃಣನೆಂದೆನಿಸಿಕೊಂಡಿಹ ನೃಪನಸಭೆಯೊಳಗೆ ॥ ಪರುಷವಿಸಿಸೀವೆಂದ
ಮಾತನು । ವರಸಭಾಮಧ್ಯದಲಿನುಡಿಯಲು । ಯಿರದೆತಾನೀಮಾತನೆಂದನು
ನಗುತಬಾಹುಕನು ... ... ॥೧೮॥

ಸತಿಗೆವಂಚನೆಗೈದಪತಿತಾ । ಮತಿವಿಕಳೆಯಂತಿರಲಿಭೂಸುರ ।
ಪತಿಯೆಕೇಳಾಸತಿಗೆಭಂಗವೆಪತಿಗೆಕೊರತೆಕಣ ॥ ಪತಿವ್ರತವನಾಚರಿಸುವಳು
ತಾ । ಪತಿಯಗುಣದೋಷಗಳನೆಣಿಸಳೆ । ಗತಿಗೆಕಾರಣಸತ್ಯವೇತನಗೆಂದನವ
ನಗುತ ... ... ॥೧೯॥

ಪತಿಯುತಪ್ಪೆಣಿಸುವಳುತಾಪತಿ । ವ್ರತೆಯೆಧರಣಿಯಪಾಲಿಸುವಜ



ನ । ಪತಿಯನಿಂದಿಸುವಾತಸೇವಕನೇನಿಧಾನಿಸಲು ॥ ಪಿತನವಾಕ್ಯವನತಿಗಳೆವ
ನವ । ಸುತನೆಗುರುವಿಂಗೆರಡೆಣಿಸುತಿಹ । ಮತಿವಿಕಳನವಶಿಷ್ಯನೇಕೇಳೆಂದ
ಬಾಹುಕನು ... ... ॥೨೦॥

ಎನಲುತಲೆದೂಗಿದಳುಯಿಮಾ । ತಿನಲಿಸಂಶಯವಿಲ್ಲಬಾರೆಂ । ದೆ
ನುತಲಂಬನಿದುಂಬಿದಳುದಮಯಂತಿಮನದೊಳಗೆ ॥ ಜನಯುನಹುದಾತನೃಪರಿ
ಕ್ಷೆಗೆ । ನೆನೆಯಬೇಕೊಂದನುವನೆಂದಾ । ವನಿತೆತಂದೆಯನುಜ್ಞೆಯಲಿಕರೆದ
ಳುಸುದೇವನನು ... ... ॥೨೧॥

ಇಳೆಯುಮರಬಾರೆಂದುವಿವರವ । ತಿಳುಹಿಪಯಣವಮಾಡಿಕಳುಹಿದ
ಲು । ಹೆಳಲಹೊರಹೆಂಬನುಸುದೇವನುಹಲವುಯೋಜನವ ॥ ಕಳೆದುಬ
ರುತಿರೆಮುಂದೆಕಂಡನು । ಲಲಿತರತ್ನಪ್ರಭೆಯಗೋಪುರ । ಹೊಳೆವಯೋ
ಧ್ಯಾಪುರವನೀಕ್ಷಿಸಿಹೊಕ್ಕನರಮನೆಯ ... ॥೨೨॥

ಇಟ್ಟಫಣೆಯೊಳಗಸೆವಮುಟ್ಟಿಯ । ತೊಟ್ಟಹೊಸಯಜ್ಞೋಪವೀ
ತವ । ಕಟ್ಟಿಮುರಿಕಿದಗಂಟಕಕ್ಷದವೆರಳದರ್ಭೆಗಳ ॥ ಉಟ್ಟಬಾತರುಬಳಲುಗ
ಚ್ಚೆಯು । ನಟ್ಟಹಾಸದನಗೆಯಜನಗಳ । ನಿಟ್ಟಿಸುತಪರಮೋಷ್ಮಿಯಂದದಿಬಂ
ದನೋಲಗಕೆ ... ... ॥೨೩॥

ಆವನೀವೆಲ್ಲಿಗವಬಂದಿರಿ । ದೂರದೇಶದವಾಹಿಮರಿಳೆಯೊಳು । ಕಾ
ರಣವದೇನಿರುವುದಲ್ಲಿವಿಶೇಷವೇನುಂಟು ॥ ಭೂರಮಣಕೇಳವನಿಯಲಿಸಂ । ಚಾ
ರಿಸುತಬಂದೆವುವಿದರ್ಭಕೆ । ಭೂರಿನೃಪರೈತರುತಲಿರುವರುಭಟರಗಡಣದಲಿ ॥
ದೇಶದೇಶದಯಾಚಕರುಧರ । ಣೀಶರುನ್ನತತುರಗಗಜರಥ । ಭೂ
ಸುರರುಮಂತ್ರಿಗಳುದೈವಜ್ಞರುಸುಗಾಯಕರು ॥ ಭಾಸುರದತೇಜದಲಿಜ
ನಪಂ । ತೋಷವಲಿವಡೆತರುತಲಿವೆಹರಿ । ವಾಸುದೇವನೆಬಲ್ಲದಮಯಂತಿಯ
ಸ್ವಯಂವರವ ... ... ॥೨೪॥

ಶಯನವಲಿಮಲಗಿರ್ದನಳನುನಿ । ರ್ದಯದಿನಳನೃಪನಗಲಿಪೋಗಲು ।
ನಯವಿಹೀನಂಗಾಗಿರಚಿಸಿದರೀಸ್ವಯಂವರವ ॥ ಪಯಣವಿಮಗುಂಟೀಗಲೆನೆ
ನೃಪ । ಬಯಸಿಹೆಣ್ಣಿನವೊಲಿದಲಿವಾ । ಜಿಯವರೂಥಕೆಹೂಡಹೇಳಿದಕರ
ಸಿಬಾಹುಕನ ... ... ॥೨೫॥

ಹೈಹಸಾಧವೆನುತ್ತವಂದಿಸಿ । ಬಾಹುಕನುಮುಂದಿರಕೆಬಂದುವಿ ।
ವಾಹವುಂಟೀಮರಳಿದಮಯಂತಿಗೆಮಹಾದೇವ ॥ ಈಹದನಲಾರಿಂದಲಾದುದೊ ।

Digitized by ROJA MUTHIAH RESEARCH LIBRARY

ದೊರೆಹಿದಮಯಂತಿಯು ಳೋಯಿದುಪಂ । ದೇಹವಾಗಿ ದೆಂದನು ಚಿಂತಿಸಿ ಬಂ
ದನರಮನೆಗೆ ... ... ॥೨೮॥

ಲಾಯ ನೆಳೆಗುತ್ತ ಪದತೇಜಿಯು । ನಾಯ್ದು ಹೂಡಿದ ರಥಕೆ ಸೇರಿಸಿ
ವಾಯುವೇಗವ ತೋರನಿಲಿಪ ದಲಂದು ನೃಪನೆಡೆಗೆ ॥ ರಾಯ ನೇರಲು ಕರಿತುರಗ ರಥ ।
ವಾಯುದಳ ಸಂದಣಿಸಿ ಪಡು ನಲ । ಬಾಯ ಜಿಡೆ ಹೊರವಂಟ ನೃಪ ಘನ ವಾದ್ಯರಭ
ಸದಲಿ ... ... ॥೨೯॥

ಜನಪ ಸೆಂದನು ಬಾಹುಕೆಗೆ ಪಾ । ನಿನಿಯನೀಕ್ಷಿಸಬೇಕಾನಿಲ್ಲಿದು ।
ಮಾನವಿಬೆಳಂದೇ ದಿನಕೆ ನಡಸು ವಿದರ್ಭಪುರವರಕೆ ॥ ಎನಲು ನಕ್ಕನು ಪಾಪದೊಳಗ
ತ । ನ್ನಿನಮುಳಿಗೆ ವಿಧಿಬರವ ನೇಶಾ । ಸನವ ಮೀರುವರಾರೆನುತ ಮಾರುಗಿದನು ನಳ
ನೃಪತಿ ... ... ॥೩೦॥

ಕರದವಾಘೆಯ ಸಡಿಲಬಿಡೆ ಪಾಂ । ಬರಿದು ಚುಂಬಿದವಳಿ ಗಡಿಗ ರಥ ।
ತುರಗ ಹಾಯ್ದು ದು ತೇರು ಮುಂದಕೆ ಪವನವೇಗದಲಿ ॥ ಭರದೊಳೈತರೆ ನೃಪನ
ಹಚ್ಚಡ । ಧರೆಗೆ ಬೀಳಲು ಸಾರಥಿಗೆಯು । ಚ್ಚರಿಸಿದನು ಋತುಪರ್ಣ ನಿದ ಕಿನ್ನೇ
ನುಹವನೆನುತ ... ... ॥೩೧॥

ಜೇಯ ಚಿತ್ತ ವೃಸು ರವಣಿಸಿನಿ । ದಾರ್ಯದಲಿ ರಥ ಹಿಂದೆವ್ರ ಳದುನ ।
ವಾಯುಗತಿಯಲಿ ಸಾಟಿ ಬಂದು ಮಹಲವ್ರಯೋಜನವು ॥ ಹೋಯಿತಾ ಮಾತೇಕೆ
ನಡೆಯನೆ । ರಾಯ ಮೆಚ್ಚಿದ ಸಾರಥಿಯೆಂಬಿರು । ದಾಯಕನು ನೀನೆಂದು ಕೊಂ
ಡಾಡಿದನು ಬಾಹುಕನ ... ... ॥೩೨॥

ಮುಂದೆ ಕಂಡನು ಬರುತಲಡವಿಯೊ । ಳೊಂದು ತಾರೆಯ ಮರನನದರೊ
ಳು । ಸಂದ ಫಲವರ್ಣಂಗಳೆಣಿಸದೆ ಸೂಕ್ಷ ಪೇಳೆನಲು ॥ ಅಂದೆನಗೆ ಮಾತಿದೋರ
ದವನಿಪ । ಕುಂದದವರನು ಪೇಳು ನೀನೆನ । ಗೆಂದಡಾ ಸಾರಥಿಗೆ ಲೆಕ್ಖವನರುಹಿ
ದನು ನೃಪತಿ ... ... ॥೩೩॥

ಇಳಿದು ರಥವನು ಬಂದು ವೃಕ್ಷದ । ಬಳಿಯ ನಿಂದಾ ಶಾಖೆಗಳಲಿಹ ।
ಫಲವದರ ವರ್ಣಂಗಳೆಣಿಸಿದ ಕೋಟಿ ಸಂಖ್ಯೆಯಲಿ ॥ ಒಲಿದು ಲೆಕ್ಕವ ಕಂಡು ತಾ ಮ
ನ । ವಲಿದು ನಳ ನೃಪ ಪುಷ್ಕರನ ತಾ । ಗೆಲುವ ಹದನಾಯ್ತೆನುತ ಬರೆ ಕಲಿ ಪುರು
ಷನಿಹಿರಾದ ... ... ॥೩೪॥

ಎಲೆ ನೃಪಾಲಕ ನಿನ್ನ ಸತ್ಯದ । ನೆಲೆಯನೀಕ್ಷಿಸಬೇಕೆನುತ ಬಂ । ದ
ಲಿಳಸಿದೆ ಹಿರಿದಾಗಿ ನೋಯದಿರಿನ್ನು ಚಿತ್ತದಲಿ ॥ ತೊಲಗಿದೆನು ಯಿಂದಿನಲಿ ಶುಭ

Digitized by ROJA MUTHIAH RESEARCH LIBRARY



ಮಾಂ । ಗಳಕರವ್ರನಿನಗೆಪ್ಪುದೆನಲಾ । ನಳನೃಪತಿ ಖತಿಗೊಂಡು ಶಾಪವ ಕೊಡದೆ
ಮನ್ನಿಸಿದ ... ... ॥೩೫॥

ಮಾನವಾಧಿಪ ಕೇಳು ಲೋಕಕೆ । ದೀನಜನ ಬಾಂಧವನು ನಳನೃಪ ।
ಕಾನನದಿ ಕಲಿಗತ್ತ ಕಳುಹಿಸಿ ಬಂದು ರಥವೇರಿ ॥ ಆ ನರೇಂದ್ರಂಗೆಶ್ವ ಹೃದಯವ ।
ತಾನರುಹಿ ಯಾತನಲಿ ಪಡೆದವನು । ಸಾನುರಾಗದಿ ಭೂರುಹದ ಹೃದಯವನು ನಿಮಿ
ಷದಲಿ ... ... ॥೩೬॥

ಕರದವಾಘೆಯಗೊಂಡು ನೃಪಗೆ । ಚ್ಚರಿಸಿ ನೂಕಲು ತೇಜಿಗಳು ಹಿಂ ।
ಕರಿಸಿ ಮನೆ ಮುಂಕೊಂಡು ಹಾಯ್ದುವು ಬಿಟ್ಟ ಸೂಟಿಯಲಿ ॥ ಭರದ ಗಮನವನೇ
ನನೆಂಬೆನು । ನೆರದ ಜನವಲ್ಲಲ್ಲಿ ನಿಂದುದು । ಹರಹರಾ ಸಾರಥಿಗೆ ಸರಿಯಾರರಸ
ಕೇಳೆಂದ ... ... ॥೩೭॥

ತುರಗ ಹೇಷಾರವವ್ರುಗಾಲಿಯ । ಧರಧುರದ ಚೀತ್ಕೃತಿಯ ಸಾರಥಿ ।
ಯುರವಣೆಯ ರಥದ ಚಬ್ಬಗಳ ರೆಝೇಂಕಾರನಾದದಲಿ ॥ ಭರದಿ ಕೆಂಧೂಳಿಡುತಲಿ
ರಲಾ । ಪುರಜನರು ಸಂದಣಿಸಿ ನೋಡಲು । ಪರಿಜನರು ಬಂದರು ವಿದರ್ಭ ನೃಪಾ
ಲಗೆರುಹಿದರು ... ... ॥೩೮॥

ಬಂದನೇ ಋತುಪರ್ಣನೆನುತಾ । ನಂದಿಂಕರಿಸಿದನು ಸಚಿವರ ।
ಮಂಡಿಯನು ಕಳುಹಿಸಲು ಕರತಂದರು ನಿಜಾಲಯಕೆ ॥ ಸಂದಣಿಯ ಕಲಕೊತ್ತಿ ನೃ
ಪಮುದ । ದಿಂದ ಬೇರರಮನೆಯೊಳುಲುಪೆಗ । ಳಂದಯೋಧ್ಯಾಪತಿಯ ಸತ್ಕ
ರಿಸಿದನು ಭೀಮನೃಪ ... ... ॥೩೯॥

ಕೇಳಿದಳು ದಮಯಂತಿ ವಾರ್ತೆಯ । ತಾಳಿದಳು ಹರುಷವನು ಮನದ
ಲಿ । ಫಾಲಲೋಚನನಿಂದ ಫಲಿಸಿತು ಪುಣ್ಯವೆನಗಿಂದು ॥ ಬಾಲೆ ಕೇಳೆನಗಿಂದು ವ
ಸ್ತ್ರ । ಜ್ವಾಲೆ ಪರಿಹರವಾಯ್ತು ಮಂಗಳ । ದೇಳಿಗೆಯು ಪಸರಿಸಿತು ಶುಭವಹು
ದೆಂದಳಂದು ಮುಖಿ ... ... ॥೪೦॥

ಓಲಗವನಿತ್ತನು ವಿದರ್ಭನೃ । ಪಾಲಕರಸಿದ ಮಂತ್ರಿ ಬಾಂಧವ ।
ಜಾಲವನು ಋತುಪರ್ಣ ಬಂದನು ಬಾಹುಕನು ಸಹಿತ ॥ ಸಾಲು ಮಣಿಪೀಠದಲಿ ಕು
ಳ್ಳಿರೆ । ಬಾಲೆಯರ ಸಂಗೀತ ನೃತ್ಯದ । ಕೇಳ ಮೇಳದಿ ರಂಜಿಸಿತು ಭೂಪಾಲ
ನಾಸ್ಥಾನ ... ... ॥೪೧॥

ಖಿನ್ನನಾದನು ಚಿತ್ತದಲಿ ಋತು । ಪರ್ಣ ಭೂಸುರ ನೆಂದ ಮಾತಿನ ।
ಬನ್ನಣೆಗೆ ಮರುಳಾಗಿ ಬಂದೆನು ಮೂಢನಾದೆನಲ ॥ ಭಿನ್ನವಿಲ್ಲದೆ ಕೊಂಡನಾ ಚಿ

ಕೆ । ಗಿನ್ನುಳಿವನೇನೆನುತಗುಣಸಂ । ಪನ್ನೆಮರುಗಿದಳನ್ನಪಾದದಂತ
ಚಿಂತೆಯಲಿ ... ... ॥೪೨॥

ನಾರಿಯುರವುರೆಗೊಂಡುಸಭೆಯಲಿ । ಸಾರಥಿಯಕುಬ್ಜಪತ್ರಾವ ।
ನೋಡಿಗೆಳ್ಳೆಸೆಟಾಕ್ಷಿಸುತದಮಯಂತಿಮನದೊಳಗೆ ॥ ಅರಿವನುನಳನೃಪನ
ಪ್ರೋಲುವ । ಚಾರುಚಿನ್ಹೆಗಳಾಗಿತೋರ್ಪವಿ । ಕಾರವಾಗಿದೆರೂಪೆನುತಚಿಂ
ತಿಸಿದಳಂಬುಜಮುಖಿ ... ... ॥೪೩॥

ಒರದೊರದುನೋಡಿದಳುಸೂತನ । ಶಿರಮುಖದಕಾಂತಿಯನುಕಳೆ
ಗುಂ । ದಿರುವಕಾಯವಕಪ್ಪಿನಿಂಮುದುರಿರ್ಪರೋಮದಲಿ ॥ ಪರಿಕಿಸಲಿಕೀರೂ
ಪ್ರುಕೈಕೊಂ । ಡಿರುವನೊರಳನೃಪತಿಶಿವಶಿವ । ಮುರಹರನುತಾನೇಬಲ್ಲನೆಂ
ದುಮ್ಮಳಿಸಿದಳುತರಳೆ ... ... ॥೪೪॥

ಹರದುದೋಲಗವಲ್ಲಿನಿಜವಾಂ । ಡಿರಕೆಂಡಾಲೋಚಿಸುತಪಿಂಗೆ ।
ತರುಣಿಯರಕಳುಹಿಸಲುಬಂದಳುಬಾಹುಕಸಿನವುನೆಗೆ ॥ ಇರವಕಂಡರುಶಾಕದಲಿ
ಕೈ । ಕರಣವನುನೆರೆಸೂಪಕಾರದ ॥ ಪರಿಯುಬೆಗಳುತಬಂದುಬಿನ್ನೈಸಿದ
ರುಭೂಮಿಸಿಗೆ ... ... ॥೪೫॥

ತಾಯೆಚಿತ್ತೈಸಿನ್ನುಪನಕರ । ಣಾಯತವನೇನೆಂಬೆಲೋಕದ । ಸ್ತ್ರೀ
ಯರೊಳಗಿನಿತಿಲ್ಲರಚಿಸುವಶಾಕಪಾಕದಲಿ ॥ ಮಾಯವಿದ್ಯತಾತಿಳಿಯಲರಿಯ
ದು । ಪಾಯದಿಂದೀಕ್ಷಿಸಲುಸಕಲರ । ಸಾಯನವುಪರಿಪಕ್ವವಾಗಿದೆಪೇಳಲ
ರಿದೆಮಗೆ ... ... ॥೪೬॥

ದಾದಿಯರುಬಾಹುಕನಗುಣಗಳ । ಭೇದಿಸಿದರೊಂದೊಂದುಬಗೆಯು
ಲಿತ । ಲೋದರಿಗೆಬಿನ್ನೈಸೆನಿಶ್ಚೈಸಿದಳುದಮಯಂತಿ ॥ ಆದಡವನಳನಹು
ದುಗುಣದಲಿ । ಭೇದಿಸುವನಿನ್ನೊಮ್ಮೆಯನುತವಿ । ನೋದದಿಂದಾಡುವಕು
ಮಾರರಕಳಿಸಿದಳುತರುಣಿ ... ... ॥೪೭॥

ತರಳರಿಗೆನೀರೆರೆದುಕಾಂಚನ । ವರದುಕೂಲವನಿತ್ತುದಿವ್ಯಾ । ಭರ
ಣಭೂಷಿತರಾದತನಯರದಾದಿಯರಕೈಯ ॥ ಪಿರಿದುಕಳುಹಲುಬಾಹುಕಿನಪಾಂ ।
ದಿರದಬಾಗಿಲಮುಂದೆಬಿಡೆಸಂ । ಚರಿಸಿಸುಳದಾಡುವರಕಂಡನುನೃಪತಿಹರು
ಷಿಸುತ ... ... ॥೪೮॥

ತರಳರನುಪಿಡಿದೆತ್ತಿತೊಡೆಯೊಳ । ಗಿರಿಸಿಮುದ್ದಾಡಿದನುನೋಡು
ತ । ಸುರಿವಕಂಬನಿಗಳಲಿಬಾಹುಕಮರುಗತಿರಲಂದು ॥ ಮರೆಯಜಾಲಂದ್ರ



ದಲಿಕಂಡಳು । ತರುಣಿನಳನೃಪನೀತನಹುದೆಂ । ದುರುತರಪ್ರೇಮದಲಿಬಂದ
ಳುಜನನಿಯರಮನೆಗೆ ... ... ॥೪೯॥

ತಾಯೆಸಂಶಯವಿಲ್ಲನೈಷಧ । ರಾಯನೀತನುಸೂತನಲ್ಲವಿ । ಡಾ
ಯದಲಿಬಂದಿಹನುನೋಡುಕುರೂಪಿವೇಷದಲಿ ॥ ರಾಯನೊಳಗಗ್ಗಳಿಯನಳ
ನೃಪ । ಮಾಯವನುತೋರಿಹನುಯಿವನನಿ । ಜಾಯತವನಾಬಲ್ಲೆಕರಸೆಂದಳು
ಸರೋಜಮುಖಿ ... ... ॥೫೦॥

ಧರಣಿಪತಿಯನುಮತದೊಳಾತನ । ಕರೆಸಿದಳುನೃಪಸುತೆಸಿಬಾಹುಕ ।
ನಿರದೆಬಂದನುರಾಜಮಂದಿರದಲ್ಲಿಕಾಳ್ಕೆಲು ॥ ತಳೆಮಾಸಿದಸೀರೆಯಳಿಗರ ।
ಗರಿಕೆತಪ್ಪಿದ ಚಲುವಿನಳಿನಿಂ । ದಿರಲುಕಂಡನುಸತಿಯ ತಲೆಬಾಗಿದನು ಲಜ್ಜೆ
ಯುವಿ ... ... ॥೫೧॥

ಹಿಮಕರಾನ್ವಯತಿಲಕವಸುಧಾ । ರಮಣಭ್ರಹ್ಮೋದಯಸುಭೂಷಿ
ತ । ವಿಮಲಗುಣಚಾರಿತ್ರಸನ್ನುತಸತ್ಯಸಂಚಾರ ॥ ಕುಮತಿಪ್ರಷ್ಕರ
ಮುನಿದನೇ । ವಿಕ್ರಮದರಿವ್ರತೆಬಂದುದೇನೆ । ಕಮಿತಭುಜಬಲವಾಲಿಸೆಂದ
ಳುಪತಿಗದಮಯಂತಿ ... ... ॥೫೨॥

ಮುನ್ನಮಾಡಿದಕರ್ಮಫಲಯಿತು । ಪನ್ನಗಲಿಸೇವೆಯನುಮಾಡು
ವ । ದುನ್ನತಿಕೆಯಲಿಬಂದುದೆನಿಗೆಸರ್ವಭೌಮರಿಗೆ ॥ ಅನ್ನವಣ್ಣ್ಯದಹಾ
ನಿತಾನಿದ । ಕಿನ್ನುಮಾಡುವುದೇನುಗುಣಸಂ । ಪನ್ನರಕ್ಷಿಸುಸತಿಯನೆಂದೆರಗಿದ
ಳುಪದಯುಗಕೆ ... ... ॥೫೩॥

ತುರುಬಹಿಡಿದೆತ್ತಿದನುಪತಿಯಳ । ನುಗಿವಕಂಬನಿದೊಡದುನುಡಿದ
ನು । ಬದಿಚಿಂತಿಸಲೇಕೆವಗಾನಿನಿಬಿಡುಮುಸೋವ್ಯಥೆಯ ॥ ಅರಿಯದವಳೇನೀ
ನುಲೋಕದ । ಸರಸಿಜಾಕ್ಷಿಯರೆಲ್ಲರಿಗೆವರ । ಗುರುವಲಾನೀಹರಿದೆಯನ್ನನುಬ
ಯಸಬೇಡೆಂದ ... ... ॥೫೪॥

ನಯವಿಹೀನನುತಾನು ಮುದಲಿ । ನೆನತುತಪ್ಪಿದನಿದರಿಯನುಕಾ
ನನದನಿನ್ನನುಬಿಸುಟುಕಳದದುರಾತ್ಮಬಾಹಿರನ ॥ ನೆಸವರೆಜಡುಮರುಳನಿನಗಿಂ ।
ದಿನಲಿಮಾಳ್ಪುದುನಸ್ವಯಂವರ । ಮನಕೆಸರಿಬಂದವನನೋಲಿಸೆಂದ
ನಾನೃಪತಿ — — ॥೫೫॥

ಎನಲುಕರ್ನಂಗಳಗೆಸಬಳತ । ಮೊಸೆಗೊದಿದಂತಾಗೆಸತಿಕ । ಕ್ಕೊ
ನಲಿತಾಂಬಿನಳುದರಿಷನುಡಂದದರಶಿವಾಯನುತ ॥ ಎನಗೆಯಿನ್ನುಪುನಸ್ವಯಂ

Digitized by ROJA MUTHIAH RESEARCH LIBRARY

ವರ । ಮನದೊಳುಂಟೇಸೀತುಬರಚೇ । ಕೆನುತವಾರ್ತೆಯಕಲ್ಪಿಸಿದೆಕೇಳೆಂದ
ಳಂದುಮುಖಿ ... ... ॥೫೬॥

ನಂಬಿಬೇನುಲೇಸಾಗಿಮನದೊಳ । ಗಿಂಬುಗೊಂಡುದುವಿಕೃತಿರೂಪಿನ ।
ಡೊಂಬಿಯೇಕಿದುಸಕಲಧರ್ಮವಿಚಾರವಂತರಿಗೆ । ಅಂಬುಜಾಕ್ಷನರೂಪಿನಲಿ
ಪ್ರತಿ । ಬಿಂಬನಲ್ಲವೆನೀನುಬಯಲಾ । ಡಂಬದನುಡಿಯೇಕೆಸಾಕಿನ್ನೆಂದ
ಳಂದುಮುಖಿ ... ... ॥೫೭॥

ನಡವುತೆಡಹಿದಪಟ್ಟದಾನೆಯ । ಮಿಡಿದುಕೊಳ್ಳುವರುಂಟೆನಂಬಿದ ।
ಮಡದಿಯಲ್ಲವೆತಾನುಬಿರುನುಡಿಯೇಕೆನಳನೃಪತಿ ॥ ಅಡವಿಯಲಿಕಡುನೊಂದು
ದೇಹವ । ಬಿಡದೆನಾಳುಹಿದೆನಿನ್ನಪ್ರಾಣದ । ಗೊಡವೆಯೆನಗೇಕೆನುತಕಂ
ಬನಿದುಂಬಿದಳುತರಳೆ ... ... ॥೫೮॥

ನೋಯನೊಂದಿಹಸತಿಯನಾಡಲು । ನ್ಯಾಯವೇನಿದುನಿನಗೆಕೇ
ಳೆಲೆ । ರಾಯನಿನ್ನನುನೋಡಕಳುಹಿದೆಚರರದಿಕ್ಕಿನಲಿ ॥ ಮಾಯರೂಪನು
ಕಾಣಲಾರದೆ । ಬಾಯಬಿಡುತಿರಲಿನ್ನಯೋಧ್ಯದ । ರಾಯನಲಿನೂತನದಸಾ
ರಥಿಯನಲುಕೇಳದೆನು ... ... ॥೫೯॥

ಆಗಭೂಸುರಪತಿಸುದೇವನ । ಬೇಗಲಟ್ಟಿದೆನಿನ್ನಬಳಿಗೆಸ । ರಾ
ಗದಿಂಮತ್ತರಕೆಪ್ರತ್ಯುತ್ತರವಪೇಳ್ದಿರಲ ॥ ಈಗಲಿದುಸಂಶಯವೆತಾನದ । ಕಾ
ಗಿಕರಸಿಸ್ವಯಂವರವನಿನ । ಗಾಗಿಪೇಳಿದೆನದರತಪ್ಪೇನೆಂದಳಂದುಮುಖಿ ॥೬೦॥

ಜನನುತನೆಕೇಳಾಡಿಯಲಿಯ । ವ್ವನವನಿನಗೊಪ್ಪಿಸಿದೆನಲ್ಲದೆ । ತನ
ಗೆಮನೋವಾಕ್ಕಾಯಕರ್ಮಂಗಳಲಿತಾನೆರಡ ॥ ನಿನಗೆಸೆನದವಳಲ್ಲನೀನೇ । ಯನಗೆ
ಗತಿಯಂದಿಹುದನರಿಯಾ । ಜನಪರಕ್ಷಿಸುಕೈವಿಡಿದುಸಲಹೆಂದಳಂದುಮುಖಿ ೬೧

ಇದಕೆಯಮವರುಣನಿಲನಿಂದ್ರರು । ಮದನಜನಕನುಸಾಕ್ಷಿಯನೆಮೇ
ಘದನಿನುಡಿದನುವಾಯುನಳನೃಪನೊಡನೆಸತ್ಯವನು ॥ ಚದುರಕೇಳ್ವಮಯಂ
ತಿಲೋಕದ । ಸುದತಿಯೆತಿಳಲೋಕಪಾವನೆ । ಇದಕೆಸಂಶಯವೇಕೆಪಾಲಿಸು
ಸತಿಯನೀನೆಂದು ... ... ॥೬೨॥

ಪವನನಾಡಿದನುಡಿಯಕೈಕೊಂ । ಡವನಿಪತಿಬಿನ್ನೈಸಿದನುಕೈ ।
ಶವಕದಲಿಕಲಿಯಿಂದನೊಂದೆನುನಿಮ್ಮದರುಶನದಿ ॥ ಭವಣಿಹಿಂಗಿಕೃತಾರ್ಥನಾ
ದೆನು । ಯೆನಗೆಯಿನ್ನೇನೆನುತಪಕ್ಷಿಯ । ಹವಣನುನದಲಿನೆನೆಯೆಬಂದುದುದಿ
ವ್ಯಮಯವಸನ ... ... ॥೬೩॥



ಧರಿಸಿದನುನಳನಾಮುಕೂಲವ । ಪರಿಹರಿಸಿತಾರೂಪಮುನ್ನಿನ । ಪರಮತೇ
ಜದದಿವ್ಯತನುವಿನೊಳೆಸೆದುರಂಜಿಸಲು ॥ ಸುರರುದುಂದುಭಿವೊಳಗೆಮಲ್ಲಿಗೆಯ
ರಳಮಳೆಸೂಸಿದರುಗಗನದಿ । ಸುರಸತಿಯರಕ್ಷತೆಯತಳೆದರುಹರಸಿನಳನೃಪಗೆ ॥

ಸುರರುಕೊಂಡಾಡಿದರುಯಮ । ಭಾಸ್ಕರವಿರಿಂಚಾದಿಗಳಲಿಯೆವ
ರ । ತರುಣಿಬಂಬೇಗಿವಳುಪತಿಯಂಭ್ರಿಯಲಿದಮಯಂತಿ ॥ ಹರುಷದಲಿಬಿ
ಗಿಯಪ್ಪಿದನುಭೂ । ಸುರರುಸಂಭ್ರಮಿಸಿದರುಪರಪುರ । ದರಸಚನ್ನಿಗರಾ
ಯಸಲಹಿದನವರಕರುಣದಲಿ ... ... ॥೬೪॥

ಅಂತು ಸಂಧಿ ೮ ಕ್ಕೆ ಪದ ೪೧೦ ಕ್ಕೆ ಮಂಗಳಮಸ್ತು.

---

## ಒಂಭತ್ತನೆಯ ಸಂಧಿ.

ಸೂಚನೆ ॥ ಕದನದಲಿಪುಷ್ಕರನಬಲವನು । ಸದೆದುಜೂಜಿಲಿಗೆಲಿದು
ರಾಜ್ಯವ । ಮುದದಿಪಾಲಿಸುತಿರ್ದನಾಸತಿಸಹಿತನಳನೃಪತಿ ॥

ಪದ ॥ ಕೇಳುಪಾಂಡುಕುಮಾರನಳಭೂ । ಪಾಲನಭ್ಯುದಯವನು
ಮಂಗಳ । ದೇಳಿಗೆಯನೇನೆಂಬೆದಮಯಂತಿಯಮಹೋತ್ಸವವ ॥ ಲೀಲೆಯಲಿ
ಮಜ್ಜನವಮಾಡಿದು । ಕೂಲಮಣಿಭೂಷಣವಧರಿಸಿಬ । ಡಾಳಿಸುವಕಾಂತಿಯ
ಲಿಸಿಂಹಾಸನದಿಕುಳ್ಳಿರ್ದ ... ... ॥೧॥

ಈತನಾರುಪಿತಾಮಹನೊಪುರು । ಹೂತನೋಮನ್ಮಥನೊಲಕ್ಷ್ಮೀ ।
ನಾಥನೋ ಚಂದ್ರಮನೊ ಶಂಕರನೋ ಮಹಾದೇವ ॥ ಈತನೇನಳನೃಪ
ತಿಜಗವಿ । ಖ್ಯಾತನೆಲ್ಲಿಂದಿಲ್ಲಿಬಂದನು । ಪ್ರಾತುಮರ್ಷರೇಯನುತಕೊಂ
ಡಾಡಿತುನೃಪಸ್ತೋಮ ... ... ॥೨॥

ಬಂದುಕಂಡರುನಿಖಿಳಪುರಜನ । ತಂದುಕಾಣಿಕೆಕೊಟ್ಟುಮುದದ
ಲಿ । ಸಂದಣಿಸಿಯುತುಪರ್ಣಬಂದನುಮಂತ್ರಿಜನಸಹಿತ ॥ ಚಂದದಲಿಕಾಂಚ
ನಸುಮವಸ್ತ್ರವ । ತಂದುಯಮರೊಳಗಿಟ್ಟುವಿನಯದಿ । ಸಿಂದುಬಿನ್ನೈಸಿದ
ನುಕರಗಳಮುಗಿದುನಳನೃಪಗೆ ... ॥೩॥

ಸೋಮಕುಲನೃಪಸಾರ್ವಭೌಮನು । ನಾಮಮಂಗಳನಿಳಯಜಿತ
ಸೆಂ । ಗ್ರಾಮಧೀರವಿರೋಧಿಸಾಮಜಸಿಂಹದಳನಿಳಯ ॥ ತಾಮಸನ್ನುಮತಿ
ಗೇಡಿಮಾನವ । ಪಾಮರನಗುಣದೋಷವೆಣಿಸದೆ । ಪ್ರೇಮದಿಂದೊಲಿದೆನ್ನ
ಸಲಹೆಂಬೆನುತಕೈಮುಗಿದ ... ... ॥೪॥

Digitized by ROJA MUTHIAH RESEARCH LIBRARY

ರೂಢಿಯಲಿತನಿಮ್ಮನರಿಯದೆ । ಮೂಢಮತಿಯವಿವೇಕಿತುರಗವ ।
ಹೂಡಿವಾಗಲೆರಥಕೆಲಡಿಗೆಯೊಳರಿದೆನೇನಾನು ॥ ಮಾಡಿದಪರಾಧಗಳನೊಂದ
ನು । ನೋಡಲಾಗದುಚಿತ್ತದಲಿಖಯ । ಖೋಡಿಯಿಲ್ಲದೆಸಲಹಬೇಕೆಂದೆರಗಿದ
ನುಪದಕೆ ... ... ॥೫॥

ಈಪರಿಯೊಳೆನಲಾನೃಪನಸಂ । ತಾಪವನುಪರಿಹರಿಸಿನಳನೃಪ ।
ತಾಪಿರಿಮಣಿಭೂಷಣಂಗಳನಿತ್ತುನಸುನಗುತ ॥ ಕೋಪಯನಗಿಲ್ಲೆಂದಯೋ
ಧ್ಯಾ । ಭೂಪನನುಮನ್ನಿಸುವಸಮಯದಿ । ತಾಪಸನನೊಡಗೊಂಡುಬಂದನು
ಪಲಿಸುಮೈತ್ರೇಯ ... ... ॥೬॥

ಬಂದಮುನಿಗೆಪಾಕಚರಣ । ದ್ವಂದದಲಿಚಾಚಿದನುಮಕಾಟವ ।
ನಂದಪಿಡಿದೆತ್ತಿದನುನಸುನಗುತಲ್ಲಿಕಾಳ್ಪುರ್ಪ ॥ ಎಂದನೆಲೆನಳನೃಪತಿನಿನಗೆ
ಮು । ಕುಂದನೊಲವುಸದಾವಕಾಲದಿ । ನಿಂದಿರಲುಯಿನ್ಯಾವಪ್ರದರಿದಿಲ್ಲೆಂದನಾ
ಮುನಿಪ ... ... ॥೭॥

ಕಲಿಪುರುಷನಿಂದಾದುದುಕಪತಿ । ಲಾನೆಪುತ್ರರನಗಲಿಕಷ್ಟವ ।
ಬಳಸಿದೆಯಲಾನೊಂದುಪತ್ಯವಬಿಡದೆಸಂಚರಿಸಿ ॥ ಸುಲಭನಾಪೆಕಲಾಂಗನೆಯು
ವ್ರತ । ಫಲವಪುಣ್ಯೋದಯದಿನಿಜಸಿರಿ । ಫಲಿಸಿತಿನ್ನೀಲೋಕದಲಿ ನಿನಗಾರು
ಸರಿಯಂದ ... ... ॥೮॥

ಹರಿಯುಸಲೆಗಡಿಸಿದನುಪದವೇ । ಶ್ವರನಭಿಕ್ಷವನೆತ್ತಿಸಿದಸರ । ಸಿ
ರುಹಭವನಶಿರವಪ್ರೋಗಾಡಿದನುಪೂರ್ವದಲಿ ॥ ಕರುಣಹೀನನುನಿನ್ನಸೋ
ಕುತ । ತೆರನಕಾಣದೆಹಲವುದಿನಕಾ । ತರಿಸಿಭೂದಲಿತೊಡಚಿಬಿಟ್ಟನುಮಾನವ
ಭೀತಿಯಲಿ ... ... ॥೯॥

ಎಲ್ಲನೃಪರಂತಲ್ಲಲಕ್ಷ್ಮೀ । ವಲ್ಲಭನಪ್ರತಿಬಿಂಬನಿನ್ನಲಿ । ನಿಲ್ಲಬಲ್ಲನೆ
ಕಲಿಪುರುಷನತಿಬೇಗತೆರಳಿದನು ॥ ಸಲ್ಲಲಿತಸಾಂಬ್ರಾಜ್ಯಪದವಿಂ । ದೆಲ್ಲನಿನಗ
ಹಪಿಂದುಧರಣೀ । ವಲ್ಲಭನಸತ್ಕರಿಸಿಕೊಂಡಾಡಿದನುಮೈತ್ರೇಯ ॥೧೦॥

ಎಂದುಹರಸುತಮುನಿಪತಾಮುದ । ದಿಂದಮಂತ್ರಾಕ್ಷತೆಗಳಲಿಮುನಿ ।
ವೃಂದಸಂತೋಷಿಸಿತು ನೃಪಸಿಂಹಾಸನದೊಳಾಲು ॥ ಇಂದುವದನೆಯಬಾರತಿ
ಯನಲ । ವಿಂದಯತ್ತಿದರಲ್ಲಿಸತಿಯರು । ಸಂದಣಿಸಿಪಾಡಿದರುಶೋಭಾನವ
ನುಮನವಲಿಮ ... ... ॥೧೧॥

ಊದಿದಪ್ರಕಹಳೆಗಳುಕಂಖವ । ನಾನಿಸಿತುಭೇರೀಮೃದಂಗವಿ ।



ನೊದರವರಂಜಿಸಿತುನಾನಾವಾದ್ಯರಭಸದಲಿ ॥ ಮೇಧಿನೀಶ್ವತಾಗಮಯ್ಯಾಗ ।
ಳೀಗಸಿದ್ದವನಿವನಕಾತಿಯಳ । ಗ್ಯದೆತನಪುಗೆಂದುಹರಸಿತುಪಾನಿಷಧೂ
ನಿಕರ ... ... ॥೧೨॥

ಅರಸಕೇಳುವಿದರ್ಭಪತಿಮುನಿ । ವರರನುಪಚರಿಸಿದನುಧರಣೀ ।
ಸುರರಿಗಿತ್ತನುಗೋಹಿರಣ್ಯಫಲಾದಿದಾನವನು ॥ ಕರಸಿಕೊಟ್ಟನುನೃಪತಿಸಕ
ಲಾ । ಭರಣಗೆಳಕರಿತುರಗರಥವನು । ಪುರಜನರಸಂತೈಸಿಕಳುಹಿದನಖಿಳಬಾಂ
ಧವರ ... ... ॥೧೩॥

ಹರದುದೋಲಗವಲ್ಲಿಯಾಚೆಕ । ವರುಧರಣೀಸುರರುಮಖ್ಯರು ।
ವರಪುರೋಹಿತಮಂತ್ರಿಜನತೆರಳಿದರು ಮಂದಿರಕೆ ॥ ಮರುದಿವಸಯುತುಪ
ನನನಳನೃಪ । ಗರಗಿಕಳುಹಿಸಿಕೊಂಡಯೋಧ್ಯಾ । ಪುರವಹೊಕ್ಕನುಚೈದ್ಯ
ಭೂಪತಿಮರಳಿದನುಪುರಕೆ ... ... ॥೧೪॥

ಇಂದುಮುಖಿದಮಯಂತಿಯೊಡನಾ । ನಂದದಲಿನಳನೃಪತಿಮಾಪನ ।
ಮಂದಿರದೊಳೊಂದೊರುಷವಿದ್ದನುಸಕಲವಿಭವದಲಿ ॥ ಮುಂದೆನಮ್ಮಯನಿಷಧ
ಪುರಿಗಿ । ನ್ನೆಂದುಗಮಿಸುವಹದನತಾಸಿಂ । ಕಂದಭಿಪನೃಪನೊಡನಾ
ಲೋಚಿಸಿದಹದನ ... ... ॥೧೫॥

ದಂಡುನಡೆಯಲಿನಿಷಧಪುರಿಗಾ । ಭಂಡನಹಪುಷ್ಕರನಮಾತೇ ।
ನಂತಲಿದಾಫಲವಿಲ್ಲನಾಕಿನ್ನೇಳಯಿನ್ನೆನುತ ॥ ಮಂಡಲಾಧಿಪನೆನಲುಭೂಪರ ।
ತಂತವೆದ್ದುದುಕೂಡೆಭಟರು । ದ್ದಂಡಕೈದುವಗೊಂಡು ನಡದರುನಳನಸನ್ನೆ
ಯಲಿ ... ... ॥೧೬॥

ತುರಗಹಲ್ಲಣಿಸಿದುದುರಥವೋ । ಹರಿಸಿತರಳತುಸಂಗರಕೆಮದ ।
ಕರಿಗಳಟ್ಟಣಿಸಿದುದುಕಾಲಾಳರದೆಸಂದಣಿಸಿ ॥ ನೆರದುದಗಣಿತಸೈನ್ಯಸಾಗರ ।
ಮೆರೆವಪ್ರೋಲ್ಗಂಭೀರಭೇರಿಗ । ಳಾರವಣಿಸೆಹೊರವಂಟನಳನೃಪನರಸಕೇ
ಳೆಂದ ... ... ॥೧೭॥

ತುರಗಜಯಮೆಂಬಣಿಸಿಹೂಡಿದ । ವರರಥಕೆಬಲವಂದುಕೈದುವ ।
ಧರಿಸಿಯೇರಿದನರಸಮಂಗಳವಾದ್ಯರಭಸದಲಿ ॥ ತೆರಳತಲ್ಲಿಮಹಾರಥರುಸಂ ।
ಗರಕೆವಿಂಚುವಭಟರಗಡಣದಿ । ಧುರಕೆನಡದರುಮುಂದೆಸಾರುವ ಗೌರಗಹ
ಳೆಯಲಿ ... ... ॥೧೮॥

ಇದುಕಣಾನಳನಂದುಮನನಾ । ಸದನಯುಣಮಾದಲ್ಲಿಮಕ್ಕಳ । ಪ

Digitized by ROJA MUTHIAH RESEARCH LIBRARY

ದುಳದಿಂದೇರಿಸಿ ವಿದರ್ಭ ಕೇಳುಹಿಂಬಿಟ್ಟರಥ ॥ ಗದಗದಿಪನೆವರತ್ನನಿಚಯದೊ |
ಳುದಿಸಿಮೆರೆವಸುವರ್ಣಕಲಶದಿ | ಮದನನೆಲೆಯಿದುಯೆನಿಸಿಮೆರದುದುವರವ
ರೂಥವದು ... ... ॥೧೯॥

ಹೊಳೆವಸಿಂಧದಸಾಲರಝಲ್ಲರಿ | ಗಳಪತಾಕಾಛತ್ರಚಮರಾ |
ವಳಿಗಳಿಂದಲೆದಾತುಗುಂಡಿತುವಭ್ರತಳಮುಸುಕೆ ॥ ಉಲಿವಮಂಗಳಪಾಠಕರ
ಕಳ | ಕಳಕೆವಿಗೆಹೆಬ್ಬಲಭಡಾಳಿಸೆ | ನೆಲಬಿರಿಯಲೈತಂದುಬಿಟ್ಟುದುನಿಷಧನ
ಗರಿಯಲಿ ... ... ॥೨೦॥

ಧಾಳಿಬಿಟ್ಟರುಹರಿದುದಿಕ್ಕಿನ | ಮೂಲೆಯುವರಂಜಿದರುಮಾಮೋ
ನೆ | ಯಾಳುಕವಿದುದುಪಿಡಿವರಗ್ಗದಸೆರೆಯುಸೂರೆಗಳ ॥ ಕೇಳಿದನುಪುಷ್ಕರ
ನುನಿಷಧನ | ಧಾಳಿಯಿಂದೆನೆಖತಿಯುಭರದಲಿ | ಕಾಳಗಕೆನಳನೃಪತಿಬಂದನೆಯು
ನುತೆಮುಳಿದೆದ್ದ ... ... ॥೨೧॥

ಅಗಲದಕೇನಿನ್ನುರಾಜ್ಯವ | ನೀಗಿದಳಲಿನೊಳೆಮ್ಮಕದನಕೆ | ತಾಗಿ
ದನುತಪ್ಪೇನುಬರಹೇಳೆಮ್ಮಸೈನಿಕವ ॥ ಈಗಲೀತನಕಡಿದುಶಿರೆಗಳ | ಬೇಗಹಿ
ಡಿರೆಂದೆನುತನಿಜಬಲ | ಸಾಗರವಕಳುಹಿದನುತನ್ನಯುಸೈನ್ಯದಧಿಪತಿಯು॥೨೨॥

ಹರಿಗೆಖಡ್ಗಕಠಾರಿತೋಮರ | ಪರಶುಮುದ್ಗರಕುಂತಶಲ್ಯಕ |
ಪರಿಘಚಕ್ರತ್ರಿಶೂಲಭಕ್ಕರಭಿಂಡಿವಾಳಚಯ ॥ ಸುರಗಿಸಬಳಮುಸುಂಡಿಮೊ
ದಲಾ | ದುರುತರದಕೈದುಗಳಪಟುಭಟ | ರುರವಣಿಸಿತಾಗಿದರುರಿಪುಮೋಹ
ರವನನುಗೊಳಿಸಿ ... ... ॥೨೩॥

ಹೊಕ್ಕರಾಹವದೊಳಗೆಕಾಲಾ | ಳೊಕ್ಕಲಿಸಿಬರೆಕಂಡುಮುಝರೇ |
ಚುಕ್ಕಿಗಳರಾಯನುತಹೊಯ್ದರುಬೆರಸಿಪಟುಭಟರ ॥ ಇಕ್ಕಿದರುಸುರಗಿಯ
ಲಿಕರಿಗಳ | ತಿಕ್ಕಿತಿವಿದರುತೇರುಗಳಮುರಿ | ದಿಕ್ಕಿಪರಿಘದೊಳೊರಸಿದರು
ಕಾಲಾಳಮೂದಲಿಸಿ ... ... ॥೨೪॥

ಇಟ್ಟಣಿಸಿಬಹತೇಜಿಗಳಸರೆ | ಯಟ್ಟಿಖಂಡಿಸಿಸುಭಟರನುಬೆ |
ನ್ನಟ್ಟಿತಿವಿದರುಮಸ್ಸೆಯರುಹದವರಿದುನಾಯಕರ ॥ ಹಿಟ್ಟುಗುಟ್ಟಿದರರುಣಜಲ
ಸಾ | ಲಿಟ್ಟುದವನಿಯೊಳಮ್ಮಮನೆರೆಜಗೆ | ಜಟ್ಟಿಗಳುಕಾದಿದರುರಣದಲಿ
ಸುರರುಬೆರಗಾಗೆ ... ... ॥೨೫॥

ಸಾರಥಿಗೆಯುಚ್ಚರಿಸಿರಥಿಕರು | ತೋರಿದರುಕೈಗುಣವಸರಳನ |
ಸಾರದಲಿರಿಪುಭಟರತಲೆಗಳತರಿದರಲ್ಲಲ್ಲಿ ॥ ಕಾರಿದರುರಕುತವನುಕೇರಿನ | ಪಾ



ರುವಂಗಳುಮುಗ್ಗಿದವ್ರಣ | ಧೀರರೆಚ್ಚಾಡಿದರು ಪಾಯದೊಳೊರಳಿತುಭ
ಯಬಲ ... ... ॥೨೬॥

ಕಡಿವಡೆಲಿಗಳಸಿಡಿದಹುಬ್ಬಿದ | ಕಡಿದಕೊಳ್ಗಳಸಿಗ್ಗಿಡಲುಗಳ |
ವ್ರಡಿದತೊಡೆಗಳಸಿಮುಳಖಂಡದಹರಿದಕರುಳುಗಳ ॥ ಹೊಡದನೆತ್ತಿಗಳಿಂದರ
ಕುತದ | ಮಡುಹರಿಯೆತರಹರಿಸಲಾರದೆ | ಪಡೆಮುರಿದುಒರಾತಿಬಲುಕಂಡನು
ಖಾತಿಯಲಿನಳನು ... ... ॥೨೭॥

ಕರವುಸಾರಥಿಗರುಹಿದನುಪು | ಷ್ಕರನಬಲುಕೈಮೀರಿಬರುತಿದೆ |
ತಿರುಹುತೇಜಿಮುನಿತ್ತಲಿವನಿರನೊರಸಿಬೆನ್ನಿನಲಿ ॥ ಕರುಳತೆಗೆವೆನುಯನುತ
ಚಾಪಕೆ | ತಿರುವನೇರಿಸಿಸರಳನಿಬಿಬೊ | ಬ್ಬಿರಿಯೆಧರೆತಲ್ಲಣಿಸಿತವನೀಪಾಲ
ಕೇಳೆಂದ ... ... ॥೨೮॥

ಮುರಿದಬಲನೇಹರಿಸಿಕೊಂಡುದು | ಮೊರೆವಕರಹಳಾರವದಸನ್ನೆ
ಯೊ | ಳುಗುಬಿತಾಬಲದೊಳಗೆಬೆರಸಿತುನಳನಪರಿವಾರ | ಅರಸನಾಸಮಯ
ದಲಿಹಊಡದ | ಸರಳಕೆನ್ನಿಗೆಸೇಬಿಡೆಕ | ತ್ತರಿಸಿಬಿಸುಟುದುರಿಪುನೃಪರಶಿರಗ
ಳನುಖಂಡಿಸುತ ... ... ॥೨೯॥

ಇಳೆಸರಳಮಯುವಾಯುಕೆಂಡದ | ಮಳೆಗರೆದುದೆನೆಪುಷ್ಕರನಬ
ಲ | ದೊಳಗೆಬಿದ್ದುದನೇಕರಿಪುನೃಪಸೈನ್ಯಸಾಗರವು ॥ ಮಲತವರಶಿರಗಳನು
ಖಂಡಿಸಿ | ತಲೆಯುಚೆಂಡಾಡಿದನುರಥಿಕರ | ಬಲುಗುದುರೆಕಾಲಾಳುನೆಗ್ಗಿತುನಳ
ನಶರಹತಿಗೆ ... ... ॥೩೦॥

ತೆರಹುಗೊಟ್ಟೆಳಹೊಗಿಸಿಸದನು | ಬರಸಿಡಿಲುಬಡಿದಂತೆರಿಪುಬ
ಲ | ಮುಗಿದುನಿಂದರುಘಾಯವಡೆದರುವೀರಪಟುಭಟರು ॥ ಹುರಿಯೊಡೆದು
ಮೈದೆಗೆದುಸಲಿಕೈ | ಮುರಿದುಕೈದುವಬಿಸುಟುಪಡೆಮುಖ | ದಿರುಹಲೆಚ್ಚನು
ಕೊಚ್ಚಿದನುಪುಷ್ಕರಚತುರ್ಬಲವ ... ... ॥೩೧॥

ಗಾಳಿಮುರಿದಾಕಿದರೆಘನಮೇ | ಘಾಳಿನಿಲುವ್ರುದೆನಿಷಧಪತಿಶರ |
ಜಾಲದಲಿಕಡಿವಡೆದುಬಿದ್ದರುರಾಯರಾವುತರು ॥ ಆಳುಮುರಿದುದುಕಂಡಮು
ಖದಲಿ | ಹೇಳಲೇನಪನವವಿಧಿಯನು | ಸೋಲದಲಿಮನಗುಂದಿಹಾಯ್ದರುಬಿ
ಟ್ಟಮಂಡೆಯಲಿ ... ... ॥೩೨॥

ಆರುಸಾವಿರತೇರುಹಯಹದಿ | ನಾರುಸಾವಿರಕರಿಗಳಪ್ಪ | ತ್ತಾ
ರುಸಾವಿರಶೂರಕಾಲಾಳೊಂದುಲಕ್ಷಬಲ ॥ ಸೇರಿತಂತಕಪುರಿಗೆಸರಳನ | ಸಾ

Digitized by ROJA MUTHIAH RESEARCH LIBRARY

ರದಲಿರಿಪುಸೇನೆಯೊಡೆದುದ | ನಾರುಬಲ್ಲರುವಿಕ್ಕ ಸೇನೆಯ ನರಸ ಕೇಳೆಂದ ||೩೩||

ಮರನ ಹುತ್ತವನೇರಿದರು ಸಂ | ಗರದಿ ಕೈದುವನಿಳುಹಿ ಸಲೆ ವೈ |
ಮರದು ತೇಜಿಯನಿಳಿದು ರಾವುತ್ತರುಗಳೊರಳಿಸಲಜೆನುತ || ಕರವ ಮುಗಿದರು ಜೋ
ಧರರುಕ್ಕೈ | ಮರದು ಕಣನಲಿ ನೊಂದೊರಲಿತಗ | ಹರಿಸಿಬಾಯಿಲಿ ಬೆರಳನಿಟ್ಟು
ದುವೈರಿಪಾಯದಳ ... ... ||೩೪||

ಮುರಿದು ಬರುತಿದೆ ಜೇಯಬಲಸಿಲ | ಲರಿದು ನಮ್ಮದು ನಳನೃಪಾಲ
ನ | ಶರಹತಿಗೆ ನೆರೆ ಮುಗ್ಗಿ ಕೆಡದುದು ತಾರು ಧಟ್ಟನಲಿ || ಶರಹರವನಾ ಕಾಣೆ
ನೀವೋ | ಹರಕೆಗತಿಯೇನೆನಲು ಪುಷ್ಕರ | ಭರದ ಕೋಪದೊಳೆಂದು ಕರಸಿ
ದನಾಗ ಸಿಜಬಲವ ... ... ||೩೫||

ಅರಸ ಕೇಳರಮನೆಗೆ ಬಂದನು | ಪುರಾಂತರದಕ್ಕದ ಗಳತರಿಸಿಯು |
ಧುರಪಿಜಯರಿಗೆ ಕರಸಿ ಕೊಟ್ಟನು ಚಾಪವರ್ಣವ || ಕರಿತುರಗ ಕಾಲಾಳುನೆ
ರದುದು | ಪೊರೆವವಾದ್ಯದ ಭಸದಲಿ ಸಂ | ಗರಕೆ ಪಯಣವ ಮಾಡುತಿರ್ದನು
ನೃಪತಿ ಕೇಳೆಂದ ... ... ||೩೬||

ನಗುತ ನಿಂದನು ನಿಷಧಪತಿ ಕಾ | ಳಗದಿ ಹಿಡಿಸಿದ ಗೌರಗೆ ಹಳೆಯು |
ವಿಗಡ ಪುಷ್ಕರ ಕೇಳ ಕೋಪಾಗ್ನಿಯ ಲಿಖಿತವನಗಿ || ಹಗೆಗಳ ಜಯವಾಯಿತ್ತೆಂದಿ
ನಲಿತಾ | ಹೋಗುವೆನ ಹಿತರಪುರಿವೆನೆನೆ ಕೈ | ಮುಗಿದು ಬಿನ್ನೈಸಿದನು ವರಮಂ
ತ್ರೀಶ ಪುಷ್ಕರಗೆ ... ... ||೩೭||

ಅರಿಭಯಂಕರ ನೈಷಧನ ಸಂ | ಗರದಿ ಗೆಲುವವರಾರು ದೇವಾ |
ಸುರರು ನಿಲಲರಿದರಸ ನಿಕ್ಕಿ ನನರರ ಪಾಡೇನು | ಮರುಳುತನ ಬೇಡಿನ್ನು ನೃಪನ
ನು | ಕರಸಿ ಸಂಧಿಯ ಮಾಡಿ ಜೂಜಿನ | ಪರಮ ಪಂಥದಿ ಗೆಲುವುದು ಚೆಲುವಿದೆಂದ
ನಾ ಮಂತ್ರಿ ... ... ||೩೮||

ವೀರಸೇನನ ತನಯ ನಿಷಧನ | ನೇರಿ ಹಳು ಜಯಲಕ್ಷ್ಮಿ ಸೇನಾ |
ಭಾರದಲಿರುತು ಪರ್ಣ ಚೈತ್ರ ವಿದರ್ಭ ಮೊದಲಾದ || ಭೂರಿ ನೃಪರೋಲೈಸುತಿದೆ
ಸರಿ | ಯಾರು ಸಂಗ್ರಾಮದಲಿ ನಳನಲಿ | ವಿಾರಿ ಕೈ ಮಾಡಿದರೆ ತಪ್ಪದು ಮರಣ
ನಿನಗೆಂದ ... ... ||೩೯||

ಎನಲು ಕೇಳ್ದು ಪ್ರಾತಿನಲಿ ಬಂ | ದನು ನಳನ ಕಂಡನು ಮಹೀಪತಿ | ಯನ
ಗನಿನ್ನ ಮಲಿಕದನ ನೇತ ಕೆಸಾ ಕದಂತಿರಲಿ || ಜನಪತಿಗಳೀಕ್ಷಿಸಲಿ ಮರುಜೂ | ಜಿನ
ಲಿನಿಪ್ರ ಣಗುನೀವುನಿನ್ನ ಮಲಿ | ಮನಕೆ ಹರುಷಕೆ ವಾಗಲಾಡುವೆನೆಂದ ಸವನ ಗೋತ್ರ||೪೦||



ಎಲೆ ಪ್ರೋಕೇಳ ನಾಡದಡಗಲಿ | ಕಲಹಕಂಜುವೆನೀನು ಜೂಜಿನ | ಸ್ಥಿ
ಳಕೆಯಲಿ ಬಲ್ಲಿದನು ನಮ್ಮನು ಕರದೆ ತಪ್ಪೇನು || ಕಲಹವಾಗಲಿ ಜೂಜನಾಗಲಿ |
ಗೆಲುವೆ ನಿನ್ನನು ಕಸಬಹೃದಯದ | ಸೆಲೆಯ ಬಲ್ಲನು ನಿನಗೆ ಮನವ್ರೊಲಿಸು ದನುವಾ
ಡೆಂದ ... ... ... ||೪೧||

ಅರಸ ಕೇಳಾ ಪುಷ್ಕರನು ತೆ | ನ್ನರವ ನೆಗೆ ಕರತಂದ ಸಾಕಲಿ | ಪ್ರ
ರುಷನಿಂದಲಿ ಮುನ್ನ ಗೆಲಿದ ಪ್ಪಳಕೆಯಲಿ ನೃಪನ || ಪಿರಿದು ಶಾಗಲ ಬಲ್ಲನೆಂದಾ |
ಪರನು ಕರಸಿದ ನೋಲಗ ಬಿಕು | ಳ್ಳರಲು ತಂದರು ಸಾರಿಗಳ ಸಿಲಿಸಿದರು ಸಂವ
ಖದಿ ... ... ||೪೨||

ನಳನೃಪತಿ ನೀಗೆಲಿವೆ ಒಡಿಭಾ | ಉಲಸೆಯ ನುತ ಬಿಡುವೆ ಸೋತರೆ |
ಬಳಿಕ ವಮಯಂತಿಯನು ನಾ ನಿನಗೊಪ್ಪಿಸುವುದೆಂದೆನಲು || ಇಳೆಯೊಳ ಹಬ್ಬೂ
ರುಹವಹೃದಯದ | ನೆಲೆಯ ಬಲ್ಲಗ್ಗಳಕೆಯಲಿ ತಾ | ಗೆಲುವೆನೆಂದೊಪ್ಪಿದನು ಮ
ನವಲಿ ಧೈರ್ಯಪರನಾಗಿ ... ... ||೪೩||

ಹೂಡಿದರು ಸಾರಿಗಳ ಲತ್ತವ | ನಾಡಿದರು ಮನ ಪ್ರೊಲಿದು ಪಾಡಾ
ಖಾಡಿಯಲಿ ಮಗೆ ಭಾರಯಿಂಪಿತ್ತಿಗೆಯಂಟ ಹರುಷದಲಿ || ಬೇಡಿದರೆ ಬೀಳುವದು ದಾ
ಯಾದ | ರೂಢಿಗೆ ಝಳಪಿಸಿ ಹೊಳೆವ ಡಾಳದ | ರೂಢಿಗಚ್ಚರಿಯಾಗೆ ನಳನೃಪ ಗೆಲಿದು
ಬೊಬ್ಬಿರಿದ ... ... ||೪೪||

ಬಿನ್ನನಾದನು ಪುಷ್ಕರನು ಹರು | ಷೋನ್ನತಿಯ ಬೀಳ್ಕೊಂಡಲು ಗು
ಣಸಂ | ಪನ್ನನೇರಿದ ರತ್ನಸಿಂಹಾಸನವ ನಳನೃಪತಿ || ಪನ್ನಗಾರಿಧ್ವಜನ ಕೃಪೆ
ಯಿಂ | ನಿನ್ನ ಸಿದ್ಧಿಸಲೆಂದು ಮುನಿಜನ | ರುನ್ನತದಿ ಕೊಂಡಾಡಿ ಹರಸಿದರಲ್ಲಿ ಧರ
ಣಿಪನ ... ... ||೪೫||

ದೇವದುಂದುಭಿ ಮೊಳಗಿದವು ದಿವಿ | ಜಾವಳಿಗಳಥ ಸಂಧಿಸಿ |
ಹೂವಿನಲಿ ಮಳೆಗರೆದರಾಗ ನೃಪಾಲನಂಗದಲಿ || ಕೋವಿದರು ಸುಜನಾವನೀಶರು |
ಸೇರಿರಲು ಧರೆಯಲಿ ಯೆ ನೃಪರಾ | ಜೀವಲೋಚನನಂತೆ ಸಿಂಹಾಸನದಿ ರಂಜಿಸಿದ ||

ಬಂದು ಕಂಡರು ಪುರಜನರು ನಲ | ವಿಂದ ಕಾಣಿಕೆ ಗೊಟ್ಟ ಸುರಕಾಲ |
ವೃಂದನಲಿಯುತು ಮಂತ್ರಿ ಬಾಂಧವರೆಲ್ಲ ಕೈಮುಗಿದು | ವಂದಿಸುತ ಕಾಳ್ಪರಲು ಸ
ತಿಯರು | ತಂದರಾರತಿಗಳನು ನೃಪವರ | ವಿಂದಮುಖಿಯರು ಹರುಷದಿಂದೆತ್ತಿ
ದರು ಮಾನವಲಿದು ... ... ||೪೬||

ನೀವ ಹಿಂದೆ ಪುಷ್ಕರನ ಮನ | ಕಲಿದು ಮನ್ನಿಸಿ ಕರೆದು ನೃಪ

ಕಲಿಪುರುಷನಿಂದಾದುದುಪಹತಿನಿನ್ನತಪ್ಪೇನು ॥ ಹಲವು ಹಂಬಲಿಸದಿರು ನಿನ್ನಲಿ ।
ಛಲವಿನಿತು ನಮಗಿಲ್ಲ ಮುನ್ನಿನ । ನಿಳೆಯ ಪಾಲಿಸು ನಮ್ಮನೀ ಸೋಗಿಸು ಹೋ
ಗೆಂದ ... ... ॥೪೮॥

ಎನಲು ಲಜ್ಜಿತನಾಗಿ ಪುಷ್ಕರ । ವಿನಯವಲಿತಾಸರಗ ನಿಮ್ಮಡಿ ।
ಪನಜಡೆಡೆಗಪರಾಧಿಯಾದೆನಗಾವಗತಿಯಹುದೊ ॥ ಜನಪ ಸಕಲಧರ್ಮಜ್ಞ ಸೇನು
ಸ । ಜ್ಞಾನಶಿರೋಮಣಿ ನೀನು ಗುಣಿ ಹೇ । ನನನು ಕೃಪೆಯಲಿ ರಕ್ಷಿಸೆಂದೆರಗಿದನು
ಪದಯುಗಕೆ ... ... ॥೪೯॥

ತನುವ ಸ್ನೆಗೆಡದವನನೆಬ್ಬಿಸಿ । ಜನಪ ಸಂದನು ಪೂರ್ವಫಲಸಂ ।
ಜನಿಸಿತಿದಕಿನ್ನಾರು ಮಾಡುವದೇನು ಯತ್ನಾತನ ॥ ವಿನಯವಚನಕೆ ಮೆಚ್ಚಿ ಕೊ
ಟ್ಟನು । ಕನಕಮಣಿಭೂಷಣಗಳನ್ನೇಕಂ । ಚನವರೂಥವನಿತ್ತು ಮನ್ನಿಸಿ ಕಳು
ಹಿದನು ಮನೆಗೆ ... ... ॥೫೦॥

ಕರಸಿದನು ಬಾಂಧವರ ಮಂತ್ರೀ । ಶ್ವರರ ವಿದ್ವಾಂಸರ ನೃಪಾಲರ ।
ಕರಣಿಕರನಾಪ್ತರನು ಹಿರಿಯರ ವೀರಪಟುಭಟರ ॥ ಪರಸಚಿವ ಸಾಮಂತಮಲ್ಲರ ।
ತರುಣಿಯರ ನಟಗಾಯಕರ ಸುಜ । ನರಿಗೆ ಮನ್ನಿಸಿ ಕೊಟ್ಟ ಸುಡುಗೆ ತೊಡಿಗೆಗಳ ಪಾ
ಹೀಪಾಲ ... ... ॥೫೧॥

ಕನಕರತ್ನ ಪ್ರಭೆಯ ಸಿಂಹಾ । ಸನದೊಳೊಪ್ಪಿದನುಭಯಪಾರ್ಶ್ವದಿ ।
ವನಿತೆಯರು ಚಮ್ಮಿಮದರು ಶಿತಚಾಮರವ ನೃಪಗೆ ॥ ಜನಪತಿಗಳಕ್ಕಿ ಉದವ ಮಂ
ತ್ರೀ । ಜನಪುರೋಹಿತ ವಲ್ಲಗಾಯಕ । ವನಿತೆಯರ ಗಡಣದಲಿ ಮೆರೆದನು ನೃಪ
ತಿಯಾಸ್ಥಾನ ... ... ॥೫೨॥

ಚಿಂತೆ ಬಲಿದು ನಿದರ್ಘದಲಿ ದಮ । ಯಂತಿ ಕಳದಿಯರೊಡನೆ ನಾಡಿಪಳು ।
ಪಂಥವಳಿ ಪುಷ್ಕರನ ಗೆಲಿದನೆ ಸೋತನೊ ನೃಪತಿ ॥ ಕಂತುಪಿತ ಸರ್ವಾವಲೋ
ಕನ । ಪಂಶಿಹುದೋ ಕನ ಗೆಂಬ ಸವಿಯದ । ಲಂತರಿಸಲ್ಕೆ ಕೆಂಪಲ್ಲಿ ನಳನ ವಾ
ರ್ತೆಗಳು ... ... ॥೫೩॥

ತಾಯೆ ಬಿನ್ನಹವಿಂದು ನಿಮ್ಮಯ । ರಾಯನಿಷ್ಟ ನಿಮ್ಮ ಬಗೆಗನಿ ।
ರಾಯಸದಿ ಪುಷ್ಕರನ ಗೆಲಿದನು ಸಕಲರಾಜ್ಯವನು ॥ ನ್ಯಾಯದಲಿ ಕೈಕೊಂಡು
ನಿಮ್ಮನು । ಪ್ರಿಯಸಿಂಬಾರ ಹೇಳದನು ಕರು । ಲಯತಾಂಬಿಕಿ ಬಿಜಯ ಮಾ
ಡೆಂದೆರಗಿದರು ಪದಕೆ ... ... ॥೫೪॥

ಕೇಳಿ ಹರುಷಿತೆಯಾದಳವರಿಗೆ । ಪಾಲಿಸಿದಳಾಭರಣವಸ್ತ್ರವ



ಲೋಲಲೋಚನೆ ಬಂದು ತಂದೆಗೆ ನಮಿಸಿ ವಿನಯದಲಿ ॥ ಸಾಳಿಸಯಾನಪಮಾಪಿನಿ
ಷಧನೃ । ಪಾಲನಲ್ಲಿಗೆ ತನ್ನ ಕಳುಹೆನೆ । ಬಾಲಕಿಯನುಡಿಕೇಳುತ ದಪ್ಪಿದನು ಭೀ
ಮನೃಪ ... ... ॥೫೫॥

ತೆಗಸಿದನು ಭಂಡಾರದಲಿ ಬಗೆ । ಬಗೆಯ ವಸ್ತ್ರ ವಸುಭಟರಿಗೆ ಖಗ ।
ರ್ಘಾ ಪಹೆ ಸನ್ನಾಯುಧವನವರತ್ನಗಳ ತೊಡಿಗೆಗಳ ॥ ಸುಗುಣೆಯರು ಮೊದ
ಲಾದ ಪರಿವಾ । ರಗಳಿಗಿತ್ತನು ಪಯಣದಲಿ ತೇ । ರಗಳ ಶೃಂಗರಿಸಿದರು ಜರುಪಿ
ನ ಸಂಧಗಳನೆಗಹಿ ... ... ॥೫೬॥

ಬಿಗುಹ ನೇರಿಸಿ ಹಯಗಳನು ಗಂ । ಜಗಳ ಚಂಪಿಮ್ಮದರಾನೆಯಾಲಿಸ ।
ತ್ತಿಗೆಗಳನು ಪಲ್ಲೈಸಿದರು ಮೇಲಿಸಿವ ಕಲುಪದಲಿ ॥ ಸೊಗಸು ದೋರುವ ಭಟ
ರನೆರೆಕ್ಕೆ । ದುಗಳ ಸೋಹಿ ನೃಪರ ಬಳಿಯಲಿ । ನೆಗಹಿ ಬೀಸುವ ಚಾಮರಿಗಳ
ಸಂಭ್ರಮದೊಳೊದಾದವು ... ... ॥೫೭॥

ಮಣಿರಥಂಗಳನಡುವೆ ಸುಕವಂ । ದೆಣದರಾಯ ರಮಧ್ಯದಲಿ ಯು
ರ । ಪಶುವಮತ್ತಗಜಂಗಳಲಿ ಮಾವುತರ ಕಳಕಳದ ॥ ಕುಣಿವ ತೇಜಿಯರಾವುತರ
ನು । ದಣಿಗಳಲಿ ಚತುರಂಗಬಲವಿ । ಟ್ಟಣಿಸಿ ನಡೆ ಮಾಮಸಲು ಸತ್ತಿಗೆಗಳ ವಿ
ಡಾಯಿಯಲಿ ... ... ॥೫೮॥

ನಾರಿಯರ ಸಂದಣಿಯ ನೆರೆದುದು । ತೇರಿನಲಿ ಕೋಲಂದಣದಿ ಕೆಲ ।
ರೇರಿ ಬರುವ ಚೌಳಿಗ ಪಂಜರದ ಗದ್ದುಗೆಯ ॥ ಸೇರಿ ನಡೆದರು ಮುಂದೆ ಭೇರಿಗಳ
ಭೇರಿಯ ರವದ ವಾದ್ಯವು । ಭೋರಿಡಲು ಹೊರವಂಟ ಳಂಗನೆ ಸಕಲ ವಿಭವ
ದಲಿ ... ... ॥೫೯॥

ಬಂದಳಾ ದಮಯಂತಿ ದೇವಪು । ರಂದರಕ್ತಿ ಸಯನೊ ತನ್ನಯ ।
ನಂದನರು ಸಹಿ ತೇರಿಳು ಮಾಣವಾಯಪರೂಥ ನೂ ॥ ಹಿಂದೆ ಮುಂದಿಕ್ಕೆಲದ ನಾ
ರೀ । ವೃಂದ ನಡೆಯಲು ಮಾನವರ ಹರುಷಾ । ಸಂದಲಿ ನಡೆತಂದು ಹೊಕ್ಕಳು ನಿಷ
ಧಪಟ್ಟಣವ ... ... ॥೬೦॥

ನೋಡುತಿರ್ದರು ಪುರಜನರು ಸೆಲೆ । ಮಾಡುಪ್ಪರಿಗೆಯಲಿ ಮಿಗೆ ಕೆ
ರಾ । ಪಾಡ ತೆತ್ತೆಯ ಸೌಧಗಳ ಪಂಧ್ರ ಶಿಖರದಲಿ ॥ ನೋಡುವರ ತಾ ನೋಡಿ
ನಸುನಗು । ತಾಡುವರ ನೃತ್ಯದಲಿ ಗಾನವ । ಪಾಡುವರ ಕಂಡಲ್ಲಿ ನಲಿದುತ್ಸಾಹದ
ಳರಮನೆಗೆ ... ... ॥೬೧॥

ಬಾಗಿಲಲಿ ರಥವಿಳಿಯೆ ಸತಿಗೆಸ । ರಾಗದಿಂದ ಪುರಾಂಗನೆಯರು ।

ಹೊಯ್ಗಿಸಿದಶಾಂತಿಯನೆತ್ತಿದರಧಿಕವಿಭವದಲಿ ॥ ಭೋಗಿಶಯನನ ಕರುಣನಿನ
ಗಂ | ಟಾಗಿಸುಖಿಯಾಗೆಂದುಹರಸಿದ | ರಾಗಮುನಿನಿಕುರುಂಬಪಕ್ಷ್ಮತೆತಳೆದ
ಗಗನೆಗೆ ... ... ॥೬೨॥

ಹರಕೆಗಳಕೈಗೊಳುತಸತಿಬಂ | ದರಮನೆಯಹೊಕ್ಕಳುನೃಪಾಲನ |
ಚರಣಕಮಲಕೆನಮಿಸಿಪಡದಳುಪತಿಯಚಿತ್ತವನು ॥ ಅರಸಕೇಳೈನಿಷಧಪತಿನಿ
ಜ | ತರುಣಿಸುತರೊಡಗೂಡಿಮಂಗಳ | ಕರದೊಳೊಪ್ಪಿದಸಕಲದೇವಾಮರ
ತುಂಬಲಿವಾಡೆ ... ... ॥೬೩॥

ಪರಮಪುಣ್ಯೋದಯನುಸದ್ಗುಣಿ | ಚರಿತಸತ್ಯಸುಭಾಷಿತನು ಸಂ |
ಗರವಿಜಯ್ಯರನುನಿತ್ಯನಿರ್ಮಲನಿಗಮಕೋವಿದನು ॥ ಅರಸುಕುಲಪಾಲಕನುನಳ
ಭೂಪ | ವರನುಸಿಂಹಾಸನದಿರಂಜಿಸಿ | ಧರೆಯನಾಳ್ದಪರಪುರದಚೆನ್ನಿಗನಕ
ರುಣದಲಿ ... ... ॥೬೪॥

ಮುನಿಕುಲಾಂಬುಧಿಚಂದ್ರರೋಮಶ | ಮುನಿಪವಿಸ್ತರಿಸಿದನುನಳ
ಭೂಪ | ಪನಚರಿತ್ರೆಯಕೇಳಿತಲೆದೂಗಿದನುಯಮಸೂನು ॥ ಮನಕೆಹರುಷಾ
ನಂದವಾಯಿತ್ತಲೆ | ಮುನಿಪನಿಮ್ಮಡಿಕರುಣದಲಿಯಿಂ | ದೆನಗೆಫಲಿಸಿತುಪುಣ್ಯ
ವಂದೆರಗಿದನುಚರಣದಲಿ ... ... ॥೬೫॥

ದೇವಮುನಿಗಳುಸೇವ್ಯನಮ್ಮನು | ಪಾವನವಮಾಡಿದಿರಿನಮಗಿ |
ನ್ನಾವುದರಿಮರಿಟ್ಟಮಾಸಾರ್ಥನರಿದಹರೇನರಿಯೆ ॥ ಆವಿವರಯನಗಿನ್ನುತಿಳಿ
ಯೆನೆ | ದೇವನಗರಿಯೊಳುತ್ರಸಲಿ | ಗಾಂಡೀವಿಸುಸ್ಥಿರನರಸಚಿಂತಿಸಬೇ
ಡನಿಂತೆಂದ ... ... ॥೬೬॥

ಎಲೆಯುಧಿಷ್ಠಿರಕೇಳುಲೋಕದ | ಲಲನೆಯರಪರಿಯಲ್ಲನಾಲ್ವರು |
ಚಲುವೆಯರುಗುಣಶೀಲಸಂಪನ್ನೆಯರುಚದುರೆಯರು ॥ ನಳನಮುಖಿದಮಯಂ
ತಿಸೀತಾ | ಲಲಿತದ್ರೌಪದಿಚಂದ್ರಮತಿಕೋ | ಮಲೆಯರಿವರಚಬ್ಬುತನವೆ
ಚ್ಚನರಾಜವನಿತೆಯರು ... ... ॥೬೭॥

ನಿನಗೆಪಟ್ಟದಮಹಿಳೆದ್ರೌಪದಿ | ವನಿತೆಯಿರೆಸಾಮ್ರಾಜ್ಯಸಂಪದ |
ವಿನಿತುಸತಿಯಿಂದಾಗುವಮಕಾವ್ಯಗಳುಸಿದ್ಧಿಪ್ರದು ॥ ಜನಪಚಿಂತಿಸಬೇಡನಾ
ಳಿವ | ದಿನದಿಬಹನಿನ್ನನುಜನರ್ಜುನ | ವನದಚಿಂತೆಯಬೀಳುಗೊಡುಸು
ಖಿಯಾಗೆನೀನೆಂದ ... ... ॥೬೮॥

ಹರನುನಿಮಗೆಸಹಾಯದೇವಾ | ಸುರರುನಿಮಗೊಳ್ಳಿದರುಲಕ್ಷ್ಮೀ |



ವರನುನಿಮಗಿನ್ನಂತರಂಗದಪರಮಸಖನಿರಲು ॥ ಮರುಗುವರೆಮನದೊಳಗೆಕೇ
ಳಿರೆ | ಧರಣಿಪತಿಸಾಕಿನ್ನುರಾಜ್ಯದ | ಸಿರಿನಿಮಗೆಬಂದಪ್ಪುದರಿಪುಸಂಹಾರವ
ಹುದೆಂದ ... ... ॥೬೯॥

ಎಂದುಬುದ್ಧಿಯಪೇಳಿಮುನಿಯಾವ | ನಂದನನಬೀಳ್ಕೊಂಡುತಾಪ
ಸ | ವೃಂದಸಹಿತಲ್ಲಿಂದಹೊರಮಟನುನಿಜಾಶ್ರಮಕೆ ॥ ಅಂದುಯಮಳರು
ದ್ರೌಪದಿ | ಸಂದಮುನಿಜನಸಹಿತಯಮಸುತ | ಬಂದುಹೊಕ್ಕನು
ಪರ್ಣಶಾಲೆಯನಧಿಕಹರುಷದಲಿ ... ... ॥೭೦॥

ಈಕಥೆಯನಾಲಿಸುವಸುಜನರ | ನೇಕಸುಖಸಾಮ್ರಾಜ್ಯಪದವಿ
ಯ | ನಾಕಮಲಲೋಚನನುಪರಪುರದರಸಪಾಲಿಸುವ ॥ ಲೋಕಪಾವನನಳ
ನಕಥೆಯನಿ | ರಾಕರಿಸಿದವರಧಿಕನರಕದ | ಲೋಕವಾಳುವರೆಂದುರೋಮಶ
ನುಡಿದನರಸಂಗೆ ... ... ॥೭೧॥

ಮೇದಿನಿಯೊಳೀಪುಣ್ಯಚರಿತೆಯ | ನಾದರಿಸಿಬರೆದೋದಿಕೇಳುವ |
ಸಾಧುಸಜ್ಜನರಾದವರಿಗಹುದಖಿಳಕೈವಲ್ಯ ॥ ವೇದಗೋಚರಕೃಷ್ಣಪರಪುರ
ದಾದಿಕೇಶವನಮರವಂದಿತ | ಆದಿನಾರಾಯಣನುಸಲಹುವಸಕಲಸಜ್ಜನರ॥೭೨॥

ಅಂತು ಸಂಧಿ ಒಂಭತ್ತಕ್ಕೆ ಪದ ೪೮೧ ಕ್ಕೆ ಮಂಗಳಮಸ್ತು.

ನಳಚರಿತ್ರ ಸಂಪೂರ್ಣಂ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪುಸ್ತಕಸೂಚಿ

ವ. ಸಂ: O, 33, 181 KAH M93

ಕ್ರ. ಸಂ: 34

ಲೇಖಕ: ಕನಕದಾಸ ( )

ನಳಚರಿತ್ರೆ.

ವ. ಸಂ: O, 33, 181 KAH M93

ಕ್ರ. ಸಂ: 34

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY